ಶುಕ್ರವಾರ ಮೇ 1 2026 ₹ 7.00 • www.prajavani.net

ಪ್ರಜಾ

ಅತ್ಯಂತ ವಿಶ್ವಾರ್ಹ ಕನ್ನಡ ದಿನ ಪ

ವಿಶ್ವ ಕಾರ್ಮಿಕ ದಿನದ ಶುಭಾಶಯಗಳು

'ಸಿ.ಎಂ ಬದಲಾವಣೆ ಸದ್ಯಕ್ಕಿಲ್ಲ'

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸುಳಿವು

ಪ್ರಜಾವಾಣಿ ವಾರ್ತೆ

ಕಲಬುರಗಿ: 'ರಾಜ್ಯದಲ್ಲಿ ಸದ್ಯ ಮುಖ್ಯಮಂತ್ರಿ ಇದ್ದಾರೆ. ಹೀಗಾಗಿ ನಾನು ಮುಖ್ಯಮಂತ್ರಿಯಾಗುವ ಪ್ರಶ್ನೆಯೇ ಉದ್ಭವಿಸಲ್ಲ' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದರು.

'ಮಲ್ಲಿಕಾರ್ಜುನ ಖರ್ಗೆಯವರು ಮುಖ್ಯಮಂತ್ರಿ ಆಗುವುದಾದರೆ ಸ್ವಾಗತಿಸುತ್ತೇನೆ' ಎಂಬ ಗೃಹ ಸಚಿವ ಪರಮೇಶ್ವರ ಅವರ ಹೇಳಿಕೆ ಕುರಿತು ಸುದ್ದಿಗಾರರು ಗುರುವಾರ ಕೇಳಿದ ಪ್ರಶ್ನೆಗೆ ಅವರು ಈ ರೀತಿ ಪ್ರತಿಕ್ರಿಯಿಸಿದರು.

ಮೇ 4ರಂದು ಪ್ರಕಟಗೊಳ್ಳಲಿರುವ ವಿಧಾನಸಭೆ ಚುನಾವಣೆ ಫಲಿತಾಂಶದ ಬಳಿಕ ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆ ಆಗಲಿದೆ ಎಂಬ ಚರ್ಚೆಯ ಬೆನ್ನಲ್ಲೇ ಕಾಂಗ್ರೆಸ್ ಪರಿಷ್ಠರಾದ ಖರ್ಗೆ ಅವರು ನೀಡಿರುವ ಈ ಹೇಳಿಕೆ ಮಹತ್ವ ಪಡೆದು ಕೊಂಡಿದೆ. ಏನ್ನದಿನವಾದ ಮೇ 15ರಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿ ಆಗಲಿದ್ದಾರೆ ಎಂದು ಬೆಂಬಲಿಗರು ಒಂದೆಡೆ ಹೇಳಿಕೆ ನೀಡುತ್ತಿದ್ದರೆ, ಇನ್ನೊಂದೆಡೆ ದಲಿತ ಮುಖ್ಯಮಂತ್ರಿಯ ಕೂಗು ಮತ್ತೆ ಪ್ರತಿಧ್ವನಿಸುತ್ತಿದೆ.

11



ಮಲ್ಲಿಕಾರ್ಜುನ ಖರ್ಗೆ

> ರಾಜಕೀಯದಲ್ಲಿ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಇರುವಷ್ಟು ಹಿರಿತನ ಇದ್ದಿದ್ದರೆ ಸಿದ್ದರಾಮಯ್ಯ ರೀತಿ ನಾನು ಕೂಡ ಎರಡು ಬಾರಿ ಮುಖ್ಯಮಂತ್ರಿ ಆಗಿಬಿಡುತ್ತಿದ್ದೆ. ಆದರೆ, ಕೇಳುವ ಧೈರ್ಯವೇ ಇಲ್ಲದ ಖರ್ಗೆ ಇನ್ನು ಮುಖ್ಯಮಂತ್ರಿ ಹೇಗೆ ಆಗುತ್ತಾರೆ ?
>
> **ಛಲವಾದಿ ನಾರಾಯಣಸ್ವಾಮಿ,** ವಿಧಾನಪರಿಷತ್ ವಿಪಕ್ಷನಾಯಕ

'ಖರ್ಗೆ ಸಾಹೇಬರು ಸಿ.ಎಂ ಆದರೆ ಸಂತೋಷ'

ಚಿತ್ರದುರ್ಗ: 'ಮಲ್ಲಿಕಾರ್ಜುನ ಖರ್ಗೆ ಸಾಹೇಬರು ಮುಖ್ಯಮಂತ್ರಿಯಾದರೆ ಸಂತೋಷಪಡುತ್ತೇವೆ. ಅಂತಿಮವಾಗಿ ಹೈಕಮಾಂಡ್ ಏನು ತೀರ್ಮಾನ ಕೈಗೊಳ್ಳುತ್ತದೆಯೋ ಅದಕ್ಕೆ ನಾವೆಲ್ಲರೂ ಬದ್ಧರಾಗಿ ಇರುತ್ತೇವೆ' ಎಂದು ಸಚಿವ ಶಿವರಾಜ ತಂಗಡಗಿ ಹೇಳಿದರು.

11

ಖರ್ಗೆ ಅವರಿಗೆ ಅರ್ಹತೆ ಇಲ್ಲವೇ?

ಚಿತ್ರದುರ್ಗ: 'ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು 6 ದಶಕಗಳಿಂದ ಆ ಪಕ್ಷಕ್ಕೆ ಸೇವೆ ಸಲ್ಲಿಸಿದ್ದಾರೆ. ಮುಖ್ಯಮಂತ್ರಿಯಾಗುವ ಅರ್ಹತೆ ಅವರಿಗೆ ಇಲ್ಲವೇ' ಎಂದು ಸಂಸದ ಗೋವಿಂದ ಕಾರಜೋಳ ಪ್ರಶ್ನಿಸಿದರು.

11

ಖರ್ಗೆ ಸಿ.ಎಂ ಆಗಲಿ: ಪರಮೇಶ್ವರ

ಬೆಂಗಳೂರು: 'ಮಲ್ಲಿಕಾರ್ಜುನ ಖರ್ಗೆಯವರು ಹಿರಿಯರು. ಅವರು ಮುಖ್ಯಮಂತ್ರಿಯಾದರೆ ಅವರ 50 ವರ್ಷಗಳ ಸಾಧನೆಗೊಂದು ಅರ್ಥ ಬರುತ್ತದೆ. ಅವರನ್ನು ಯಾರೂ ಪ್ರಶ್ನೆ ಮಾಡುವುದಿಲ್ಲ' ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು. ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಖರ್ಗೆಯವರು ಮುಖ್ಯಮಂತ್ರಿಯಾಗಲಿ ಎನ್ನುವುದು ನಮ್ಮ ಭಾವನೆ' ಎಂದರು.

11

10ನೇ ತರಗತಿ ಶೇ 99.18ರಷ್ಟು ಪಾಸ್

ನವದೆಹಲಿ (ಪಿಟಿಐ): 'ಕೌನ್ಸಿಲ್ ಫಾರ್ ದಿ ಇಂಡಿಯನ್ ಸ್ಕೂಲ್ ಸರ್ಟಿಫಿಕೇಟ್ ಎಕ್ಸಾಮಿನೇಷನ್' (ಸಿಐಎಸ್‌ಸಿಇ) 10ಮತ್ತು 12ನೇ ತರಗತಿ ಪರೀಕ್ಷಾ ಫಲಿತಾಂಶವನ್ನು ಗುರುವಾರ ಪ್ರಕಟಿಸಿದ್ದು ಕ್ರಮವಾಗಿ ಶೇ 99.18 ಮತ್ತು ಶೇ 99.13ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಎರಡೂ ಪರೀಕ್ಷೆಗಳಲ್ಲಿ ಬಾಲಕಿಯರು ಮೇಲುಗೈ ಸಾಧಿಸಿದ್ದಾರೆ.

10ನೇ ತರಗತಿ (ಐಸಿಎಸ್‌ಇ) ಪರೀಕ್ಷೆ ಬರೆದ 2,58,721 ಅಭ್ಯರ್ಥಿಗಳ ಪೈಕಿ 2,56,590 ವಿದ್ಯಾರ್ಥಿಗಳು ಹಾಗೂ 12ನೇ ತರಗತಿ (ಐಎಸ್‌ಸಿ) ಪರೀಕ್ಷೆ ಬರೆದ 1,03,316 ಅಭ್ಯರ್ಥಿಗಳ ಪೈಕಿ 1,02,414 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ.

ಇನ್ನೊಂದುಸುದ್ದಿ 5

10ನೇ ತರಗತಿ ಫಲಿತಾಂಶದಲ್ಲಿ ಪಾಸಾದ ಗುರುಗ್ರಾಮದ ವಿದ್ಯಾರ್ಥಿನಿಯರು ಸಂತಸ ಹಂಚಿಕೊಂಡರು ಪಿಟಿಐ ಚಿತ್ರ

ಬಾಲಕಿಯರು ಮೇಲುಗೈ

ಎರಡೂ ಪರೀಕ್ಷೆಗಳಲ್ಲಿ ಬಾಲಕರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಬಾಲಕಿಯರು ಪಾಸಾಗಿದ್ದಾರೆ. 10ನೇ ತರಗತಿಯಲ್ಲಿ ಶೇ 99.46ರಷ್ಟು ಬಾಲಕಿಯರು ಮತ್ತು ಶೇ 98.93ರಷ್ಟು ಬಾಲಕರು ಹಾಗೂ 12ನೇ ತರಗತಿಯಲ್ಲಿ ಶೇ 99.48ರಷ್ಟು ಬಾಲಕಿಯರು ಮತ್ತು ಶೇ 98.81ರಷ್ಟು ಬಾಲಕರು ತೇರ್ಗಡೆ ಹೊಂದಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಪ್ರವರ್ಗವಾರು ಫಲಿತಾಂಶ

10ನೇ ತರಗತಿಯಲ್ಲಿ ಸಾಮಾನ್ಯ ಪ್ರವರ್ಗದ ಶೇ 99.26, ಇತರ ಹಿಂದುಳಿದ ವರ್ಗದ ಶೇ 99.24, ಎಸ್‌ಸಿ ಶೇ 98.07, ಎಸ್‌ಟಿ ಶೇ 98.76ರಷ್ಟು ವಿದ್ಯಾರ್ಥಿಗಳು ಪಾಸಾಗಿದ್ದಾರೆ. 12ನೇ ತರಗತಿಯಲ್ಲಿ ಸಾಮಾನ್ಯ ಪ್ರವರ್ಗದ ಶೇ 99.17, ಇತರ ಹಿಂದುಳಿದ ವರ್ಗದ ಶೇ 99.12, ಎಸ್‌ಸಿ ಶೇ 98.77, ಎಸ್‌ಟಿ ಶೇ 98.84ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.

ಭಾರತ ಕೀ ಜನಗಣನಾ 2027 CENSUS OF INDIA

ಗೃಹ ಮಂತ್ರಾಲಯ ಭಾರತ ಸರ್ಕಾರ
सत्यमेव जयते

ನಮ್ಮ ಜನಗಣತಿ ನಮ್ಮ ಅಭಿವೃದ್ಧಿ

ಜನಗಣತಿ 2027 ರ ಮೊದಲನೇ ಹಂತ

ಮನೆ ಪಟ್ಟಿ ಮತ್ತು ಮನೆ ಗಣತಿ

16ನೇ ಏಪ್ರಿಲ್ ಯಿಂದ 15ನೇ ಮೇ 2026 ರ ವರೆಗೆ

ಈ ಹಂತದಲ್ಲಿ ನಿಮ್ಮ ಪ್ರದೇಶದ ಪ್ರತಿಯೊಂದು ಮನೆಯ ವಿವರಗಳನ್ನು ದಾಖಲಿಸಲಾಗುತ್ತದೆ.

ನಿಮ್ಮನ್ನು ಏನು ಕೇಳಲಾಗುತ್ತದೆ ?

ಮನೆಗೆ ಸಂಬಂಧಿಸಿದ ಮಾಹಿತಿ:	ಕುಟುಂಬದ ಮೂಲಭೂತ ಮಾಹಿತಿ:	ಮೂಲ ಸೌಲಭ್ಯಗಳು:	ಕುಟುಂಬದ ಸೌಲಭ್ಯಗಳು:
• ಮನೆ ಸಂಖ್ಯೆ	• ಕುಟುಂಬದ ಸದಸ್ಯರ ಸಂಖ್ಯೆ	• ಕುಡಿಯುವ ನೀರಿನ ಮೂಲ	• ರೇಡಿಯೋ/ಟೆಲಿವಿಷನ್
• ನೆಲ, ಗೋಡೆ ಮತ್ತು ಮೇಲ್ಛಾವಣಿಯ ಪ್ರಧಾನ ಸಾಮಗ್ರಿಗಳು	• ಕುಟುಂಬದ ಮುಖ್ಯಸ್ಥರ ಹೆಸರು	• ವಿದ್ಯುತ್/ಬೆಳಕಿನ ಸೌಲಭ್ಯ	• ಇಂಟರ್ನೆಟ್/ಕಂಪ್ಯೂಟರ್
• ಮನೆಯ ಬಳಕೆ (ವಾಸ/ವಾಸೇತರ)	• ಮನೆಯ ಮಾಲೀಕತ್ವದ ಸ್ಥಾನ - ಮಾನ	• ಶೌಚಾಲಯಗಳ ಲಭ್ಯತೆ ಮತ್ತು ಪ್ರಕಾರ	• ಮೊಬೈಲ್ ಫೋನ್
• ಮನೆಯ ಸ್ಥಿತಿ	• ಕೊಠಡಿಗಳ ಸಂಖ್ಯೆ	• ಸ್ನಾನ ಗೃಹದ ಸೌಲಭ್ಯ	• ದ್ವಿಚಕ್ರ/ ನಾಲ್ಕು ಚಕ್ರದ ವಾಹನ
		• ಅಡುಗೆ ಮನೆ ಮತ್ತು ಅನಿಲ ಸಂಪರ್ಕ	
		• ಅಡುಗೆಗೆ ಬಳಸುವ ಇಂಧನ	

- ಫೆಬ್ರವರಿ 2027ರಲ್ಲಿ ನಡೆಸುವ ಜನ ಗಣತಿ ಪ್ರಕ್ರಿಯೆಗೆ ಈ ಹಂತವು ಅಡಿಪಾಯ ಹಾಕುತ್ತದೆ
- ಸ್ವಯಂಗಣತಿ ಮಾಡಿಕೊಂಡಿದ್ದರೆ, ದೃಢೀಕರಣಕ್ಕಾಗಿ ಗಣತಿದಾರರಿಗೆ ನಿಮ್ಮ SE ID ಹಂಚಿಕೊಳ್ಳಿ
- ನಿಮ್ಮ ಎಲ್ಲಾ ಮಾಹಿತಿಯು ಗೌಪ್ಯವಾಗಿ ಮತ್ತು ಸುರಕ್ಷಿತವಾಗಿರುತ್ತದೆ.

ಈ ರಾಷ್ಟ್ರೀಯ ಕಾರ್ಯಕ್ಕಾಗಿ ಮನೆಗೆ ಭೇಟಿನೀಡುವ ಗಣತಿದಾರರೊಂದಿಗೆ

ದಯವಿಟ್ಟು ಸಹಕರಿಸಿ

ನಮ್ಮ ಜನಗಣತಿಯಲ್ಲಿ ಭಾಗವಹಿಸಿ

ಹೆಮ್ಮೆಯಿಂದ ಹೇಳಿ-ನನ್ನ ಗಣತಿ ದೇಶದ ಶಕ್ತಿ

ಪ್ರತಿಯೊಂದು ಕುಟುಂಬವೂ ಗಣತಿಗೆ ಮಹತ್ವಪೂರ್ಣವಾಗಿದೆ

@CensusIndia2027

‘ಶೇ 17 ಎಂಜಿನಿಯರ್‌ಗಳಿಗಷ್ಟೇ ಕೆಲಸ’

ಎಸ್.ಸದಗೋಪನ್ ಸಮಿತಿ ಸಲ್ಲಿಸಿರುವ ವರದಿಯಲ್ಲಿ ಉಲ್ಲೇಖ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಪ್ರತಿ ವರ್ಷ ಎಂಜಿನಿಯರಿಂಗ್ ಪದವಿ ಪೂರೈಸುತ್ತಿರುವ 1.30 ಲಕ್ಷ ವಿದ್ಯಾರ್ಥಿಗಳಲ್ಲಿ ಶೇ 17ರಷ್ಟು ಮಂದಿಗಷ್ಟೇ ಉದ್ಯೋಗ ಸಿಗುತ್ತಿದೆ ಎಂದು ಎಸ್.ಸದಗೋಪನ್ ಸಮಿತಿ ವರದಿ ಹೇಳಿದೆ.

ತಾಂತ್ರಿಕ ಶಿಕ್ಷಣ ಸುಧಾರಣೆಗಾಗಿ ರಚಿಸಲಾಗಿದ್ದ ಎಸ್.ಸದಗೋಪನ್ ನೇತೃತ್ವದಲ್ಲಿ ರಚಿಸಲಾಗಿದ್ದ ಸಮಿತಿಯ ‘ಕರ್ನಾಟಕದ ಎಂಜಿನಿಯರಿಂಗ್ ಪ್ರಕಿಯಾ ಯೋಜನೆಯ ಮರು ಸಮತೋಲನಾ ವರದಿ’ ಬಿಡುಗಡೆ ಮಾಡಿ ಮಾತನಾಡಿದ ಉನ್ನತ ಶಿಕ್ಷಣ ಸಚಿವ ಎಂ.ಸಿ.ಸುಧಾಕರ್ ಈ ವಿಷಯ ತಿಳಿಸಿದರು.

‘ಎಂಜಿನಿಯರಿಂಗ್ ಪದವಿಗೆ ದಾಖಲಾಗುವ ವಿದ್ಯಾರ್ಥಿಗಳಲ್ಲಿ ಶೇ 62 ಮಂದಿ ಕಂಪ್ಯೂಟರ್ ಸೈನ್ಸ್ ಮತ್ತು ಸಂಬಂಧಿಸಿದ ಕೋರ್ಸ್‌ಗಳಿಗೆ ಸೇರ್ಪಡೆಯಾಗಿದ್ದಾರೆ. ಸಿವಿಲ್, ಮೆಕ್ಯಾನಿಕಲ್, ಆಟೊಮೊಬೈಲ್ ಸೇರಿದಂತೆ ನಾಗರಿಕ ಸೇವಾ ಕ್ಷೇತ್ರದ ಸೇವೆ ಬಯಸುವ ಎಂಜಿನಿಯರಿಂಗ್ ವಿಷಯಗಳಿಗೆ ಶೇ 16ರಷ್ಟು ದಾಖಲಾತಿ ಆಗುತ್ತಿವೆ. 2020ಕ್ಕೆ ಹೋಲಿಸಿದರೆ ಶೇ 29ರಷ್ಟು ಕುಸಿತವಾಗಿದೆ. ಅದಕ್ಕಾಗಿ ಕಂಪ್ಯೂಟರ್ ಕೋರ್ಸ್‌ಗಳ ಸೀಟುಗಳಿಗೆ ನಿಯಂತ್ರಣ ಹಾಕಲಾಗುವುದು’ ಎಂದರು.

‘ತೆಲಂಗಾಣ ಸರ್ಕಾರದ ಸುಧಾರಣೆಗಳನ್ನು ಗಮನ ದಲ್ಲಿಟ್ಟುಕೊಂಡು ಸಮಿತಿ ವರದಿ ನೀಡಿದೆ. ಕಂಪ್ಯೂಟರ್ ಸೈನ್ಸ್ ಮತ್ತು ಸಂಬಂಧಿತ ಐದು ಕೋರ್ಸ್‌ಗಳಿಗೆ ಪ್ರತಿ ವರ್ಷ ಶೇ 17ರಷ್ಟು ಸೀಟು ಕಡಿತ ಮಾಡಬೇಕು. 900 ಸೀಟುಗಳ ಮಿತಿ ಹಾಕಬೇಕು ಎಂದು ಸಮಿತಿ ಹೇಳಿದೆ. ಕೋರ್ಸ್‌ಗಳ ಸೀಟುಗಳನ್ನು ಸರ್ಕಾರದ ಆದೇಶದ ನಂತರವೇ ನಿಯಂತ್ರಿಸಲಾಗುವುದು. ವರದಿಯನ್ನು ಸಮಗ್ರವಾಗಿ ಪರಿಶೀಲಿಸಿದ ನಂತರ ಅನುಷ್ಠಾನಕ್ಕೆ ಕ್ರಮ ಕೈಗೊಳ್ಳಲಾಗುವುದು. ಆದೇಶ ನಂತರ ಸೀಟು ಹೆಚ್ಚಳಕ್ಕೆ ಬೇಡಿಕೆ ಸಲ್ಲಿಸುವ ಕಾಲೇಜುಗಳಿಗೆ ಹೊಸ ನಿಯಮ ಅನ್ವಯವಾಗಲಿದೆ. ಈಗಾಗಲೇ ಹೆಚ್ಚಳವಾದ ಸೀಟುಗಳಲ್ಲಿ ವೃತ್ತಿಯ ಆಗುವುದಿಲ್ಲ’ ಎಂದು ಹೇಳಿದರು.

ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳು, ಖಾಸಗಿ ವಿಶ್ವವಿದ್ಯಾಲಯಗಳು ಆದೇಶ ಜಾರಿಗೆ ಬಂದ ಎರಡು ವರ್ಷಗಳ ಒಳಗೆ ರಾಷ್ಟ್ರೀಯ ಮಾನ್ಯತಾ ಮಂಡಳಿ (ಎನ್‌ಬಿಎ) ಪ್ರಮಾಣಪತ್ರ ಪಡೆಯುವುದು ಕಡ್ಡಾಯ. ತಾಂತ್ರಿಕ ಶಿಕ್ಷಣದ ಗುಣಮಟ್ಟವನ್ನು ಕಾಪಾಡಲು ಇದು ಅಗತ್ಯ. ಆದೇಶಕ್ಕೂ ಮೊದಲು ಹೆಚ್ಚುವರಿ ಸೀಟು ಪಡೆದವರಿಗೂ ಈ ನಿಯಮ ಅನ್ವಯವಾಗಲಿದೆ ಎಂದರು.

ಖಾಸಗಿ ವಿ.ವಿಗಳಿಗೂ ನಿಯಂತ್ರಣ: ಸಚಿವ

ಸ್ವಾಯತ್ತೆ ಹೆಸರಿನಲ್ಲಿ ತಮಗೆ ಬೇಕಾದಂತೆ ಕಾರ್ಯನಿರ್ವಹಿಸುವ ಖಾಸಗಿ ವಿಶ್ವವಿದ್ಯಾಲಯಗಳಿಗ ನಿಯಂತ್ರಣಕ್ಕೆ ಚಿಂತನೆ ನಡೆದಿದ್ದು, ಕಾಯ್ದೆ ತಿದ್ದುಪಡಿ ತರಲಾಗುವುದು ಎಂದು ಸುಧಾಕರ್ ಹೇಳಿದರು.

‘ಕೆಲ ಖಾಸಗಿ ವಿಶ್ವವಿದ್ಯಾಲಯಗಳು ಯುಜಿಸಿ ನೀಡಿದ ಸ್ವಾಯತ್ತೆಗೆ ಪದಲ್ಲಿ ಸರ್ಕಾರದ ಅನುಮತಿ ಪಡೆಯದೆ ಸೀಟು ಹೆಚ್ಚಿಸಲು ಯತ್ನಿಸಿವೆ. ಯಾವುದೇ ವಿಶ್ವವಿದ್ಯಾಲಯ ಸ್ವಾಯತ್ತೆ ಹೆಸರಿನಲ್ಲಿ ನಿಯಮಗಳಿಂದ ತಪ್ಪಿಸಿಕೊಳ್ಳಲು ಅವಕಾಶ ಇಲ್ಲ. ಈಗಾಗಲೇ ಒಂದು ಪ್ರಮುಖ ವಿಶ್ವವಿದ್ಯಾಲಯಕ್ಕೆ ಈ ಕುರಿತು ಎಚ್ಚರಿಕೆ ನೀಡಿದ್ದೇವೆ’ ಎಂದರು.

ಅಗತ್ಯ ಮೂಲಸೌಕರ್ಯ ಮತ್ತು ಮಾನದಂಡಗಳನ್ನು ಪೂರೈಸದ ಸಂಸ್ಥೆಗಳಿಗೆ ಡೀಮ್ಡ್ ವಿಶ್ವವಿದ್ಯಾಲಯದ ಸ್ಥಾನಕ್ಕಾಗಿನ ನಿರಾಕ್ಷೇಪಣಾ ಪತ್ರ ಪಡೆಯಲು ಅನುಮತಿ ನೀಡಲಾಗುವುದು ಎಂದು ಸ್ಪಷ್ಟಪಡಿಸಿದರು.

ತಾಂತ್ರಿಕ ಶಿಕ್ಷಣ ಸುಧಾರಣೆಗಾಗಿ ರಚಿಸಲಾಗಿದ್ದ ಎಸ್.ಸದಗೋಪನ್ ಸಮಿತಿ ಸಲ್ಲಿಸಿರುವ ವರದಿಯನ್ನು ಸಚಿವ ಎಂ.ಸಿ.ಸುಧಾಕರ್ ಗುರುವಾರ ಬಿಡುಗಡೆ ಮಾಡಿದರು. ಉನ್ನತ ಶಿಕ್ಷಣ ಪರಿಷತ್ ಕಾರ್ಯನಿರ್ವಾಹಕ ನಿರ್ದೇಶಕ ಕೆ.ಜಿ. ಚಂದ್ರಶೇಖರ್, ಕಾಲೇಜು ಶಿಕ್ಷಣ ಇಲಾಖೆ ನಿರ್ದೇಶಕಿ ಜೋ ಭಾ ಉಪಸ್ಥಿತರಿದ್ದರು

ಕೆಇಇಆರ್‌ಎ ಸ್ಥಾಪನೆಗೆ ಕ್ರಮ

ಎಂಜಿನಿಯರಿಂಗ್ ಶಿಕ್ಷಣದಲ್ಲಿ ಮೂಲಭೂತ ಬದಲಾವಣೆ ತರಲು ಕರ್ನಾಟಕ ಎಂಜಿನಿಯರಿಂಗ್ ಶಿಕ್ಷಣ ಸುಧಾರಣಾ ಪ್ರಾಧಿಕಾರ (ಕೆಇಇಆರ್‌ಎ) ಸ್ಥಾಪನೆಗೆ ಸಮಿತಿ ಶಿಫಾರಸು ಮಾಡಿದೆ. ಅದಕ್ಕಾಗಿ ಕಾನೂನು ತರಬೇಕಿದೆ. ಈ ಕುರಿತು ಚರ್ಚಿಸಿ, ಶೀಘ್ರ ನಿರ್ಧಾರ ಕೈಗೊಳ್ಳುತ್ತೇವೆ ಎಂದು ಸುಧಾಕರ್ ಹೇಳಿದರು.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವು ಸ್ವಾಯತ್ತ ಕಾಲೇಜುಗಳು ಹಾಗೂ ಡೀಮ್ಡ್ ವಿಶ್ವವಿದ್ಯಾಲಯಗಳ ಪಠ್ಯಕ್ರಮ ಸುಧಾರಣೆಯನ್ನು ಸಂಯೋಜಿಸುವುದರ ಜತೆಗೆ, ಕೈಗಾರಿಕಾ ಸಹಭಾಗಿತ್ವ ಹಾಗೂ ಮೂಲಸೌಕರ್ಯ ವ್ಯವಸ್ಥೆಗಳನ್ನು ಸಮನ್ವಯಗೊಳಿಸಿ, ಕರ್ನಾಟಕ ಎಂಜಿನಿಯರಿಂಗ್ ಶಿಕ್ಷಣ ಡೇಟಾ ವ್ಯವಸ್ಥೆಯ ಮೂಲಕ ಫಲಿತಾಂಶಗಳನ್ನು ಪರಿಶೀಲಿಸುವ ಹೊಣೆ ಹೊರುತ್ತದೆ ಎಂದರು.

ಅರಣ್ಯ ಇಲಾಖೆಗೆ ₹131.25 ಕೋಟಿ ಶುಲ್ಕ ಭರಿಸಬೇಕಿರುವ ಕಂಪನಿ

ಗಣಿಗುತ್ತಿಗೆ: ‘ಸ್ಮಯೋರ್’ ಅರ್ಜಿ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಣಿ ಗುತ್ತಿಗೆಯ ಅರಣ್ಯ ಪರವಾನಗಿ (ಎಫ್‌ಸಿ) ವಿಸ್ತರಣೆಗಾಗಿ ಸರ್ಕಾರ ವಿಧಿಸಿದ್ದ ಪರತ್ತುಗಳನ್ನು ಪ್ರಶ್ನಿಸಿ ‘ಸಂಡೂರು ಮ್ಯಾಂಗನೀಸ್ ಆಂಡ್ ಐರನ್ ಓರ್ ಲಿಮಿಟೆಡ್’ (ಸ್ಮಯೋರ್) ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಈ ಸಂಬಂಧ ‘ಸ್ಮಯೋರ್’ನ ಪ್ರತಿನಿಧಿ ನೇಹಾ ಥಾಮಸ್ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ಈ ಕುರಿತಂತೆ ಆದೇಶಿಸಿದೆ.

ರಾಜ್ಯ ಸರ್ಕಾರದ ಪರ ಹೆಚ್ಚುವರಿ ಅಡ್ವೊಕೇಟ್ ಜನರಲ್, ಕಿರಣ್ ಪಿ. ರೋಣ ಅವರ ವಾದವನ್ನು ಪುರಸ್ಕರಿಸಿರುವ ನ್ಯಾಯಪೀಠ, ‘ಸರ್ಕಾರ ನೀಡಿರುವ ಡಿಮ್ಯಾಂಡ್ ನೋಟಿಸ್ ಕಾನೂನು ಬದ್ಧವಾಗಿದೆ. ಹಾಗಾಗಿ, ಅರ್ಜಿದಾರರು ಕೋರಿರುವ ಪರಿಹಾರಗಳನ್ನು ನೀಡಲು ಸಾಧ್ಯವಿಲ್ಲ’ ಎಂದು ಸ್ಪಷ್ಟಪಡಿಸಿದ್ದು, ಅರಣ್ಯ ಸಂರಕ್ಷಣಾ ಕಾಯ್ದೆಯಡಿ ವಿಧಿಸಲಾಗುವ ಶುಲ್ಕ ಮತ್ತು ಭೂಮಿ ಹಸ್ತಾಂತರ ಪ್ರಕ್ರಿಯೆಗೆ ಸಮ್ಮತಿ ಸೂಚಿಸಿದೆ.

ಈ ಆದೇಶದಿಂದಾಗಿ ಕಂಪನಿಯು, ಅರಣ್ಯ ಇಲಾಖೆಗೆ ₹131.25 ಕೋಟಿ ಯಷ್ಟು ಪರಿಹಾರಾತ್ಮಕ ಶುಲ್ಕ ಮತ್ತು ಪರ್ಯಾಯ ಭೂಮಿ ಒದಗಿಸಬೇಕಾದ ಅನಿವಾರ್ಯಕ್ಕೆ ಸಿಲುಕಿದಂತಾಗಿದೆ. ‘ಸ್ಮಯೋರ್’ ಪರ ಸುಪ್ರೀಂ ಕೋರ್ಟ್‌ನ ಪದಾಂಕಿತ ಹಿರಿಯ ವಕೀಲ ಮುಕುಲ್ ರೋಹಟಗಿ ವಾದ ಮಂಡಿಸಿದ್ದರು.

ಕೋರಿಕೆ ಏನಿತ್ತು?: ‘ಕೇಂದ್ರ ಅರಣ್ಯ ಸಚಿವಾಲಯ ಹೊರಡಿಸಿರುವ ಮಾರ್ಗದರ್ಶಿ ನಿಯಮಗಳನ್ನು ಪಾಲಿಸುವಂತೆ ಸೂಚಿಸಿ ಬಳ್ಳಾರಿ ಡಿಸಿಎಫ್ 2025ರ ಜೂನ್ 20ರಂದು ನಮಗೆ ನೀಡಿರುವ ಸಂವಹನ ಪತ್ರವು ಸಂಪೂರ್ಣ ಏಕಪಕ್ಷೀಯ, ಕಾರಣರಹಿತ ಮತ್ತು ಕಾನೂನು ಬಾಹಿರವಾಗಿದೆ. ಆದ್ದರಿಂದ, ‘ಇದನ್ನು ವಜಾಗೊಳಿಸಬೇಕು’ ಎಂದು ಅರ್ಜಿದಾರರು ಕೋರಿದ್ದರು.

ತೀರ್ಪಿನ ಪರಿಣಾಮಗಳು

- **ಭೂಮಿ ಹಸ್ತಾಂತರ:** 714.90 ಹೆಕ್ಟೇರ್ ವಿಸ್ತೀರ್ಣದ ಪರ್ಯಾಯ ಭೂಮಿಯನ್ನು ಅರಣ್ಯ ಇಲಾಖೆಗೆ ಒದಗಿಸಬೇಕಿದೆ.
- **ಮುಂದೇನಾಗಬಹುದು?:** ಪರತ್ತುಗಳನ್ನು ಪೂರೈಸದ ಹೊರತು 2026ರ ನಂತರ ಗಣಿಗಾರಿಕೆ ಮುಂದುವರಿಸಲು ಅರಣ್ಯ ಪರವಾನಗಿ ಲಭ್ಯವಾಗುವುದು ಕಷ್ಟಕರವಾಗಲಿದೆ. ಗಣಿ ಸ್ಥಗಿತಗೊಂಡರೆ, ಅದನ್ನು ಹರಾಜಿಗೆ ಹಾಕಲಾಗುತ್ತದೆ.

ಪ್ರಕರಣ: ಸಂಡೂರು ತಾಲ್ಲೂಕಿನ ಸ್ವಾಮಿಮಲೈ ಮತ್ತು ರಾಮಣಮಲೈ ಅರಣ್ಯ ಪ್ರದೇಶಗಳಲ್ಲಿನ ‘ಸ್ಮಯೋರ್’ ಸಂಸ್ಥೆಯ ಗಣಿ ಗುತ್ತಿಗೆಗಳ (1615.64 ಹೆಕ್ಟೇರ್) ಮತ್ತು 2,679 (142.58 ಹೆಕ್ಟೇರ್) ರ ಅರಣ್ಯ ಪರವಾನಗಿ ಅವಧಿಯು 2026ರ ಡಿಸೆಂಬರ್‌ಗೆ ಮುಕ್ತಾಯಗೊಳ್ಳಲಿದೆ. ಆದರೆ, ಗಣಿ ಗುತ್ತಿಗೆ ಅವಧಿ 2033ರ ಡಿಸೆಂಬರ್ ವರೆಗೆ ಇರುವುದರಿಂದ, ಅಲ್ಲಿಯವರೆಗೂ ಅರಣ್ಯ ಪರವಾನಗಿ ವಿಸ್ತರಿಸಲು ಕಂಪನಿಯು ಕೇಂದ್ರ ಅರಣ್ಯ ಮತ್ತು ಪರಿಸರ ಸಚಿವಾಲಯಕ್ಕೆ ಮನವಿ ಮಾಡಿತ್ತು.

ಆದರೆ, 2025ರ ಜೂನ್ 20ರಂದು ‘ಸ್ಮಯೋರ್’ಗೆ ‘ಡಿಮ್ಯಾಂಡ್ ನೋಟಿಸ್’ ಜಾರಿ ಮಾಡಿದ್ದ ರಾಜ್ಯ ಸರ್ಕಾರ 714.90 ಹೆಕ್ಟೇರ್ ಪರ್ಯಾಯ ಅರಣ್ಯ ಭೂಮಿ ಮತ್ತು ₹131.25 ಕೋಟಿ ಪರಿಹಾರಾತ್ಮಕ ಅರಣ್ಯೀಕರಣ (ಸಿಎ) ಶುಲ್ಕ ಭರಿಸುವಂತೆ ಸೂಚಿಸಿತ್ತು.

ಈ ಡಿಮ್ಯಾಂಡ್ ನೋಟಿಸ್ ಪ್ರಶ್ನಿಸಿ ‘ಸ್ಮಯೋರ್’ ಹೈಕೋರ್ಟ್ ಮೆಟ್ಟಿಲೇರಿದ್ದ ಕಂಪನಿ, ‘ನಮ್ಮ ಗಣಿಗಾರಿಕೆ ಪ್ರದೇಶದ 714.90 ಹೆಕ್ಟೇರ್ ಭೂಮಿಯು ಅರಣ್ಯ ಸಂರಕ್ಷಣೆ ಕಾಯ್ದೆ-1980 ಜಾರಿಯಾಗುವುದಕ್ಕೂ ಮೊದಲೇ ಬಳಕೆಯಲ್ಲಿತ್ತು. ಕೇಂದ್ರ ಸರ್ಕಾರದ 2015ರ ಮಾರ್ಗಸೂಚಿಗಳ ಪ್ರಕಾರ, 1980ಕ್ಕೂ ಮುನ್ನ ಬಳಕೆಯಲ್ಲಿದ್ದ ಭೂಮಿಗೆ ಪರ್ಯಾಯ ಅರಣ್ಯ ಭೂಮಿ ಅಥವಾ ಹೆಚ್ಚುವರಿ ಶುಲ್ಕ ನೀಡುವ ಅಗತ್ಯವಿಲ್ಲ’ ಎಂದು ಪ್ರತಿಪಾದಿಸಿತ್ತು. ಅಂತೆಯೇ, 2033ರ ವರೆಗೂ ಗುತ್ತಿಗೆ ವಿಸ್ತರಣೆಗೆ ಅದೇಶಿಸಬೇಕು ಎಂದು ಮನವಿ ಮಾಡಿತ್ತು.

ಕೊಲೆ: 6 ಅಪರಾಧಿಗಳಿಗೆ ಗಲ್ಲು ಶಿಕ್ಷೆ

ಪ್ರಜಾವಾಣಿ ವಾರ್ತೆ

ಗಂಗಾವತಿ(ಕೊಪ್ಪಳ ಜಿಲ್ಲೆ): ನಗರದಲ್ಲಿ ಕಳೆದ ವರ್ಷ ನಡೆದಿದ್ದ ಬಿಜೆಪಿ ಮುಖಂಡ ವೆಂಕಟೇಶ ಕುರುಬರ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಆರು ಆಪರಾಧಿಗಳಿಗೆ ಗಂಗಾವತಿಯ 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸಷನ್ಸ್ ನ್ಯಾಯಾಲಯ ಗುರುವಾರ ಗಲ್ಲುಶಿಕ್ಷೆ ವಿಧಿಸಿದೆ.

ನಗರದ ರವಿ ಬಸವರಾಜ, ವಿಜಯ ಅಲಿಯಾಸ್ ಮೈಲಾರಿ, ಧನರಾಜ, ಭೀಮ ಅಲಿಯಾಸ್ ಭರತ, ಸಲೀಂ ಹಾಗೂ ಗಂಗಾಧರ ಗೌಳಿ ಶಿಕ್ಷೆಗೆ ಒಳಗಾದವರು.

ಕಳೆದ ವರ್ಷದ ಅ.8ರಂದು ದುಷ್ಕರ್ಮಿಗಳು ಕಾರಿನಲ್ಲಿ ಬಂದು ವೆಂಕಟೇಶ ಕುರುಬರ ಅವರ ದ್ವಿಚಕ್ರವಾಹನಕ್ಕೆ ಡಿಕ್ಕಿ ಹೊಡೆದು, ಮಾರಕಾಸ್ತ್ರಗಳಿಂದ ಕೊಚ್ಚಿ ಭೀಕರವಾಗಿ ಕೊಲೆಗೈದಿದ್ದರು. ಮರುದಿನವೇ ಕೆಲವರು ಕಂಪ್ಲಿಯಲ್ಲಿ ಠಾಣೆಗೆ ತೆರಳಿ ಶರಣಾಗಿದ್ದರು.

ಕೊಲೆಗೆ ಸುಪಾರಿ ನೀಡಿದ್ದ ರವಿ, ಗಂಗಾಧರ ಗೌಳಿ ಸೇರಿ 12 ಮಂದಿ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿದ್ದರು. ನ್ಯಾಯಾಲಯಕ್ಕೆ 573 ಪುಟಗಳ ದೋಷಾರೋಪಪಟ್ಟಿ ಸಲ್ಲಿಸಿದ್ದರು.

ನ್ಯಾಯಾಧೀಶರಾದ ಸದಾನಂದ ನಾಗಪ್ಪ ನಾಯ್ಕ ಅವರು 12 ಆರೋಪಿಗಳ ಪೈಕಿ ಆರು ಮಂದಿಯನ್ನು ಅಪರಾಧಿಗಳು ಎಂದು ಏ.23ರಂದು ತೀರ್ಮಾನಿಸಿದ್ದರು. ಪಬ್ಲಿಕ್ ಪ್ರಾಸಿಕ್ಯೂಟರ್ ನಾಗಲಕ್ಷ್ಮಿ ವಾದ ಮಂಡಿಸಿದ್ದರು.

2023ರಲ್ಲಿ ವೆಂಕಟೇಶನ ಸಹಚರ ಮಾರುತಿ ಮೇಲೆ ರವಿ ಬಸವರಾಜ ಸಹಚರರು ಗಂಗಾವತಿ ಸಮೀಪದ ವಿದ್ಯಾನಗರ ರೈಲು ನಿಲ್ದಾಣದ ಬಳಿ ಮುಖ್ಯ ರಸ್ತೆಯಲ್ಲಿ ಕಲ್ಲು ಎತ್ತಿಹಾಕಿ ಕೊಲೆಗೆ ಯತ್ನಿಸಿದ್ದರು. ಘಟನೆಯ ಒಂದೂವರೆ ವರ್ಷದ ಬಳಿಕ ಮಾರುತಿ ಮೃತಪಟ್ಟಿದ್ದ. ಈ ಹಳೆ ದ್ವೇಷವು ವೆಂಕಟೇಶ ಕುರುಬರ ಕೊಲೆಗೂ ಕಾರಣವಾಗಿತ್ತು.

ಜನಿವಾರ, ಹಿಜಾಬ್: ಐವರಿಗೆ ಮರು ಸಿಇಟಿ

ವಿದ್ಯಾರ್ಥಿಗಳು ಪರೀಕ್ಷೆ ಸರಿಯಾಗಿ ಬರೆಯಲು ಸಾಧ್ಯವಾಗಿಲ್ಲ. ಕಳೆದ ವರ್ಷವೂ ಇಂತಹ ಘಟನೆ ನಡೆದಾಗ ಮರುಪರೀಕ್ಷೆ ಅವಕಾಶ ನೀಡಲಾಗಿತ್ತು. ಆದರೆ, ಕೃಪಾಂಕ ನೀಡುವುದು ಕಾನೂನು ಸಮಸ್ಯೆ ತರುತ್ತದೆ. ವಿದ್ಯಾರ್ಥಿಗಳು ಮರುಪರೀಕ್ಷೆ ಬಯಸಿದರೆ ಸರ್ಕಾರ ಅದನ್ನು ಪರಿಗಣಿಸುತ್ತದೆ ಎಂದರು.

ಧಾರ್ಮಿಕ ಗುರುತುಗಳಿದ್ದರೆ ವಿದ್ಯಾರ್ಥಿಗಳು ಎರಡು ಗಂಟೆ ಮುಂಚಿತವಾಗಿ ಕೇಂದ್ರಗಳಿಗೆ ಬರುವಂತೆ ಸೂಚನೆ ನೀಡಲಾಗಿತ್ತು. ಸಿಬ್ಬಂದಿಗೂ ತರಬೇತಿ ನೀಡಲಾಗಿತ್ತು. ಆದರೂ ಬೆಂಗಳೂರಿನ ಕೃಪಾನಿಧಿ ಪಿಯು ಕಾಲೇಜು, ನಾಗಾರ್ಜುನ ಕಾಲೇಜುಗಳಲ್ಲಿ ಜನಿವಾರ ಹಾಗೂ ಚಿಕ್ಕಬಳ್ಳಾಪುರದ ಬಿಜಿಎಸ್ ಕಾಲೇಜಿನಲ್ಲಿ ಹಿಜಾಬ್ ತೆಗೆಸಿದ್ದಾರೆ’ ಎಂದು ಹೇಳಿದರು.

ರಾಜ್ಯದಲ್ಲಿ ಮೊದಲ ಬಾರಿಗೆ ಚಾಮರಾಜನಗರ ಜಿಲ್ಲೆಯಲ್ಲಿ ಪ್ರಾಯೋಗಿಕವಾಗಿ ಅನುಷ್ಠಾನ

ಕಾಗದರಹಿತ ಆಸ್ತಿ ನೋಂದಣಿಗೆ ಚಾಲನೆ

ಪ್ರಜಾವಾಣಿ ವಾರ್ತೆ

ಚಾಮರಾಜನಗರ: ಉಪ ನೋಂದಣಾಧಿಕಾರಿಗಳ ಕಚೇರಿಗಳಲ್ಲಿ ಆಸ್ತಿಗಳ ಕಾಗದರಹಿತ ದಸ್ತಾವೇಜು ನೋಂದಣಿ ಪ್ರಕ್ರಿಯೆಗೆ ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಆಯುಕ್ತ ಮುಲ್ಲೈ ಮುಗಿಲನ್ ಗುರುವಾರ ಜಿಲ್ಲಾ ಜಿಲ್ಲಾ ಉಪ ನೋಂದಣಾಧಿಕಾರಿ ಕಚೇರಿಯಲ್ಲಿ ಚಾಲನೆ ನೀಡಿದರು.

‘ರಾಜ್ಯದಲ್ಲಿ ಮೊದಲ ಬಾರಿಗೆ ಪ್ರಾಯೋಗಿಕವಾಗಿ ಜಿಲ್ಲೆಯಲ್ಲಿ ಈ ವ್ಯವಸ್ಥೆ ಅನುಷ್ಠಾನಗೊಂಡಿದ್ದು, ಸಾಧಕ- ಬಾಧಕಗಳನ್ನು ಅರಿತು ರಾಜ್ಯದಾದ್ಯಂತ ವಿಸ್ತರಿಸಲಾಗುವುದು’ ಎಂದು ತಿಳಿಸಿದರು.

‘2023ರಿಂದ ನೋಂದಣಿ ಮತ್ತು ಮುದ್ರಾಂಕ ಇಲಾಖೆಯಲ್ಲಿ ಬಳಕೆಯಲ್ಲಿರುವ ಕಾವೇರಿ 2.0 ತಂತ್ರಾಂಶವನ್ನು ಕಾಗದ ರಹಿತ ನೋಂದಣಿ ವ್ಯವಸ್ಥೆಗೆ ಅನುಗುಣವಾಗಿ ಅಪ್‌ಡೇಟ್ ಮಾಡಲಾಗಿದೆ. ಸಾರ್ವಜನಿಕರ ಆಸ್ತಿಗಳಿಗೆ ಸಂಬಂಧಿಸಿದಂತೆ ನಕಲಿ ದಾಖಲೆಗಳ ಸೃಷ್ಟಿಗೆ ಹಾಗೂ ನೋಂದಣಿಗೆ ಸಂಪೂರ್ಣ ಕಡಿವಾಣ ಬೀಳಲಿದೆ’ ಎಂದು ಮಾಹಿತಿ ನೀಡಿದರು.

‘ಇನ್ನು ಮುಂದೆ ಸಾರ್ವಜನಿಕರ ಆಸ್ತಿಗಳ ದಾಖಲೆಗಳು ಭೌತಿಕವಾಗಿರದೆ ಸಂಪೂರ್ಣವಾಗಿ ಡಿಜಿಟಲ್ ರೂಪದಲ್ಲಿರುತ್ತವೆ. ಸಾಲ ಪಡೆಯಲು ಅಥವಾ ವ್ಯವಹಾರಗಳಿಗೆ ಬ್ಯಾಂಕ್ ಅಥವಾ ಇತರ ಸಂಸ್ಥೆಗಳಿಗೆ ಭೌತಿಕ ದಾಖಲೆಸಲ್ಲಿಸುವ ಅಗತ್ಯ ಇರುವುದಿಲ್ಲ. ಸಂಬಂಧಪಟ್ಟ ಸಂಸ್ಥೆಗಳು ನೇರವಾಗಿ ಡಿಜಿಟಲ್ ಲೈಬ್ರರಿಯಿಂದ ದಾಖಲೆ ಪಡೆಯಲು ಅವಕಾಶ ನೀಡಲಾಗುವುದು ಎಂದರು.

‘ಆನ್‌ಲೈನ್‌ನಲ್ಲಿ ತ್ವರಿತ ಹಾಗೂ ಸುಲಭವಾಗಿ ದಾಖಲೆಗಳನ್ನು ಪಡೆಯಬಹುದು. ಎಲ್ಲವೂ ಪಾರದರ್ಶವಾಗಿರಲಿದೆ’ ಎಂದು ಮುಲ್ಲೈ ಮುಗಿಲನ್ ತಿಳಿಸಿದರು.



ಆಸ್ತಿಗಳ ಕಾಗದ ರಹಿತ ದಸ್ತಾವೇಜು ನೋಂದಣಿ ಪ್ರಕ್ರಿಯೆಗೆ ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಆಯುಕ್ತ ಮುಲ್ಲೈ ಮುಗಿಲನ್ ಗುರುವಾರ ಚಾಮರಾಜನಗರದ ಜಿಲ್ಲಾ ಉಪ ನೋಂದಣಾಧಿಕಾರಿ ಕಚೇರಿಯಲ್ಲಿ ಚಾಲನೆ ನೀಡಿದರು

prajavani.net prajavani

ಶುಕ್ರವಾರ, ಮೇ 1, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 120 | ಪುಟ 20

www.prajavani.net

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ

ದೇವದತ್ತ ಆಸರೆ

ಗುರುವಾರ ನಡೆದ ಐಪಿಎಲ್ ಕ್ರಿಕೆಟ್ ಪಂದ್ಯದಲ್ಲಿ ಆರ್‌ಸಿಬಿಯ ದೇವದತ್ತ ಪಡಿಕ್ಕಲ್ (40; 24ಎಸೆತ, 4X5, 6X2) ಗುಜರಾತ್ ಟೈಟನ್ಸ್ ಎದುರು ಉತ್ತಮ ಬ್ಯಾಟಿಂಗ್ ಮಾಡಿದರು

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಸೆನ್ಸೆಕ್ಸ್ 76,913 | ನಿಫ್ಟಿ 23,997 | $/₹ 94.84

‘ಎಐ ಸಿಟಿ’ಗೆ ₹18,133 ಕೋಟಿ

ಬಿಡದಿಯಲ್ಲಿ ಸ್ಥಾಪನೆಯಾಗಲಿದೆ ‘ವರ್ಕ್–ಲಿವ್–ಪ್ಲೇ’ ಪರಿಕಲ್ಪನೆಯ ಉಪನಗರ ● ಸಚಿವ ಸಂಪುಟ ಅನುಮೋದನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ ಯೋಜನೆಯಡಿ ಬಿಡದಿಯಲ್ಲಿ ₹18,133 ಕೋಟಿ ವೆಚ್ಚದಲ್ಲಿ ‘ಎಐ ಸಿಟಿ’ ಅಥವಾ ‘ವರ್ಕ್–ಲಿವ್–ಪ್ಲೇ’ ಎಂಬ ಉಪ ನಗರ ನಿರ್ಮಿಸಲು ಸರ್ಕಾರ ನಿರ್ಧರಿಸಿದೆ.

ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಯೋಜನೆಗೆ ಅನುಮೋದನೆ ನೀಡಲಾಗಿದೆ. ಯೋಜನೆಗೆ ಅಗತ್ಯವಿರುವ ಯೋಜನೆ ನಿರ್ವಹಣಾ ಸಮಾಲೋಚಕ ಸಂಸ್ಥೆಯನ್ನು ನೇಮಿಸಿಕೊಳ್ಳಲು ತಾತ್ವಿಕ ಒಪ್ಪಿಗೆ ನೀಡಲಾಗಿದೆ.

ಸಚಿವ ಸಂಪುಟ ಸಭೆಯ ಬಳಿಕ ಕಾನೂನು ಸಚಿವ ಎಚ್.ಕೆ.ಪಾಟೀಲ ಅವರು ಸುದ್ದಿಗೋಷ್ಠಿಯಲ್ಲಿ ಯೋಜನೆಯ ವಿವರ ನೀಡಿದರು.

ಬೆಂಗಳೂರು ಮಹಾನಗರ ಪ್ರದೇಶದ ವ್ಯಾಪ್ತಿಯಲ್ಲಿ ಹೆಚ್ಚುತ್ತಿರುವ ಜನಸಂಖ್ಯೆಗೆ ಅನುಗುಣವಾಗಿ ಮೂಲ ಸೌಕರ್ಯದ ಅಗತ್ಯಗಳನ್ನು ಪೂರೈಸುವ ಉದ್ದೇಶದಿಂದ ಮತ್ತು ಸಮತೋಲಿತ ನಗರ ಬೆಳವಣಿಗೆಯನ್ನು ಸುಗಮಗೊಳಿಸುವ ದೃಷ್ಟಿಯಿಂದ ‘ವರ್ಕ್–ಲಿವ್–ಪ್ಲೇ ಪರಿಕಲ್ಪನೆಯಡಿ ಉಪನಗರಗಳನ್ನು ನಿರ್ಮಿಸಲಾಗುವುದು. ಕೈಗಾರಿಕೆ, ವಾಣಿಜ್ಯ ಮತ್ತು ವಸತಿ ಸಮುಚ್ಚಯಗಳನ್ನು ಇದು ಒಳಗೊಂಡಿರುತ್ತದೆ. ಇದರ ಅನುಷ್ಠಾನದಿಂದ ಜನಸಂಖ್ಯೆ ಮತ್ತು ಆರ್ಥಿಕ ಚಟುವಟಿಕೆಗಳನ್ನು ಯೋಜಿತವಾಗಿ ಪರ್ಯಾಯ ನಗರ ಪ್ರದೇಶಗಳಿಗೆ ವಿಕೇಂದ್ರೀಕರಿಸಲು ಸಾಧ್ಯವಾಗುತ್ತದೆ. ಇದರಿಂದ ಸಂಚಾರ ದಟ್ಟಣೆ, ವಾಯು ಮತ್ತು ಶಬ್ದ ಮಾಲಿನ್ಯ ತಡೆಗಟ್ಟಲು ಸಹಾಯವಾಗುತ್ತದೆ ಎಂದು ಹೇಳಿದರು.

ಈ ಯೋಜನೆಗೆ 7,481 ಎಕರೆ 22 ಗುಂಟೆ ಭೂಸ್ವಾಧೀನ ಮಾಡಿಕೊಳ್ಳಬೇಕಾಗಿದೆ. ಇದಕ್ಕಾಗಿ ಅಧಿಸೂಚನೆ ಹೊರಡಿಸಲಾಗಿದೆ. ಭೂಮಾಲೀಕರಿಗೆ 2013ರ ಭೂಸ್ವಾಧೀನ, ಪುನರ್‌ವಸತಿ ಕಾಯ್ದೆ ಅನ್ವಯ ನಗದು ಪರಿಹಾರ ಅಥವಾ ಕರ್ನಾಟಕ ನಗರ ಅಭಿವೃದ್ಧಿ ಪ್ರಾಧಿಕಾರ ಕಾಯ್ದೆ 2009ರ ನಿಯಮ 3ರ ಅನ್ವಯ ಭೂಸ್ವಾಧೀನಗೊಂಡ ಪ್ರತಿ ಎಕರೆಗೆ 9,693 ಚದರ ಅಡಿ ಅಭಿವೃದ್ಧಿಪಡಿಸಿ ವಸತಿ ನಿವೇಶನ ಪರಿಹಾರವಾಗಿ ನೀಡಲಾಗುವುದು ಎಂದು ಪಾಟೀಲ ಹೇಳಿದರು.

5

ರಾಜ್ಯ ಶಿಕ್ಷಣ ನೀತಿ ಚರ್ಚೆ

‘ಸುಖದೇವ್ ತೋರಟ್ ಅಧ್ಯಕ್ಷತೆಯ ಸಮಿತಿ ಸಲ್ಲಿಸಿರುವ ‘ರಾಜ್ಯ ಶಿಕ್ಷಣ ನೀತಿ’ಯನ್ನು ಸಂಪುಟ ಸಭೆಯಲ್ಲಿ ಮಂಡಿಸಲಾಯಿತು. ಆ ಕುರಿತು ಸಭೆಯಲ್ಲಿ ಚರ್ಚೆ ನಡೆಸಲಾಯಿತು. ಇನ್ನೂ ಹೆಚ್ಚಿನ ಚರ್ಚೆ ನಡೆಸಲು ಅಧಿಕಾರಿಗಳಿಂದ ಮಾಹಿತಿಯನ್ನು ಕೇಳಲಾಗಿದೆ. ಇದಕ್ಕಾಗಿ ಪ್ರತ್ಯೇಕ ಸಭೆಯನ್ನು ಶೀಘ್ರವೇ ಹಮ್ಮಿಕೊಳ್ಳಲು ತೀರ್ಮಾನಿಸಲಾಯಿತು’ ಎಂದು ಎಚ್.ಕೆ.ಪಾಟೀಲ ತಿಳಿಸಿದರು.

ಹೈದರಾಬಾದ್–ಬೆಂಗಳೂರು ಹೈಸ್ಪೀಡ್ ರೈಲು ಕಾರಿಡಾರ್

ಹೈದರಾಬಾದ್–ಬೆಂಗಳೂರು ಹೈಸ್ಪೀಡ್ ರೈಲು ಕಾರಿಡಾರ್ ಯೋಜನೆಗೆ ಸಚಿವ ಸಂಪುಟ ಒಪ್ಪಿಗೆ ನೀಡಿದೆ. ಇದು ಕೇಂದ್ರ ಸರ್ಕಾರ ಯೋಜನೆಯಾಗಿದ್ದು, ರಾಜ್ಯದಲ್ಲಿ ಒಟ್ಟು 3 ನಿಲ್ದಾಣಗಳೆಂದರೆ ಅಲಿಪುರ, ದೇವನಹಳ್ಳಿ ಮತ್ತು ಕೋಡಿಯಲ್ಲಿ ನಿರ್ಮಿಸಲು ಉದ್ದೇಶಿಸಲಾಗಿದೆ. ಕಾರಿಡಾರ್‌ನ ಒಟ್ಟು ಉದ್ದ 607.03 ಕಿ.ಮೀ ಇದ್ದು, ಕರ್ನಾಟಕದಲ್ಲಿ ತುಮಕೂರು, ಚಿಕ್ಕಬಳ್ಳಾಪುರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳ 101.03 ಕಿ.ಮೀ ಇರುತ್ತದೆ ಎಂದು ಎಚ್.ಕೆ.ಪಾಟೀಲ ತಿಳಿಸಿದರು.

ದೇವನಹಳ್ಳಿಯ ಪ್ರಸ್ತಾವಿತ ನಿಲ್ದಾಣದಿಂದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರವೇಶಕ್ಕೆ ಸಾರ್ವಜನಿಕರಿಗೆ ಹೆಚ್ಚಿನ ಅನುಕೂಲ ಆಗುತ್ತದೆ. ಅಲ್ಲದೇ, ಬೆಂಗಳೂರು ಉಪನಗರ ರೈಲು ಮತ್ತು ಮೆಟ್ರೊ ರೈಲು ಯೋಜನೆ ವ್ಯವಸ್ಥೆಯೊಂದಿಗೆ ಸಂಯೋಜಿಸಲಾಗುತ್ತದೆ. ಮಲ್ಟಿ ಮೋಡಲ್ ಸಂಪರ್ಕವನ್ನು ಮತ್ತಷ್ಟು ಹೆಚ್ಚಿಸುತ್ತದೆ ಎಂದು ವಿವರಿಸಿದರು.

ಅಲ್ಪಸಂಖ್ಯಾತರ ಕಾಲೋನಿ ಅಭಿವೃದ್ಧಿಗೆ ₹600 ಕೋಟಿ

ವಿವಿಧ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯ ಅತಿ ಹಿಂದುಳಿದ ಅಲ್ಪಸಂಖ್ಯಾತರು ವಾಸಿಸುತ್ತಿರುವ ಅತಿ ಹಿಂದುಳಿದ ಕಾಲೋನಿಗಳನ್ನು ಮಾದರಿ ಕಾಲೋನಿಗಳನ್ನಾಗಿ ಅಭಿವೃದ್ಧಿಪಡಿಸಲು ₹600 ಕೋಟಿಗಳ ಕ್ರಿಯಾ ಯೋಜನೆ ರೂಪಿಸಿ ಅನುಷ್ಠಾನಗೊಳಿಸಲು ಸಂಪುಟ ಒಪ್ಪಿಗೆ ನೀಡಿದೆ.

ಮರು ಮತದಾನಕ್ಕೆ ಅರ್ಜಿ: ಪರಿಶೀಲನೆ

ವಿವರ ಪುಟ 11

ಚಿನಕುರುಳಿ ಪ್ರಕಾಶ್ ಶೆಟ್ಟಿ

ಕಾಂಪೌಂಡ್ ಕುಸಿದು 7 ಸಾವು ಪ್ರಕರಣ: ಇಬ್ಬರು ಎಂಜಿನಿಯರ್ ಅಮಾನತು

ಬೌರಿಂಗ್ ಮುಖ್ಯಸ್ಥರಿಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಪೌಂಡ್ ಕುಸಿದು ಏಳು ಜನರು ಮೃತಪಟ್ಟ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಆರೋಗ್ಯ ಇಲಾಖೆಯ ಎಂಜಿನಿಯರಿಂಗ್ ವಿಭಾಗದ ಇಬ್ಬರು ಕಾರ್ಯಪಾಲಕ ಎಂಜಿನಿಯರ್‌ಗಳನ್ನು ಅಮಾನತು ಮಾಡಲು ಹಾಗೂ ಬೌರಿಂಗ್ ಆಸ್ಪತ್ರೆ ಮುಖ್ಯಸ್ಥರಿಗೆ ನೋಟಿಸ್ ನೀಡಲು ಸೂಚಿಸಿದ್ದಾರೆ.

ಬೆಂಗಳೂರು ಅಭಿವೃದ್ಧಿ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಉಪಸ್ಥಿತಿಯಲ್ಲಿ ಗ್ರೇಟರ್ ಬೆಂಗಳೂರು ಪ್ರಾಧಿಕಾರ ಮುಖ್ಯಸ್ಥರು, ಪಾಲಿಕೆಗಳ ಆಯುಕ್ತರ ಜತೆ ಗುರುವಾರ ಅವರು ಸಭೆ ನಡೆಸಿದರು.

5

ಆಸ್ಪತ್ರೆಗಳ ಸುರಕ್ಷತಾ ಪರಿಶೀಲನೆಗೆ ಸೂಚನೆ

ವೈದ್ಯಕೀಯ ಶಿಕ್ಷಣ ಇಲಾಖೆಯ ಅಡಿಯಲ್ಲಿ ಬರುವ ಎಲ್ಲ ಆಸ್ಪತ್ರೆಗಳ ಕಟ್ಟಡ ಮತ್ತು ಕಾಂಪೌಂಡ್‌ಗಳನ್ನು ಪರಿಶೀಲಿಸಿ, ವರದಿ ನೀಡುವಂತೆ ವೈದ್ಯಕೀಯ ಶಿಕ್ಷಣ ಸಚಿವ ಶರಣ ಪ್ರಕಾಶ ಪಾಟೀಲ ಅವರು ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದ್ದಾರೆ. ದುರಂತ ನಡೆದ ಸ್ಥಳಕ್ಕೆ ಗುರುವಾರ ಭೇಟಿ ನೀಡಿ ಪರಿಶೀಲಿಸಿದ ಬಳಿಕ ಮಾತನಾಡಿದ ಅವರು, ‘ಬೌರಿಂಗ್ ಆಸ್ಪತ್ರೆಯ ಎಲ್ಲ ಗೋಡೆಗಳು, ಕೆ.ಸಿ.ಜನರಲ್ ಮತ್ತು ವಿಕ್ಟೋರಿಯಾ ಆಸ್ಪತ್ರೆ ಸೇರಿ ರಾಜ್ಯದ ಎಲ್ಲ ಆಸ್ಪತ್ರೆಗಳ ಕಟ್ಟಡ , ಕಾಂಪೌಂಡ್‌ನ ಸ್ಥಿತಿಯನ್ನು ಪರಿಶೀಲಿಸಲು ಸೂಚಿಸಿದ್ದೇನೆ’ ಎಂದರು.

ಪೊಲೀಸ್ ಪ್ರಕರಣ ದಾಖಲು

ಕಮರ್ಷಿಯಲ್ ಸ್ಟ್ರೀಟ್ ಪೊಲೀಸ್ ಠಾಣೆಯಲ್ಲಿ ಯುಡಿಆರ್ (ಅಸಹಜ ಸಾವು) ಪ್ರಕರಣ ದಾಖಲಾಗಿದ್ದು, ತನಿಖೆ ನಡೆಯುತ್ತಿದೆ. ನಿರ್ಲಕ್ಷ್ಯ ಕಂಡುಬಂದರೆ ಅಧಿಕಾರಿಗಳು, ಗುತ್ತಿಗೆದಾರರ ಮೇಲೆ ಎಫ್‌ಐಆರ್ ದಾಖಲಿಸಲಾಗುವುದು ಎಂದು ಪೊಲೀಸರು ಹೇಳಿದ್ದಾರೆ.

asianet ಸುವರ್ಣ ಸ್ಯೂಸ್
ನೇರ. ದಿಟ್ಟ. ನಿರಂತರ

Presents

BENGALURU'S
BIGGEST
FAMILY EXPO!
WHERE CHOCOLATES, ROBOTS & FUN COLLIDE

SHOP. TASTE. PLAY. EXPERIENCE

INDIA'S BIGGEST CONSUMER EXHIBITION
CHOCO CAKE
ROBO EXPO 2026
1ST ANNUAL CHOCO CAKE ROBO EXPO
A/C SHOW

12 DAYS ONLY!

PERFECT OUTING FOR KIDS & FAMILIES | FUN | SHOPPING | ENTERTAINMENT ALL UNDER ONE ROOF! | COMPLETE AC SHOW

ONE EVENT. ENDLESS EXPERIENCES.

01-12 MAY 2026
10AM TO 9PM DAILY

SHUBH CONVENTION CENTER
JP Nagar 7th Phase

EXCITING OFFERS & DISCOUNTS | FOOD COURT & TREAT | AMPLE PARKING | SAFE & SECURE ENVIRONMENT

SCAN TO BOOK TICKETS
BOOK NOW!
@choco_cakeroboexpo

*T&C APPLY

FOLLOW US ON

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು
ಹಾಗೂ ಬೆಂಗಳೂರು ನಗರಾಭಿವೃದ್ಧಿ ಸಚಿವರು

ನಮ್ಮ ಮೆಟ್ರೋ

ಗ್ರೇಟರ್ ಬೆಂಗಳೂರು ಪ್ರಾಧಿಕಾರ

ಬೆಂಗಳೂರು ನಗರ ಪಾಲಿಕೆಗಳು

ಉತ್ತರ • ದಕ್ಷಿಣ • ಪೂರ್ವ • ಪಶ್ಚಿಮ • ಕೇಂದ್ರ

ಜಿಬಿಎ ಹಾಗೂ ಮೆಟ್ರೋ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ಹಾಗೂ ಲೋಕಾರ್ಪಣೆ

ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಬೆಂಗಳೂರು ನಗರಾಭಿವೃದ್ಧಿ ಸಚಿವರಾದ

ಶ್ರೀ ಡಿ.ಕೆ. ಶಿವಕುಮಾರ್ ರವರಿಂದ

ದಿನಾಂಕ : 01.05.2026, ಶುಕ್ರವಾರ

ರಾಗಿಗುಡ್ಡ - ಸೆಂಟ್ರಲ್ ಸಿಲ್ಕ್ ಬೋರ್ಡ್ ರೈಲ್-ಕಮ್-ಡಬಲ್ ಡೆಕ್ಕರ್ ರೋಡ್ ಮೇಲ್ಸೇತುವೆ	ಬನಶಂಕರಿ ಜಂಕ್ಷನ್ ನಲ್ಲಿ ಸ್ಕೈವಾಕ್ ನಿರ್ಮಾಣ ಕಾಮಗಾರಿಗೆ ಚಾಲನೆ	ಗಾಂಧಿ ಬಜಾರ್ ವ್ಯಾಪ್ತಿಯಲ್ಲಿ ವಾಣಿಜ್ಯ ಸಂಕೀರ್ಣ ಹಾಗೂ ಬಹುಮಹಡಿ ವಾಹನ ನಿಲುಗಡೆಯ ಲೋಕಾರ್ಪಣೆ	ಕೆ.ಆರ್. ಮಾರುಕಟ್ಟೆ ಕಟ್ಟಡದ ನೆಲಮಹಡಿಯಲ್ಲಿ ವಾಹನ ಪಾರ್ಕಿಂಗ್ ಸಂಕೀರ್ಣದ ಲೋಕಾರ್ಪಣೆ	ಮೆಟ್ರೋ ಮಾರ್ಗದ ಕಂಬಗಳಿಗೆ ಡೈನಾಮಿಕ್ ಲೈಟಿಂಗ್ ವ್ಯವಸ್ಥೆ ಉದ್ಘಾಟನೆ
				
ಮಧ್ಯಾಹ್ನ 3.30 ಗಂಟೆಗೆ **ಹೆಚ್.ಎಸ್.ಆರ್. ಲೇಔಟ್- ರ‍್ಯಾಂಪ್ ಪ್ರವೇಶದ್ವಾರ** • ಒಟ್ಟು ವೆಚ್ಚ **ರೂ. 499 ಕೋಟಿ** • 5.12 ಕಿ.ಮೀ ಉದ್ದ • ಸಿಗ್ನಲ್ ರಹಿತ ಪ್ರಯಾಣ	**ಅಪರಾಹ್ನ 4.15 ಗಂಟೆಗೆ** **ಬಿ.ಎಂ.ಟಿ.ಸಿ. ಬಸ್ ನಿಲ್ದಾಣ, ಬನಶಂಕರಿ** • ಬನಶಂಕರಿ ಸ್ಕೈವಾಕ್ ನ ಕಲಾತ್ಮಕ ನೋಟ • ಪಾದಾಚಾರಿಗಳು ಹಾಗೂ ಸುಗಮ ವಾಹನ ಸಂಚಾರಕ್ಕೆ ಅನುಕೂಲ	**ಸಂಜೆ 5.00 ಗಂಟೆಗೆ** **ಗಾಂಧಿ ಬಜಾರ್ ರಸ್ತೆ** • ವೆಚ್ಚ: **ರೂ. 22 ಕೋಟಿ** • 6 ಮಹಡಿಗಳ ವಾಣಿಜ್ಯ ಸಂಕೀರ್ಣ • ಬಹುಮಹಡಿ ಪಾರ್ಕಿಂಗ್ ವ್ಯವಸ್ಥೆ • 51 ಮಳಿಗೆಗಳು ಮತ್ತು 128 ನಾಲ್ಕು ಚಕ್ರದ ಲಘು ವಾಹನಗಳಿಗೆ 24x7 ಪಾರ್ಕಿಂಗ್ ಸೌಲಭ್ಯ	**ಸಂಜೆ 5.45 ಗಂಟೆಗೆ** **ಕೆ.ಆರ್. ಮಾರುಕಟ್ಟೆ** • **10,000 ಚ.ಮೀ** ವಿಸ್ತೀರ್ಣ • 200 ಕಾರುಗಳು ಮತ್ತು 400 ದ್ವಿಚಕ್ರ ವಾಹನಗಳಿಗೆ 24x7 ನಿಲುಗಡೆ ಸೌಲಭ್ಯ • ಮಹಿಳೆಯರು, ಹಿರಿಯ ನಾಗರಿಕರು ಹಾಗೂ ವಿಶೇಷಚೇತನರಿಗೆ ಪ್ರತ್ಯೇಕ ಪಾರ್ಕಿಂಗ್ ವ್ಯವಸ್ಥೆ • ಡಿಜಿಟಲ್ ಡಿಸ್ಪ್ಲೇ, ವೆಬ್ ಪೋರ್ಟಲ್ ಹಾಗೂ ಮೊಬೈಲ್ ಆಪ್ ಮೂಲಕ ರಿಯಲ್ ಟೈಮ್ ಪಾರ್ಕಿಂಗ್ ಮಾಹಿತಿ	**ಸಂಜೆ 6.45 ಗಂಟೆಗೆ** **ಎಂ.ಜಿ. ರಸ್ತೆ ಮೆಟ್ರೋ ನಿಲ್ದಾಣ** • ಒಟ್ಟು ವೆಚ್ಚ: **ರೂ. 3.08 ಕೋಟಿ** • ಎಂ.ಜಿ. ರಸ್ತೆ ಮೆಟ್ರೋ ಪಿಲ್ಲರ್‌ಗಳ ಸೌಂದರ್ಯೀಕರಣ • ಮೊದಲ ಹಂತದಲ್ಲಿ ಎಂ.ಜಿ. ರಸ್ತೆಯ ಟ್ರಿನಿಟಿ ಮತ್ತು ಅನಿಲ್ ಕುಂಬ್ಳೆ ಸರ್ಕಲ್ ನಡುವೆ. • ಹಂತಹಂತವಾಗಿ 160 ಮೆಟ್ರೋ ಪಿಲ್ಲರ್ ಗಳು

ನಮ್ಮ ಕರ್ನಾಟಕ
ಗ್ಯಾರಂಟಿ ಕರ್ನಾಟಕ

ಶಕ್ತಿ ಮಹಿಳೆಯರಿಗೆ ಬಸ್ ಪ್ರಯಾಣ ಉಚಿತ | ಅನ್ನಭಾಗ್ಯ ಪ್ರತಿ ತಿಂಗಳಿಗೆ 10 kg | ಗೃಹ ಜ್ಯೋತಿ ಪ್ರತಿ ಮನೆಗೆ 200 ಯೂನಿಟ್‌ವರೆಗೆ ಉಚಿತ | ಗೃಹಲಕ್ಷ್ಮಿ ₹2000 | ಯುವನಿಧಿ ₹3000 | ₹1500

"ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು" -ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ನಮ್ಮ ಮಳಿಗೆಗಳು
10.30 AM - 9.30 PM
ತೆರೆದಿರುತ್ತವೆ

ಗಿರಿಯಾಸ್®

ಗೃಹಬಳಕೆ ವಸ್ತುಗಳ ವ್ಯಾಪಾರಿಗಳು
1971 ರಿಂದ

BIG MAY DAY SALE
BEST DEALS! BIG SAVINGS!
3 ದಿನಗಳು ಮಾತ್ರ (1–3 ಮೇ)

ಇನ್ಸ್ಟಂಟ್ ಡಿಸ್ಕೌಂಟ್ ವೋಚರ್ಸ್

₹5000 ಇನ್ಸ್ಟಂಟ್ ಡಿಸ್ಕೌಂಟ್	₹3500 ಇನ್ಸ್ಟಂಟ್ ಡಿಸ್ಕೌಂಟ್	₹2500 ಇನ್ಸ್ಟಂಟ್ ಡಿಸ್ಕೌಂಟ್	₹2000 ಇನ್ಸ್ಟಂಟ್ ಡಿಸ್ಕೌಂಟ್
₹2,50,000 ಕ್ಕಿಂತ ಹೆಚ್ಚಿನ ಎಲ್ಲಾ ಖರೀದಿಗಳಿಗೆ ಮಾನ್ಯವಾಗಿದೆ.	₹1,75,000 ಕ್ಕಿಂತ ಹೆಚ್ಚಿನ ಎಲ್ಲಾ ಖರೀದಿಗಳಿಗೆ ಮಾನ್ಯವಾಗಿದೆ.	₹1,25,000 ಕ್ಕಿಂತ ಹೆಚ್ಚಿನ ಎಲ್ಲಾ ಖರೀದಿಗಳಿಗೆ ಮಾನ್ಯವಾಗಿದೆ.	₹1,00,000 ಕ್ಕಿಂತ ಹೆಚ್ಚಿನ ಎಲ್ಲಾ ಖರೀದಿಗಳಿಗೆ ಮಾನ್ಯವಾಗಿದೆ.
₹1500 ಇನ್ಸ್ಟಂಟ್ ಡಿಸ್ಕೌಂಟ್	₹1000 ಇನ್ಸ್ಟಂಟ್ ಡಿಸ್ಕೌಂಟ್	₹750 ಇನ್ಸ್ಟಂಟ್ ಡಿಸ್ಕೌಂಟ್	₹500 ಇನ್ಸ್ಟಂಟ್ ಡಿಸ್ಕೌಂಟ್
₹75,000 ಕ್ಕಿಂತ ಹೆಚ್ಚಿನ ಎಲ್ಲಾ ಖರೀದಿಗಳಿಗೆ ಮಾನ್ಯವಾಗಿದೆ.	₹50,000 ಕ್ಕಿಂತ ಹೆಚ್ಚಿನ ಎಲ್ಲಾ ಖರೀದಿಗಳಿಗೆ ಮಾನ್ಯವಾಗಿದೆ.	₹40,000 ಕ್ಕಿಂತ ಹೆಚ್ಚಿನ ಎಲ್ಲಾ ಖರೀದಿಗಳಿಗೆ ಮಾನ್ಯವಾಗಿದೆ.	₹25,000 ಕ್ಕಿಂತ ಹೆಚ್ಚಿನ ಎಲ್ಲಾ ಖರೀದಿಗಳಿಗೆ ಮಾನ್ಯವಾಗಿದೆ.

ಈ ಬೇಸಿಗೆಯಲ್ಲಿ ನಿಮ್ಮ ಕುಟುಂಬದ ರಜಾದಿನ ನಮ್ಮಲ್ಲಿದೆ

ಆಯ್ಕೆ ಮಾಡಲು 35 ಕ್ಕೂ ಹೆಚ್ಚು ವಿಲಕ್ಷಣ ತಾಣಗಳು

WIDEST RANGE OF AIRCOOLERS & FANS

Crompton orient electric HAVELLS V-GUARD KENSTAR Symphony BAJAJ

Godrej
1.0 TON 3 STAR INVERTER SPLIT AIR CONDITIONER

ಇ.ಎಮ್.ಐ ₹2,200
ಉಚಿತ: ₹5000 ಮೌಲ್ಯದ ಫ್ಯಾಮಿಲಿ ಹಾಲಿಡೇ ಪ್ಯಾಕೇಜ್*

Haier
1.0 TON 4 STAR INVERTER SPLIT AIR CONDITIONER

ಇ.ಎಮ್.ಐ ₹2,719
ಉಚಿತ: ₹5000 ಮೌಲ್ಯದ ಫ್ಯಾಮಿಲಿ ಹಾಲಿಡೇ ಪ್ಯಾಕೇಜ್*

LLOYD
2.0 TON 3STAR INVERTER SPLIT AIR CONDITIONER

ಇ.ಎಮ್.ಐ ₹3,624
ಉಚಿತ: ₹5000 ಮೌಲ್ಯದ ಫ್ಯಾಮಿಲಿ ಹಾಲಿಡೇ ಪ್ಯಾಕೇಜ್*

Panasonic
1.0 TON 5 STAR INVERTER SPLIT AIR CONDITIONER

ಇ.ಎಮ್.ಐ ₹2,815
ಉಚಿತ: ₹5000 ಮೌಲ್ಯದ ಫ್ಯಾಮಿಲಿ ಹಾಲಿಡೇ ಪ್ಯಾಕೇಜ್*

VOLTAS
1.0 TON 5 STAR INVERTER SPLIT AIR CONDITIONER

ಇ.ಎಮ್.ಐ ₹2,784
ಉಚಿತ: ₹5000 ಮೌಲ್ಯದ ಫ್ಯಾಮಿಲಿ ಹಾಲಿಡೇ ಪ್ಯಾಕೇಜ್*

SAMSUNG
1.5TON 5STAR INVERTER SPLIT AIR CONDITIONER

ಇ.ಎಮ್.ಐ ₹3,516

LG
1.5TON 3 STAR INVERTER SPLIT AIR CONDITIONER

ಇ.ಎಮ್.ಐ ₹3,096
ಉಚಿತ: ₹5000 ಮೌಲ್ಯದ ಫ್ಯಾಮಿಲಿ ಹಾಲಿಡೇ ಪ್ಯಾಕೇಜ್*

DAIKIN AIR CONDITIONERS
1.5TON 5STAR INVERTER SPLIT AIR CONDITIONER

ಇ.ಎಮ್.ಐ ₹3,669
ಉಚಿತ: ₹5000 ಮೌಲ್ಯದ ಫ್ಯಾಮಿಲಿ ಹಾಲಿಡೇ ಪ್ಯಾಕೇಜ್*

LG
650 ಲೀ ಸೈಡ್ ಬೈ ಸೈಡ್ ರೆಫ್ರಿಜರೇಟರ್
GL-B257DBM3

ಇ.ಎಮ್.ಐ ₹4,999
ಉಚಿತ: ₹3,315 ಮೌಲ್ಯದ BUTTERFLY PRESSURE COOKER

SAMSUNG
653 L CONVERTIBLE 5IN1 SIDE BY SIDE REFRIGERATOR
RS76CG8103S9HL

ಇ.ಎಮ್.ಐ ₹4,990

Whirlpool
308 LTR FROST FREE REFRIGERATOR

ಇ.ಎಮ್.ಐ ₹3,053
ಉಚಿತ: ₹4,470 ಮೌಲ್ಯದ PREETHI INDUCTION COOKTOP

Haier
305 LITERS SINGLE DOOR VISI COOLER

ಇ.ಎಮ್.ಐ ₹2,923
ಉಚಿತ: ₹1,895 ಮೌಲ್ಯದ PHILIPS TOASTER

BOSCH
14 PLACE SETTINGS DISHWASHER

ಇ.ಎಮ್.ಐ ₹4,442
ಉಚಿತ: ₹4,470 ಮೌಲ್ಯದ PREETHI INDUCTION COOKTOP

Godrej
300L DEEP FREEZER

ಇ.ಎಮ್.ಐ ₹2,278
ಉಚಿತ: ₹4,245 ಮೌಲ್ಯದ PREETHI MIXER GRINDER

iPhone 17 /17 PRO / 17 PRO MAX

STARTS FROM ₹81,500*
EMI STARTS FROM ₹3,454

SAMSUNG S26/S26+/ S26 ULTRA

EFFECTIVE PRICE ₹79,999*
(AFTER CASH BACK)
EMI STARTS FROM ₹3,667

OPPO F31 / OPPO F31/ OPPO F31+

STARTS FROM ₹25,800*
EMI STARTS FROM ₹2,150

Redmi NOTE15 / NOTE15 PRO/ NOTE15 PRO+

₹1,908 ONWARDS

Lenovo SLIM 3i

• INTEL CORE i7 13620H
• 16GB RAM
• 512GB SSD
• 15.6" FHD
• WIN 11 MSO 24
ಇ.ಎಮ್.ಐ ₹6,333 OFFER PRICE ₹75,990
ಉಚಿತ NAUTICA 25LTR TRAVEL BAG + COMPANY BAG PACK WORTH ₹6,999

DELL VOSTRO

• INTEL CORE i5
• 16GB, 512 GB SSD
• 15.6 FHD
• WIN 11 MSO 24
ಇ.ಎಮ್.ಐ ₹5,916 EFFECTIVE PRICE ₹60,990*
(AFTER CASH BACK)
ಉಚಿತ NAUTICA 25LTR TRAVEL BAG + COMPANY BAG PACK WORTH ₹6,999

LG
55 4K ULTRA HD SMART OLED EVO TV (OLED55C56LA)

ಇ.ಎಮ್.ಐ ₹4,990
ಉಚಿತ: ₹20000 ಮೌಲ್ಯದ FIREBOLTT SMART CALLING WATCH

SAMSUNG
65 4K ULTRA HD SMART OLED TV 65S90F

ಇ.ಎಮ್.ಐ ₹6,990

SONY
55 4K ULTRA HD AI SMART MINI LED GOOGLE TV K-55XR70

ಇ.ಎಮ್.ಐ ₹5,500

IFB
8 ಕೆಜಿ ಫ್ರಂಟ್ ಲೋಡಿಂಗ್

ಇ.ಎಮ್.ಐ ₹3,143
ಉಚಿತ: ₹4,470 ಮೌಲ್ಯದ PREETHI INDUCTION COOKTOP

LG
28ಲೀ ಕನ್ವೆಕ್ಷನ್ ಮೈಕ್ರೋವೇವ್ ಓವೆನ್
MC-2846BR

ಇ.ಎಮ್.ಐ ₹1,175

ALTERNATE TO LPG - GO ELECTRIC

V-GUARD KAFF Prestige Tefal Butterfly Preethi Pigeon

LG SOUNDBAR 3.1.3CH, 400W, DOLBY ATMOS, DTS:X, AI SOUND PRO

OFFER PRICE ₹31,999
ಇ.ಎಮ್.ಐ ₹2,666 MRP ₹89,990

ಮೇ ದಿನದ ವಿಶೇಷ ಕೊಡುಗೆಗಳು

EXCHANGE BONANZA
UPTO ₹25,000
ವರೆಗೂ ಕಡಿತ ಹಳೆಯ ಎಲೆಕ್ಟ್ರಾನಿಕ್ಸ್ ಗೃಹೋಪಯೋಗಿ ವಸ್ತುಗಳ, ಮೊಬೈಲ್‌ಗಳು ಮತ್ತು ಲ್ಯಾಪ್‌ಟಾಪ್‌ಗಳು.
ಎಕ್ಸ್‌ಚೇಂಜ್ ಮೇಲೆ*

CASH BACK BONANZA
UPTO 20%
ಕ್ಯಾಶ್ ಬ್ಯಾಕ್*

FINANCE BONANZA
UPTO ₹15,000
ಕ್ಯಾಶ್ ಬ್ಯಾಕ್*

1 ಇ.ಎಮ್.ಐ ಉಚಿತ*

LG SAMSUNG SONY Haier Panasonic ONIDA IFB Godrej LLOYD Whirlpool BOSCH Electrolux PHILIPS TOSHIBA hp acer DELL Lenovo ASUS vivo oppo ONEPLUS Redmi iPhone JBL
BLUE STAR HAFELE Symphony HAVELLS USHA DAIKIN O GENERAL Prestige VOLTAS HITACHI VOLTAS beko Butterfly Preethi VIJAYALAKSHMI ULTRA EUREKA FORBES pureit Livpure FABER KENSTAR BAJAJ Crompton MAHARAJA WHITELINE V-GUARD ZEBRONICS KAFF OZONE

*Terms & conditions apply. Finance at the sole discretion of the Finance company. Upto 20% Cashback & 1 EMI off on selected brands and models. Upto Rs.15000 Bajaj cash back / vouchers valid only in selected cities. Cash Back / vouchers will be credited to the customer bank account / BFL wallet after clearing 3 EMI. EMI offers the above products based on 12,18,24 & fixed emi schemes .*Exchange offer valid on MRP and Product as to be in good working condition.Exchange value will differ based on the condition of the old product.Free Installation on AC's is valid on selected brands & models.Free holiday package valid on 25000 & above purchase only.

181 ಮೆಗಾ ಸ್ಟೋರ್ಸ್. ದಕ್ಷಿಣ ಭಾರತದ ನಂ.1 ಗೃಹೋಪಯೋಗಿ ವಸ್ತುಗಳ ಮಾರಾಟಗಾರರು. SHOP ONLINE @ www.giriasindia.com
"like" us on facebook HTTPS://WWW.FACEBOOK.COM/GIRIAS.INDIA

STORE LOCATOR

₹2 ಲಕ್ಷ ಲಂಚ: ವಿಎ ಬಂಧನ

ಬೆಂಗಳೂರು: ಪೌತಿ ಖಾತೆ ಮಾಡಿಕೊಡಲು ₹2 ಲಕ್ಷ ಲಂಚ ಪಡೆಯುತ್ತಿದ್ದ ವೇಳೆ, ಬೆಂಗಳೂರು ದಕ್ಷಿಣ ತಾಲ್ಲೂಕಿನ ಬೇಗೂರು ನಾಡ ಕಚೇರಿಯ ಗ್ರಾಮ ಆಡಳಿತಾಧಿಕಾರಿ (ವಿಎ) ಮಂಜುನಾಥ್ ಅವರನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

ಮಂಗಮ್ಮನಪಾಳ್ಯದ ನಿವಾಸಿ ಚೇತನ್. ಎಸ್ ಅವರು ಪೌತಿ ಖಾತೆಗಾಗಿ ಅರ್ಜಿ ಸಲ್ಲಿಸಿದ್ದರು. ಈ ಕೆಲಸ ಮಾಡಿಕೊಡಲು ಮಂಜುನಾಥ್ ಅವರು ₹10 ಲಕ್ಷಕ್ಕೆ ಬೇಡಿಕೆ ಇಟ್ಟು, ₹2 ಲಕ್ಷಕ್ಕೆ ಒಪ್ಪಿಕೊಂಡಿದ್ದರು. ಈ ಬಗ್ಗೆ ಚೇತನ್ ಅವರು ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು.

ಲೋಕಾಯುಕ್ತ ಎಸ್‌ಪಿ ಶಿವಪ್ರಕಾಶ್ ದೇವರಾಜ್ ಅವರ ಮಾರ್ಗದರ್ಶನದಲ್ಲಿ, ಲೋಕಾಯುಕ್ತ ಪೊಲೀಸರು ಕಾರ್ಯಾಚರಣೆ ರೂಪಿಸಿದ್ದರು. ಅದರಂತೆ ದೂರುದಾರರು ಆರೋಪಿಯ ಕಚೇರಿಗೆ ತೆರಳಿ ₹2 ಲಕ್ಷ ನೀಡಿದ್ದರು. ಈ ವೇಳೆ ದಾಳಿ ನಡೆಸಿ, ಆರೋಪಿಯನ್ನು ಬಂಧಿಸಲಾಗಿದೆ. ತನಿಖೆ ಮುಂದುವರೆದಿದೆ ಎಂದು ಪ್ರಕಟಣೆ ತಿಳಿಸಿದೆ.

ಅರ್ಜಿ ಆಹ್ವಾನ

ಬೆಂಗಳೂರು: ಬಡಗನಾಡು ಬ್ರಾಹ್ಮಣ ಮಹಾಸಭಾ ವತಿಯಿಂದ ವಸತಿನಿಲಯ ಪ್ರವೇಶಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.

ಪಿಯುಸಿ, ಪದವಿ, ಡಿಪ್ಲೊಮಾ, ಎಂಜಿನಿಯರಿಂಗ್ ಮತ್ತು ವೈದ್ಯಕೀಯ ಸೇರಿದಂತೆ ಇತರೆ ಕೋರ್ಸ್‌ಗಳನ್ನು ಓದುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಆಸಕ್ತ ವಿದ್ಯಾರ್ಥಿಗಳು ಮೇ 20ರೊಳಗೆ ಅರ್ಜಿ ಸಲ್ಲಿಸಬಹುದು. ಮಾಹಿತಿಗಾಗಿ: 080-2344 5944, 2344 5945 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ, ನಮ್ಮ ಕಕ್ಷಿದಾರರು, ಈ ಕೆಳಕಂಡ 'ಷೆಡ್ಯೂಲ್' ನಲ್ಲಿ ವಿವರಿಸಿರುವ ಮತ್ತು ಇದನ್ನು ಇನ್ನು ಮುಂದೆ "ಷೆಡ್ಯೂಲ್ ಸ್ವತ್ತು" ಎಂದು ಕರೆಯಲ್ಪಡುವ, ಬೆಂಗಳೂರು- 560 020, ಶೇಷಾದ್ರಿಪುರಂ, ಕುಮಾರ ಪಾರ್ಕ್ ಪಶ್ಚಿಮ, ರೈಲ್ವೆ ಪ್ಯಾರಲಲ್ ರಸ್ತೆ, ಸ್ವತ್ತಿನ ಸೈಟ್ ನಂ.25, ಪುರಸಭೆ ಸಂಖ್ಯೆ 89, ಇ-ಪಿಐಡಿ ಸಂಖ್ಯೆ 2002742403, ಹೊಂದಿರುವ, ಸ್ವತ್ತಿನ ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 120 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 80 ಅಡಿ ಒಟ್ಟು 9,600 ಚದರ ಅಡಿ ವಿಸ್ತೀರ್ಣ ಹೊಂದಿರುವ, ನೆಲಮಹಡಿ, ಮೊದಲ ಮಹಡಿ ಮತ್ತು ಎರಡನೇ ಮಹಡಿಯ ಆರ್‌ಸಿಸಿ ಛಾವಣಿಯ ಕಟ್ಟಡವನ್ನು ಒಳಗೊಂಡ ಸ್ವತ್ತನ್ನು ಇದರ ಮಾಲೀಕರಾದ ಶ್ರೀ.ಕೆ.ವಿ. ವೆಂಕಟರಮಣ ಬಿನ್ ಕೆ.ಆರ್. ವೆಂಕಟೇಶಲು, ಶ್ರೀಮತಿ.ಕೆ. ಶಶಿಕಲಾ ಪ್ರಸಾದ್, ಕೋಂ ಕೆ.ವಿ.ಪ್ರಸಾದ್, ಶ್ರೀಮತಿ.ಕೆ. ಶಾಲಿನಿ ಪ್ರಸಾದ್, ಬಿನ್ ಕೆ.ವಿ. ಪ್ರಸಾದ್ ಮತ್ತು ಪೃಥ್ವಿ ಪ್ರಸಾದ್ ಬಿನ್ ಕೆ.ವಿ. ಪ್ರಸಾದ್, ಎಲ್ಲರ ವಾಸ: ನಂ.128, ರೈಲ್ವೆ ಪ್ಯಾರಲಲ್ ರಸ್ತೆ, 1ನೇ ಬ್ಲಾಕ್, ಬಿಡಿಎ ಹಿಂದೆ, ಕುಮಾರ ಪಾರ್ಕ್ ಪಶ್ಚಿಮ, ಶೇಷಾದ್ರಿಪುರಂ, ಬೆಂಗಳೂರು-560020, ಇವರಿಂದ ಖರೀದಿಸಲು ಇಚ್ಛಿಸಿರುತ್ತಾರೆ.

ಷೆಡ್ಯೂಲ್ ಸ್ವತ್ತಿನ ಮಾಲೀಕರು ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದ ಹಕ್ಕು ಪತ್ರಗಳು ಮತ್ತು ಇತರ ಸಂಬಂಧಿತ ದಾಖಲೆಗಳ ಜೆರಾಕ್ಸ್ ಪ್ರತಿಗಳನ್ನು ನನ್ನ ಕಕ್ಷಿದಾರರಿಗೆ ಹಸ್ತಾಂತರಿಸಿದ್ದಾರೆ. ಈ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿ/ವ್ಯಕ್ತಿಗಳು, ಹಕ್ಕು, ಶೇರ್ಷಿಕೆ, ಆಸ್ತಿ, ಹಾಲು ಹೊಂದಿರುವ ಅಥವಾ ಮಾರಾಟಕ್ಕೆ ಸಂಬಂಧಿಸಿದಂತೆ ಯಾವುದೇ ಆಕ್ಷೇಪಣೆ ಹೊಂದಿದ್ದರೆ ಅಂತಹವರು ತಮ್ಮ ಆಕ್ಷೇಪಣೆಗಳನ್ನು ಸೂಕ್ತ ಸಾಕ್ಷಾಧಾರ ಹಾಗೂ ಕಾಗದಪತ್ರಗಳೊಡನೆ, ಈ ಸಾರ್ವಜನಿಕ ಪ್ರಕಟಣೆ ಪ್ರಕಟವಾದ 21 (ಇಪ್ಪತ್ತೊಂದು) ದಿನಗಳ ಕಾಲಾವಧಿಯ ಒಳಗೆ ಕೆಳಗೆ ಸಹಿ ಮಾಡಿದವರಿಗೆ ತಿಳಿಸಬೇಕು, ಮತ್ತು ನಿಗದಿತ ಸಮಯದೊಳಗೆ ಯಾವುದೇ ವಾಸ್ತವ ಆಕ್ಷೇಪಣೆಗಳನ್ನು ಸ್ವೀಕರಿಸದಿದ್ದರೆ, ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಖರೀದಿಸಲು ಯಾವುದೇ ವ್ಯಕ್ತಿ/ವ್ಯಕ್ತಿಗಳಿಂದ ಯಾವುದೇ ಆಕ್ಷೇಪಣೆಗಳು ಅಥವಾ ಹಕ್ಕುಗಳಿಲ್ಲ ಎಂದು ಭಾವಿಸಲಾಗುತ್ತದೆ. ಮತ್ತು 21 ದಿನಗಳ ನಂತರ ಸ್ವೀಕರಿಸಿದ ಯಾವುದೇ ಆಕ್ಷೇಪಣೆಯನ್ನು ಪರಿಗಣಿಸಲಾಗುವುದಿಲ್ಲ ಮತ್ತು ನನ್ನ ಕಕ್ಷಿದಾರರು ಕಾನೂನಿನ ಪ್ರಕಾರ ಷೆಡ್ಯೂಲ್ ಸ್ವತ್ತನ್ನು ಖರೀದಿಸಲು ಮುಂದುವರಿಯುತ್ತಾರೆ.

ಷೆಡ್ಯೂಲ್ ಸ್ವತ್ತು

ಬೆಂಗಳೂರು- 560 020, ಶೇಷಾದ್ರಿಪುರಂ, ಕುಮಾರ ಪಾರ್ಕ್ ಪಶ್ಚಿಮ, ರೈಲ್ವೆ ಪ್ಯಾರಲಲ್ ರಸ್ತೆ, ಇಲ್ಲಿರುವ ಸ್ವತ್ತಿನ ಸೈಟ್ ನಂ.25, ಪುರಸಭೆ ಸಂಖ್ಯೆ 89, ಇ-ಪಿಐಡಿ ಸಂಖ್ಯೆ 2002742403, ಹೊಂದಿರುವ, ಸ್ವತ್ತಿನ ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 120 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 80 ಅಡಿ ಒಟ್ಟು 9,600 ಚದರ ಅಡಿ ವಿಸ್ತೀರ್ಣ ಹೊಂದಿರುವ, ನೆಲಮಹಡಿ, ಮೊದಲ ಮಹಡಿ ಮತ್ತು ಎರಡನೇ ಮಹಡಿಯ ಆರ್‌ಸಿಸಿ ಛಾವಣಿಯ ಕಟ್ಟಡವನ್ನು ಒಳಗೊಂಡ ಸ್ವತ್ತಿಗೆ ಚಕ್ಕುಬಂದಿ:-

ಉತ್ತರಕ್ಕೆ : ರಸ್ತೆ;
ದಕ್ಷಿಣಕ್ಕೆ : ಖಾಸಗಿ ಸ್ವತ್ತು;
ಪೂರ್ವಕ್ಕೆ : ಸ್ವತ್ತಿನ ನಂ.129/90;
ಪಶ್ಚಿಮಕ್ಕೆ : ಸ್ವತ್ತಿನ ನಂ.127/88.

ಜೆ.ಎಸ್. ದಿನೇಶ್, ವಕೀಲರು
ಜೆಎಸ್‌ಡಿ ಲಾ ಫರ್ಮ್
ನಂ.17, 76ನೇ 'ಎ' ಕ್ರಾಸ್, 6ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560 010.
ಮೊಬೈಲ್: 9448020528,
ದೂ: 080-23300528
ಇಮೇಲ್:jsdlawfirm25@gmail.com

ಮತ್ತೊಂದು ಹಂತಕ್ಕೆ ಕಸ ಸಂಘರ್ಷ

ಗುತ್ತಿಗೆದಾರರಿಗೆ ಬೆದರಿಕೆ, ಸಾಕ್ಷ್ಯ ನಾಶಕ್ಕೆ ಕರೀಗೌಡ ಯತ್ನ: ಮುಖ್ಯ ಕಾರ್ಯದರ್ಶಿಗೆ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತದ (ಬಿಎಸ್‌ಡಬ್ಲ್ಯುಎಂಎಲ್) ಸಿಇಒ ಕರೀಗೌಡ ಅವರು ಗುತ್ತಿಗೆದಾರರಿಗೆ ಬೆದರಿಕೆ ಹಾಕಿ, ಖಾಲಿ ಕಾಗದಕ್ಕೆ ಸಹಿ ಹಾಕಿಸಿಕೊಳ್ಳುತ್ತಿದ್ದಾರೆ. ಸಾಕ್ಷ್ಯ ನಾಶಕ್ಕೂ ಮುಂದಾಗಿದ್ದಾರೆ' ಎಂದು ಆರೋಪಿಸಿ ಕಸ ಗುತ್ತಿಗೆದಾರರ ಸಂಘದಿಂದ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆಯಲಾಗಿದೆ.

ಈ ಮೂಲಕ ಬೆಂಗಳೂರು ಮಹಾನಗರ ಸ್ವಚ್ಛತೆ ಮತ್ತು ಲಾರಿ ಮಾಲೀಕರ-ಗುತ್ತಿಗೆದಾರರ ಸಂಘ ಹಾಗೂ ಕರೀಗೌಡ ನಡುವಿನ ಸಂಘರ್ಷ ಮತ್ತೊಂದು ಹಂತಕ್ಕೆ ತಲುಪಿದೆ.

'ಪಾದಚಾರಿ ಮಾರ್ಗದಲ್ಲಿ ವ್ಯಾಪಾರ ವಹಿವಾಟಿನಿಂದ ಉತ್ಪತ್ತಿಯಾಗುವ ಕಸದ ವಿಲೇವಾರಿ ಬಗ್ಗೆ ಚರ್ಚಿಸಲು ನಮ್ಮ ಗುತ್ತಿಗೆದಾರರನ್ನು ಬಿಎಸ್‌ಡಬ್ಲ್ಯುಎಂಎಲ್‌ನ ಕಚೇರಿಗೆ ಕರೀಗೌಡ ಅವರು ಏಪ್ರಿಲ್ 30ರಂದು ಮಧ್ಯಾಹ್ನ 1 ಗಂಟೆಗೆ ಕರೆದಿದ್ದರು. ಮಹದೇವಪುರ ಮತ್ತು ಕೆ.ಆರ್. ಪುರ ವಿಭಾಗದ ಸಹಾಯಕ ಪ್ರಧಾನ ವ್ಯವಸ್ಥಾಪಕರಾದ ಜ್ಯೋತಿ ಮತ್ತು ಶ್ರೀನಿಧಿ ಅವರು ಸಭೆಯಲ್ಲಿ ಹಾಜರಿದ್ದರು. ಸಭೆಯ ಹಾಜರಾತಿ ಪುಸ್ತಕದಲ್ಲಿ ಹಾಳೆ ಇರಿಸಿ, ಬೆದರಿಕೆ ತಂತ್ರವಾಗಿ ನೀವು ಘನತ್ಯಾಜ್ಯ ನಿರ್ವಹಣೆ ಗುತ್ತಿಗೆದಾರರ ಸಂಘದ ಪದಾಧಿಕಾರಿಗಳೇ? ಇಲ್ಲವೇ ಎಂದು ಪ್ರಶ್ನಿಸಿದ್ದಾರೆ' ಎಂದು ಮುಖ್ಯ ಕಾರ್ಯದರ್ಶಿಯವರಿಗೆ ಬರೆದಿರುವ ಪತ್ರದಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಎಸ್.ಎನ್. ಬಾಲಸುಬ್ರಮಣಿಯಂ ತಿಳಿಸಿದ್ದಾರೆ.

'ಸಂಘದ ಪದಾಧಿಕಾರಿಗಳಾಗಿದ್ದಲ್ಲಿ ಮುಚ್ಚಳಿಕೆ ಪತ್ರವನ್ನು ನೀಡುವಂತೆ ಬೆದರಿಸಿದ್ದಾರೆ. ಅಲ್ಲದೆ, ಸಂಘದಲ್ಲಿ ಸದಸ್ಯರಾಗಿದ್ದರೆ ನಿಮಗೆ ಯಾವುದೇ ರೀತಿಯ ರಿಯಾಯಿತಿ ನೀಡುವುದಿಲ್ಲ. ಸಂಘದಲ್ಲಿ ಇಲ್ಲವೆಂದು ಸಹಿ ಹಾಕಿದರೆ ನಿಮಗೆ ಪೂರ್ಣ ಸಹಕಾರ ನೀಡುವುದಾಗಿ ತಿಳಿಸಿದ್ದಾರೆ. ನಾವು ಈಗಾಗಲೇ ಕರೀಗೌಡ ಅವರ ವಿರುದ್ಧ ನ್ಯಾಯಾಲಯದಲ್ಲಿ ದೂರಿನ ಪ್ರಮಾಣ ಪತ್ರ ಸಲ್ಲಿಸಿರುವುದರಿಂದ ಸಾಕ್ಷ್ಯ ನಾಶ ಮಾಡಲು ಹೊರಟಿದ್ದಾರೆ. ಆದ್ದರಿಂದ ಇವರ ವಿರುದ್ಧ ಬೆದರಿಕೆ ಮತ್ತು ಸಾಕ್ಷ್ಯನಾಶ ಆರೋಪದಡಿ ಪ್ರಕರಣ ದಾಖಲಿಸಲು ಅನುಮತಿ ನೀಡಬೇಕು' ಎಂದು ಪತ್ರದಲ್ಲಿ ಕೋರಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯೆ ಪಡೆಯಲು ಕರೀಗೌಡ ಅವರನ್ನು ಸಂಪರ್ಕಿಸಿದಾಗ, ಅವರು ಸ್ಪಂದಿಸಲಿಲ್ಲ.

'ಬೆಂಗಳೂರು ವಕೀಲರ ಸಂಘ' ಸಿಟಿ ಸಿವಿಲ್ ಕೋರ್ಟ್ ಆವರಣದಲ್ಲಿ ಗುರುವಾರ ಆಯೋಜಿಸಿದ್ದ ವಾರ್ಷಿಕೋತ್ಸವದಲ್ಲಿ ಒಡಿಶಾ ಹೈಕೋರ್ಟ್ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರನ್ನು ಸನ್ಮಾನಿಸಲಾಯಿತು. (ಎಡದಿಂದ ಬಲಕ್ಕೆ) ಸಂಘದ ಪದಾಧಿಕಾರಿ ಪಿ.ಆರವಿಂದ ಕಾಮತ್, ಪ್ರಧಾನ ಕಾರ್ಯದರ್ಶಿ ಎಚ್.ವಿ ಪ್ರವೀಣ ಗೌಡ, ಅಧ್ಯಕ್ಷ ವಿವೇಕ್ ಸುಬ್ಬಾರೆಡ್ಡಿ, ಸಿ.ಎಸ್.ಕಾಂತರಾಜು, ಎಂ.ಚಾಮರಾಜ, ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ, ಉಪಾಧ್ಯಕ್ಷ ಗಿರೀಶ್ ಕುಮಾರ್, ಮುನಿರಾಜು ಪಾಲ್ಗೊಂಡಿದ್ದರು —ಪ್ರಜಾವಾಣಿ ಚಿತ್ರ

ಮರು ಮೌಲ್ಯಮಾಪನ: ಕೌಶಿಕ್‌ಗೆ 599 ಅಂಕ

ಸಿ.ಬಿ.ಕೌಶಿಕ್

ಬೆಂಗಳೂರು: ದ್ವಿತೀಯ ಪಿಯುಸಿ ಪರೀಕ್ಷೆಯ ಉತ್ತರ ಪತ್ರಿಕೆಗಳ ಮರು ಮೌಲ್ಯಮಾಪನದ ನಂತರ ಕೆಂಗೇರಿಯ ನ್ಯೂ ನ್ಯಾಷನಲ್ ಕಾಲೇಜಿನ ವಿದ್ಯಾರ್ಥಿ ಸಿ.ಬಿ.ಕೌಶಿಕ್ 599 ಅಂಕಗಳನ್ನು ಪಡೆಯುವ ಮೂಲಕ ರಾಜ್ಯಕ್ಕೆ ದ್ವಿತೀಯ ಸ್ಥಾನ ಪಡೆದಿದ್ದಾರೆ.

ಫಲಿತಾಂಶ ಬಂದಾಗ 596 ಅಂಕಗಳು ಲಭಿಸಿದ್ದವು. ಮರು ಮೌಲ್ಯಮಾಪನದ ಬಳಿಕ ಕೌಶಿಕ್ 599 ಅಂಕಗಳನ್ನು ಗಳಿಸಿದ್ದಾರೆ. ಕನ್ನಡ, ಅರ್ಥಶಾಸ್ತ್ರ, ಬ್ಯುಸಿನೆಸ್ ಸ್ಟಡೀಸ್, ಅಕೌಂಟೆನ್ಸಿ, ಕಂಪ್ಯೂಟರ್ ಸೈನ್ಸ್‌ನಲ್ಲಿ ತಲಾ 100 ಅಂಕಗಳು ಬಂದಿವೆ ಎಂದು ಪ್ರಾಂಶುಪಾಲರು ತಿಳಿಸಿದ್ದಾರೆ.

ನಿಧನ ವಾರ್ತೆ

ಜೋಸೆಫ್ ಸಿಮೋನ್

ಬೆಂಗಳೂರು: ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್‌ನ ನಿವೃತ್ತ ಉದ್ಯೋಗಿ ಜೋಸೆಫ್ ಸಿಮೋನ್ (70) ಅವರು ಏ.28ರಂದು ನಿಧನರಾಗಿದ್ದಾರೆ. ಅವರ ಹುಟ್ಟೂರಾದ ತಮಿಳು ನಾಡಿನ ಮಧುರೈನಲ್ಲಿ ಏ.29ರಂದು ಅಂತ್ಯಕ್ರಿಯೆ ನಡೆದಿದೆ. ಮೃತರಿಗೆ ಪತ್ನಿ, ಪುತ್ರ ಹಾಗೂ ಪುತ್ರಿ ಇದ್ದಾರೆ. ಅವರು ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್‌ನ ಬೆಂಗಳೂರು ಹಾಗೂ ಧಾರವಾಡ ಘಟಕಗಳ ಉತ್ಪಾದನಾ ವಿಭಾಗದಲ್ಲಿ 28 ವರ್ಷ ಕಾರ್ಯನಿರ್ವಹಿಸಿದ್ದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಶೇಷಾದ್ರಿಪುರಂ ಕಾಲೇಜಿನಿಂದ ಕಾರ್ಯಕ್ರಮ

'ಯುದ್ಧ ಬಿಡಿ, ಗಾಂಧಿ ತತ್ವ ಅಳವಡಿಸಿಕೊಳ್ಳಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಎಲ್ಲದಕ್ಕೂ ಯುದ್ಧಕ್ಕೆ ಮುಂದಾಗದೇ ನಾವೆಲ್ಲರೂ ಶಾಂತಿದೂತರಾಗೋಣ ಸಾಮಾನ್ಯ ಜನರ ಬದುಕಿನ ಮೇಲಾಗುವ ಪರಿಣಾಮ ತಪ್ಪಿಸೋಣ' ಎಂದು ಸಾಹಿತಿ ಹಂ.ಪ.ನಾಗರಾಜಯ್ಯ ಸಲಹೆ ನೀಡಿದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಹಾಗೂ ಶೇಷಾದ್ರಿಪುರಂ ಕಾಲೇಜಿನ ಗಾಂಧಿ ಅಧ್ಯಯನ ಕೇಂದ್ರದ ಸಹಯೋಗದಲ್ಲಿ ಗುರುವಾರ ಆಯೋಜಿಸಿದ್ದ 'ಯುದ್ಧ ಬೇಡ, ಶಾಂತಿ ಬೇಕು' ಎನ್ನುವ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

'ಜಗತ್ತಿನ ಯಾವುದೇ ದೇಶದಲ್ಲಿ ಯುದ್ಧ ನಡೆದರೂ ಅದರ ಪರಿಣಾಮ ಪ್ರತಿಯೊಬ್ಬರ ಮೇಲೂ ಒಂದಿಲ್ಲ ಒಂದು ರೀತಿಯಲ್ಲಿ ಆಗಲಿದೆ. ಇದರಿಂದ ಜನ ತೊಂದರೆಗೆ ಸಿಲುಕಬೇಕಾಗುತ್ತದೆ. ಗಾಂಧಿ ತತ್ವ ಅಳವಡಿಸಿಕೊಂಡು ಸಮಾಜಮುಖಿಯಾಗೋಣ' ಎಂದು ಹೇಳಿದರು.

ಸಾಹಿತಿ ಎಸ್.ಜಿ.ಸಿದ್ದರಾಮಯ್ಯ ಮಾತನಾಡಿ, 'ಜಗತ್ತಿನಲ್ಲಿ ನೆಲ್ಸನ್ ಮಂಡೇಲಾ, ಬರಾಕ್ ಒಬಾಮ ಅವರಂತಹ ನಾಯಕರಿಗೂ ಪ್ರೇರಣೆಯಾದದ್ದು ಮಹಾತ್ಮ ಗಾಂಧಿಯೇ. ಶಾಂತಿಯ ದಿಕ್ಕಿನಲ್ಲಿ ನಡೆದರೆ ಸಮಾಜ ಸುಖಿಯಾಗಿರಲಿದೆ. ವಿಶ್ವದ ಹಲವು ಸಮಸ್ಯೆಗಳಿಗೆ ಗಾಂಧಿ ಚಿಂತನೆಯೇ ಪರಿಹಾರ' ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ವೂಡೇ ಪಿ.ಕೃಷ್ಣ ಮಾತನಾಡಿ, 'ಯುದ್ಧ ಆರಂಭವಾಯಿತು ಎಂದರೆ ಹಲವು ದೇಶಗಳಲ್ಲಿ ಅನಿಲ, ತೈಲದ ಸಮಸ್ಯೆ ಶುರುವಾಗಿ ಸಾಮಾನ್ಯ ಜನರನ್ನು ಬಾಧಿಸುತ್ತದೆ. ಕಟ್ಟಡ ನಿರ್ಮಾಣ ಸಾಮಗ್ರಿ ದುಬಾರಿಯಾಗಿ ಜನ ತೊಂದರೆ ಅನುಭವಿಸುತ್ತಾರೆ. ಯೂರಿಯಾ ಬೆಲೆ ಏರಿಕೆಯಾದರೆ ಕೃಷಿ ಮೇಲೆ ಪರಿಣಾಮ ಉಂಟಾಗಿ ಆಹಾರ ಉತ್ಪಾದನೆ ಕುಂಠಿತವಾಗಲಿದೆ. ಆದ್ದರಿಂದ ಸುಮ್ಮನೆ ಕೂರದೇ ಪ್ರತಿಯೊಬ್ಬರೂ ಯುದ್ಧವನ್ನು ವಿರೋಧಿಸಬೇಕು' ಎಂದು ಹೇಳಿದರು.

ಸರ್ವೋದಯ ನಾಯಕ ಇ.ಪಿ.ಮೆನನ್, ಗಾಂಧಿ ಚಿಂತಕ ಜಿ.ಬಿ.ಶಿವರಾಜು, ಗಾಂಧಿ ಸ್ಮಾರಕ ನಿಧಿ ಕಾರ್ಯದರ್ಶಿ ಎಂ.ಸಿ.ನರೇಂದ್ರ, ಶೇಷಾದ್ರಿಪುರಂ ಕಾಲೇಜು ಆಡಳಿತ ಸಲಹಾ ಮಂಡಳಿ ಅಧ್ಯಕ್ಷ ಎಂ.ಎಸ್.ನಟರಾಜ್, ಪ್ರಾಂಶುಪಾಲ ಮೇಜರ್ ಐ.ಆನಂದಪ್ಪ, ಗಾಂಧಿ ಅಧ್ಯಯನ ಕೇಂದ್ರದ ಸಂಚಾಲಕಿ ಎಚ್.ಎಂ.ಗೀತಾ ಉಪಸ್ಥಿತರಿದ್ದರು.

ಯುದ್ಧ ಬೇಡ ಕುರಿತ ಜಾಥಾವನ್ನು ಗುರುವಾರ ಆಯೋಜಿಸಲು ಹಿಂದೆಯೇ ನಿರ್ಧರಿಸಲಾಗಿತ್ತು. ಆದರೆ, ಅದಕ್ಕೆ ಅನುಮತಿ ಸಿಗದಿರುವುದರಿಂದ ಕಾರ್ಯಕ್ರಮ ಗಾಂಧಿ ಭವನ ಆವರಣಕ್ಕೆ ಸೀಮಿತವಾಯಿತು. ಕಾಲೇಜು ವಿದ್ಯಾರ್ಥಿಗಳು ಯುದ್ಧ ವಿರೋಧಿಸಿ, ಶಾಂತಿ ಬೆಂಬಲಿಸುವ ಫಲಕಗಳನ್ನು ಹಿಡಿದು ಗಮನ ಸೆಳೆದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಶೇಷಾದ್ರಿಪುರಂ ಶಿಕ್ಷಣ ದತ್ತಿ ಸಹಯೋಗದಲ್ಲಿ ಗುರುವಾರ 'ಯುದ್ಧ ಬೇಡ-ಶಾಂತಿ ಬೇಕು' ಜಾಥಾ ನಡೆಯಿತು

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

EDUCATION CORNER

ಕ್ಲಾಸಿಫೈಡ್ಸ್

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

'WE-FIX' LEAKING
ROOF, SUMP, SKYLIGHT, BATHROOM, TILING, HOUSE PAINTING, ROOF COOL EPOXY COATING, MACBOND. 9448572697

REAL ESTATE SELLING

Industrial & Factory

Tumkur Road

9.5 ACRES. Sale/ Built to Suite. Industrial Converted Land Suitable for Industry/ Warehouse/ Education. 9141326819

PUBLIC NOTICE
To Place your Classified Ads Contact
9731810277

Sites

Vishweshwariah Layout

DIRECT OWNER
30x40 Site Sale VISHWESHWARAIAH LAYOUT 2nd Block near 100 feet-road, Opposite-Park. ₹11250/-. 9742681666

JOB OPPORTUNITIES

General

BANK REQUIRES
Scanning Staff +2 /Any Degree, Age: 20 to 30 Bangalore (All City) Mobile: 7639430742

Drivers

ಕಾರ್ ಡ್ರೈವರ್ಸ್
ಬೇಕಾಗಿದ್ದಾರೆ ಬಸವನಗುಡಿಯ ಯಡಿಯೂರ್ ಲೇಕ್ ಸಮೀಪ ವಾಸಿಸುತ್ತಿರುವ ಕುಟುಂಬಕ್ಕೆ.
ಕೆಲಸದ ಸಮಯ: ಸೋಮ - ಶನಿ, ಬೆಳಗ್ಗೆ 9 ರಿಂದ ರಾತ್ರಿ 7.45.
ಸಂಬಳ: 21,000/-. ಬಸವನಗುಡಿ, ಕೆ. ಆರ್. ರಸ್ತೆ, ತ್ಯಾಗರಾಜನಗರದ ಸುತ್ತ ವಾಸವಾಗಿರುವವರಿಗೆ ಆದ್ಯತೆ.
ಸಂದರ್ಶನಕ್ಕಾಗಿ:
ಬರುವ ಭಾನುವಾರ 9-11.30 ಒಳಗೆ, ಕೆ. ಆರ್. ರಸ್ತೆ, ಬಸವನಗುಡಿ, ಯಡಿಯೂರ್ ಲೇಕ್ ಸಮೀಪ ಇರುವ ಗರಡಿ ಆಪಾರ್ಟಮೆಂಟ್ ಗೆ ಡಿಎಲ್ ಜೊತೆಗೆ ಕರೆ ಮಾಡಿ ಬನ್ನಿ.
ಸಂಪರ್ಕಿಸಿ:

ಜಲಮಂಡಳಿ: 'ಸರಳ ಕಾವೇರಿ' ಅವಧಿ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಜಲಮಂಡಳಿಯು ಸರಳ ಕಾವೇರಿ ಯೋಜನೆಯಡಿ ನೀರಿನ ಸಂಪರ್ಕ ಪಡೆಯುವ ಅವಧಿಯನ್ನು ವಿಸ್ತರಣೆ ಮಾಡಿದೆ. ಕಂತಿನ ಮೂಲಕ ಹಣ ಪಾವತಿ ಮಾಡುವ ವ್ಯವಸ್ಥೆ (ಇಎಂಐ) ಮುಂದುವರಿಸಿದೆ.

'ನಾಗರಿಕರಿಗೆ ಆರ್ಥಿಕ ಹೊರೆಯಿಲ್ಲದೇ ಕಾವೇರಿ ನೀರಿನ ಸಂಪರ್ಕ ಕಲ್ಪಿಸಲು ಜಾರಿಗೆ ತಂದಿರುವ ಸರಳ ಕಾವೇರಿ ಯೋಜನೆಯನ್ನು ಮುಂದಿನ ಆದೇಶದವರೆಗೆ ವಿಸ್ತರಿಸಲಾಗಿದೆ' ಎಂದು ಬೆಂಗಳೂರು ಜಲಮಂಡಳಿ ಅಧ್ಯಕ್ಷ ಡಾ.ರಾಮ್ ಪ್ರಸಾತ್ ಮನೋಹರ್ ತಿಳಿಸಿದ್ದಾರೆ.

ಕಾವೇರಿ ನೀರಿನ ಸಂಪರ್ಕ ಪಡೆಯುವ ವೇಳೆ ಪಾವತಿಸಬೇಕಾದ ಪ್ರೊರೇಟಾ ಶುಲ್ಕವನ್ನು ಒಮ್ಮೆಲೇ ಪಾವತಿಸಲು ಸಾಧ್ಯವಾಗದವರು ಮತ್ತು ಅಪಾರ್ಟ್‌ಮೆಂಟ್ ಅಸೋಸಿಯೇಷನ್‌ನವರಿಗೆ ಇಎಂಐ ಸೌಲಭ್ಯ ನೀಡಲು ನಿರ್ಧರಿಸಲಾಗಿದೆ ಎಂದು ಹೇಳಿದ್ದಾರೆ. 600 ಅಡಿ ವಿಸ್ತೀರ್ಣದ ನಿವೇಶನದಲ್ಲಿ ಕಟ್ಟಡ ನಿರ್ಮಿಸಿರುವ ಸಣ್ಣ ನಿವೇಶನದಾರರು ಕೇವಲ ₹1,000 ಆರಂಭಿಕ ಪಾವತಿಸಿ ನೀರಿನ ಸಂಪರ್ಕ ಪಡೆದು ಉಳಿದ ಮೊತ್ತವನ್ನು ಸುಲಭ ಕಂತುಗಳಲ್ಲಿ ಪಾವತಿಸಬಹುದು. ಒಟ್ಟು ಶುಲ್ಕದ ಶೇ 20ರಷ್ಟು ಮೊತ್ತವನ್ನು ಆರಂಭದಲ್ಲಿ ಪಾವತಿಸಿ ಸಂಪರ್ಕ ಪಡೆಯಬಹುದು. ಉಳಿದ ಶೇ 80ರಷ್ಟು ಮೊತ್ತವನ್ನು ಪಾವತಿಸಲು 12 ತಿಂಗಳ ಕಾಲಾವಕಾಶ ಇದೆ.

ಒಮ್ಮೆಲೇ ದೊಡ್ಡ ಮೊತ್ತ ಪಾವತಿಸಲು ಕಷ್ಟಪಡುವ ಅಪಾರ್ಟ್‌ಮೆಂಟ್‌ಗಳ ಅಸೋಸಿಯೇಷನ್‌ಗಳಿಗೂ ಇದು ಉಪಯೋಗವಾಗಲಿದೆ. ಕೇವಲ ಮನೆಗಳಿಗೆ ಮಾತ್ರವಲ್ಲದೆ, ವಾಣಿಜ್ಯ ಕಟ್ಟಡಗಳಿಗೂ ಇಎಂಐ ಮೂಲಕ ಸರಳ ಕಾವೇರಿ ಸೌಲಭ್ಯವನ್ನು ವಿಸ್ತರಿಸಲಾಗಿದೆ. ಗೃಹೇತರ ಗ್ರಾಹಕರು ಕೂಡ ಇದರ ಉಪಯೋಗ ಪಡೆದುಕೊಳ್ಳಬಹುದಾಗಿದೆ ಎಂದು ತಿಳಿಸಿದ್ದಾರೆ.

Focus Sectors

- Gems & Jewellery
- Textiles & Apparels
- Agro & Food Processing
- Chemicals & Petrochemicals
- Tourism

Key Features of the Conference

- Inaugural Ceremony
- Sector-specific Seminars
- Country Seminars
- Regional Awards (MSMEs/Artisans)
- Regional MSME Conclave
- Panel Discussions
- Round Table Conference
- Reverse Buyer-Seller Meet
- Udyami Mela
- Trade Show/Exhibition
- B2B/B2G Meetings
- Excursion/Industrial Visits
- Vendor Development Programme
- Valedictory Session

Inauguration by
Shri Bhupendrabhai Patel
Hon'ble Chief Minister, Gujarat
in the august presence of
Shri Harsh Sanghavi
Hon'ble Deputy Chief Minister, Gujarat

1st May, 2026, Friday
09:30 AM
AURO University, Surat, Gujarat

GUJARAT Sthapana Diwas
1st May, 2026

"Vibrant Gujarat Regional Conference will open a new direction for Gujarat's industrial excellence."
- Shri Harsh Sanghavi, Hon'ble Deputy Chief Minister, Gujarat

Vibrant Gujarat Regional Exhibition 1st- 5th May, 2026 | 10:00 AM to 05:30 PM

Scan QR code for website

Live Telecast on: CMOGuj CMOGuj CMOGujarat CMOGujarat vibrantgujarat vibrantgujarat vibrant_gujarat vibrantgujarat

Partner Countries: Japan, Rwanda, Singapore, Ukraine

Partner Organisations: JETRO, US-INDIA, AMCHAM INDIA, kotra Korea Trade-Investment Promotion Agency

Scan QR code for location

‘ನಟ ಎಲ್ಲಾ ರೀತಿಯ ಪಾತ್ರಗಳನ್ನು ಮಾಡಬೇಕು’

ಧ್ರುವ ಸರ್ಜಾ ನಟನೆಯ ‘KD’ ಚಿತ್ರ ಏ.30ರಂದು ತೆರೆಕಂಡಿದೆ. ವರ್ಷಕ್ಕೆ ಎರಡು ಸಿನಿಮಾಗಳನ್ನು ನೀಡಬೇಕೆಂಬ ಗುರಿ ಹೊಂದಿರುವ ಅವರು ತಮ್ಮ ಸಿನಿಪಯಣ ಕುರಿತು ಮಾತನಾಡಿದ್ದಾರೆ.


ಧ್ರುವ ಸರ್ಜಾ

- ವಿನಾಯಕ ಕೆ.ಎಸ್.

• ಕಾಳಿದಾಸನಿಗೂ ರಕ್ತಪಾತಕ್ಕೂ ಸಂಬಂಧ ಏನು?!

ಕಾಳಿದಾಸ ಪಾತ್ರದ ಹೆಸರಷ್ಟೆ. ಕಾಳಿಯ ದಾಸ ಅಂತಲೂ ಅಂದುಕೊಳ್ಳಬಹುದು. ಸಾಮಾನ್ಯ ಕುಟುಂಬದ ಮುಗ್ಧ ಹುಡುಗ. ಪ್ರೀತಿ, ಪ್ರೇಮ, ತುಂಟಾಟಗಳಿಂದ ಕೂಡಿದ ಪಾತ್ರ. ಆದರೆ ಬದುಕಿನ ಕೆಲ ಸನ್ನಿವೇಶಗಳು ಆತನನ್ನು ಕೆರಳುವಂತೆ ಮಾಡುತ್ತವೆ. ಯಾಕೆ ಆತ ಆ ರೂಪ ತಾಳುತ್ತಾನೆ? ಅದರಿಂದ ಏನೆಲ್ಲ ಆಗುತ್ತದೆ ಎಂಬುದೇ ಒಟ್ಟಾರೆ ಕಥೆ.

• ನಿಮ್ಮ ಹಿಂದಿನ ಸಿನಿಮಾಗಳ ರೀತಿಯಲ್ಲಿಯೇ ಇದು ಸಂಪೂರ್ಣ ಆ್ಯಕ್ಷನ್ ಸಿನಿಮಾವೇ?

ಇದು ಸಂಪೂರ್ಣ ಪ್ರೇಮ್ ಸಿನಿಮಾ! ಅವರ ಕಲ್ಪನೆಯಲ್ಲಿ ಮೂಡಿದ ಕಥೆಯಿದು. ನಮ್ಮ ನೆಲದ ಬೇರುಗಳು, ಸಂಸ್ಕೃತಿ ಎಲ್ಲವೂ ಕಥೆಯ ಭಾಗ. ಮಂಡ್ಯ, ಮೈಸೂರು ಭಾಗದ ಭಾಷೆ, ಆಚರಣೆಗಳಿವೆ. ಪ್ರೇಮ್ ಅವರ ಬ್ರ್ಯಾಂಡ್ ಸಿನಿಮಾ. ಈ ಕಥೆಗೆ ಇಷ್ಟು ಆ್ಯಕ್ಷನ್ ಅವಶ್ಯಕತೆಯಿತ್ತು. ಹಿಂದಿನ ಸಿನಿಮಾಗಳ ಹೋಲಿಕೆ ಇಲ್ಲ.

• ನೀವು ಆ್ಯಕ್ಷನ್ ಕಥೆಗಳಿಗಷ್ಟೇ ಸೀಮಿತವಾಗುತ್ತಿರುವಿರಾ?

ನಟನಾಗಿ ಬೇರೆ, ಬೇರೆ ರೀತಿಯ ಪಾತ್ರಗಳನ್ನು ಯತ್ನಿಸುವ ಉದ್ದೇಶವಿತ್ತು. ನಟನಾಗಿ ಎಲ್ಲ ರೀತಿಯ ಪಾತ್ರ ಮಾಡಬೇಕು. ಪ್ರೇಮ್ ರೀತಿಯ ನಿರ್ದೇಶಕರು ಸಿಕ್ಕಾಗ ಅವರ ಕಲ್ಪನೆಯ ಪಾತ್ರಕ್ಕೆ ನ್ಯಾಯ ಒದಗಿಸುವ ಜವಾಬ್ದಾರಿ ನನ್ನ ಮೇಲಿದೆ. ‘ಭರ್ಜರಿ’ ಆದ ನಂತರ ಈ ರೀತಿ ಪಾತ್ರ ಮಾಡಿರಲಿಲ್ಲ. ‘KD’ ಚಿತ್ರದಲ್ಲಿ ಆ್ಯಕ್ಷನ್ ಮಾತ್ರವಲ್ಲ, ಪ್ರೇಮ ಸಲ್ಲಾಪ, ಹಾಸ್ಯ ಎಲ್ಲವೂ ಇವೆ.

• ಈ ಚಿತ್ರಕ್ಕಾಗಿ ನೀವು ಸಾಕಷ್ಟು ರಿಸ್ಕ್ ತೆಗೆದುಕೊಂಡಿದ್ದೀರಿ...

ಎಲ್ಲ ನಟರಿಗೂ ರಿಸ್ಕ್ ಅನ್ನೋದು ಇದ್ದೇ ಇರುತ್ತೆ. ಕೇವಲ ನಟನೆಯಲ್ಲಿ ಮಾತ್ರವಲ್ಲ, ಎಲ್ಲ ಕೆಲಸದಲ್ಲಿಯೂ ರಿಸ್ಕ್ ಇರುತ್ತದೆ. ಅಷ್ಟು ರಿಸ್ಕ್ ತೆಗೆದುಕೊಂಡರೆ ಮಾತ್ರ ತಕ್ಕ ಫಲಿತಾಂಶ ನಿರೀಕ್ಷೆ ಮಾಡಲು ಸಾಧ್ಯ. ನಾವು ಹಿಂದೆ ಮಾಡಿದ್ದನ್ನು ಮೀರುವ ಯತ್ನವನ್ನಾದರೂ ಮಾಡಲೇಬೇಕಲ್ಲವೆ? ಆ ರೀತಿ ಪ್ರಯತ್ನ ಇಲ್ಲಿದೆಯಷ್ಟೆ.

• ಹಾಡಿನ ವಿವಾದ, ಸೆನ್ಸಾರ್ ಸಮಸ್ಯೆ ಮೊದಲಾದವು ನಿಮ್ಮ ವರ್ಚಸ್ಸಿಗೆ ಧಕ್ಕೆ ಮಾಡಬಹುದೇ?

ಕೆಲವು ವಿಷಯಗಳು ಕೆಲವರಿಗೆ ಇಷ್ಟವಾಗುತ್ತೆ. ಕೆಲವರಿಗೆ ಆಗಲ್ಲ. ಅದನ್ನು ಸರಿಪಡಿಸಲೆಂದೇ ಸೆನ್ಸಾರ್ ಮಂಡಳಿ ಇರುತ್ತದೆ. ಅವರ ಕೆಲಸ ಅವರು ಮಾಡಿದ್ದಾರೆ. ಇದರಿಂದ ಯಾರ ವರ್ಚಸ್ಸಿಗೂ ಧಕ್ಕೆ ಇಲ್ಲ. ಕೆಲವೊಮ್ಮೆ ನಾವು ತಪ್ಪು ಮಾಡಿರುತ್ತೇವೆ. ಅದನ್ನು ತಿದ್ದಲು ಮೇಲಿನವರು ಇರುತ್ತಾರೆ. ಅದೇ ರೀತಿ ಸೆನ್ಸಾರ್ ಮಂಡಳಿ ಸಮಾಜಕ್ಕೆ ಪೂರಕವಲ್ಲದ ಅಂಶಗಳನ್ನು ಸರಿಪಡಿಸುವಂತೆ ಕೇಳಿದೆ. ಅದನ್ನು ಮಾಡಿದ್ದರಿಂದಲೇ ಸಿನಿಮಾ ಬಿಡುಗಡೆಯಾಗುತ್ತಿದೆ. ಅದು ಸಿನಿಮಾಕ್ಕಿರುವ ಕಾನೂನು. ಅದನ್ನು ಎಲ್ಲರೂ ಪಾಲಿಸಲೇಬೇಕು.

• ದೊಡ್ಡ ತಾರಾಬಳಗವೇ ಈ ಚಿತ್ರದಲ್ಲಿದೆ. ಅವರೊಂದಿಗೆ ನಟಿಸಿದ ಅನುಭವ ಹೇಗಿತ್ತು?

ನಾನು ಪ್ರತಿ ಹಂತದಲ್ಲಿಯೂ ಎಲ್ಲರಿಂದಲೂ ಕಲಿಯುತ್ತೇನೆ ಎಂಬ ಮನಸ್ಥಿತಿಯವನು. ಸಂಜಯ್ ದತ್, ರವಿಚಂದ್ರನ್, ಸುದೀಪ್ ಸೇರಿದಂತೆ ಇಲ್ಲಿನ ಪ್ರತಿ ನಟರೊಂದಿಗೆ ನಟಿಸಿದ್ದು ಒಂದೊಂದು ರೀತಿಯ ಪಾಠ. ಕೆಲವು ಸನ್ನಿವೇಶಗಳು ಎಂದಿಗೂ ಮರೆಯಲಾಗದ ಅನುಭವ ನೀಡುತ್ತವೆ.

• ನಿಮ್ಮ ಸಿನಿಮಾಕ್ಕೆ ಉದ್ದುದ್ದ ಸಾಲಿನ ಸಂಭಾಷಣೆಯೇ ಶಕ್ತಿಯೇ?

ನನ್ನ ಚಿತ್ರದಲ್ಲಿ ಸಂಭಾಷಣೆಗಳನ್ನು ನಿರೀಕ್ಷೆ ಮಾಡುತ್ತಾರೆ. ಕುಟುಂಬ ಕೇಂದ್ರಿತ ವಿಷಯಗಳನ್ನು ಬಯಸುತ್ತಾರೆ. ಅಂಥ ಸ್ಕ್ರಿಪ್ಟ್‌ಗಳನ್ನು ಆಯ್ದುಕೊಳ್ಳುವೆ.

• ಹೆಚ್ಚು ಸಿನಿಮಾಗಳನ್ನು ಮಾಡಬೇಕೆಂಬ ನಿಮ್ಮ ಸಂಕಲ್ಪ ಈಡೇರುತ್ತಿದೆಯಾ?

ಸುಮಾರು 50-60 ಕಥೆ ಕೇಳಿರುವೆ. ಅದರಲ್ಲಿ ಉತ್ತಮವಾಗಿದ್ದನ್ನು ಮಾಡುವೆ. ನಿರ್ದೇಶಕರು ಹೊಸಬರಾಗಿರಲಿ, ಹಳೆಬರಾಗಿರಲಿ. ಕಥೆ ಮನರಂಜಿಸುವಂತಿರಬೇಕು. ವರ್ಷಕ್ಕೆ ನನ್ನ ಎರಡು ಸಿನಿಮಾಗಳು ಬಿಡುಗಡೆಯಾಗಬೇಕೆಂಬ ಹಾದಿಯಲ್ಲಿಯೇ ಕೆಲಸ ಮಾಡುತ್ತಿರುವೆ.

• ನಿಮ್ಮ ಮುಂದಿನ ಸಿನಿಮಾಗಳು...

ಸದ್ಯಕ್ಕೆ ‘ಕ್ರಿಮಿನಲ್’ ಚಿತ್ರದ ಚಿತ್ರೀಕರಣ ನಡೆಯುತ್ತಿದೆ. ಆ ಸಿನಿಮಾವನ್ನು ಈ ವರ್ಷದ ಅಂತ್ಯದೊಳಗೆ ತೆರೆಗೆ ತರುವ ಯೋಜನೆಯಿದೆ. ಅದರ ಹೊರತಾಗಿ ಎರಡು ಕಥೆಗಳನ್ನು ಕೇಳಿರುವೆ. ಸ್ಕ್ರಿಪ್ಟ್ ಕೆಲಸ ಅಂತಿಮ ಹಂತದಲ್ಲಿದೆ. ❖

ಗೌರಿಶಂಕರ್

‘ಕಾಮನ್‌ಮ್ಯಾನ್’ ಆದ ಗೌರಿಶಂಕರ್

‘ಕೆರೆಬೇಟೆ’ ಸಿನಿಮಾದಿಂದ ಗಮನ ಸೆಳೆದಿದ್ದ ನಟ ಗೌರಿಶಂಕರ್ ಈಗ ‘ಕಾಮನ್ ಮ್ಯಾನ್’ ಆಗಿ ಬಂದಿದ್ದಾರೆ. ಓಂ ಸಾಯಿಪ್ರಕಾಶ್ ಕಥೆ ಬರೆದು, ನಿರ್ದೇಶಿಸಿರುವ ಈ ಚಿತ್ರದ ಶೀರ್ಷಿಕೆ ಹಾಗೂ ಫಸ್ಟ್ ಲುಕ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿತು.

‘ನನ್ನ ನಿರ್ದೇಶನದ 106ನೇ ಚಿತ್ರವಿದು. ಸಾಮಾನ್ಯ ವ್ಯಕ್ತಿಯೊಬ್ಬ ರಾಜ್ಯದ ಮುಖ್ಯಮಂತ್ರಿಯಾದರೆ ಹೇಗಿರುತ್ತದೆ ಎಂಬುದೇ ಕಥೆ. ಜೀವನದಲ್ಲಿ ಪ್ರತಿಯೊಬ್ಬರಿಗೂ ಒಂದೊಂದು ಆಸೆ ಇರುತ್ತದೆ. ಚಿತ್ರದಲ್ಲಿ ನಾಯಕ ಓರ್ವ ಕೀಲ. ಆತ ಅನಿರೀಕ್ಷಿತವಾಗಿ ರಾಜ್ಯದ ಮುಖ್ಯಮಂತ್ರಿ ಆಗುತ್ತಾನೆ. ನಂತರ ಆತ ಏನೇನು ಮಾಡಬಹುದು?, ಸಮಾಜದಲ್ಲಿ ಏನಾದರೂ ಸುಧಾರಣೆ ಮಾಡಲು ಸಾಧ್ಯವಾಗುತ್ತದೆಯಾ? ಎಂಬುದನ್ನು ಕುತೂಹಲಕರವಾಗಿ ಹೇಳುವ ಪ್ರಯತ್ನ ಮಾಡಿದ್ದೇನೆ. ನಾಯಕನ ತಂದೆ ಓರ್ವ ಕಲಾವಿದ. ಮಗ ಮುಖ್ಯಮಂತ್ರಿಯಾದ ಬಳಿಕ ತಂದೆಯ ಸ್ಥಿತಿ ಹೇಗಿರುತ್ತದೆ ಎಂಬುದು ಕಥೆಯಲ್ಲಿ ಬರುತ್ತದೆ. ಇದು ಕಂಟೆಂಟ್ ಸಿನಿಮಾ ಹೊರತು, ಜಾತ್ರೆ ಸಿನಿಮಾವಲ್ಲ’ ಎಂದರು ಓಂ ಸಾಯಿಪ್ರಕಾಶ್.

ಸುರಭಿ ಫಿಲ್ಮ್ಸ್ ಮೂಲಕ ಎನ್. ನರಸಿಂಹಮೂರ್ತಿ ಬಂಡವಾಳ ಹೂಡಿದ್ದಾರೆ. ಸೋನಾ ಲದ್ವಾ ನಾಯಕಿ. ‘ನನ್ನ ಅಭಿನಯದ ಮೂರನೇ ಚಿತ್ರವಿದು. ನಿರ್ದೇಶಕರು ಹಾಕಿಕೊಂಡ ಯೋಜನೆ ಪ್ರಕಾರವೇ ಸಿನಿಮಾ ಮಾಡಿ ಮುಗಿಸಿದ್ದಾರೆ. ‘ಕೆರೆಬೇಟೆ’ ನಂತರ ಒಂದೊಳ್ಳೆ ಕಥೆಗಾಗಿ ಕಾಯುತ್ತಿದ್ದೆ. ಬಯಸಿದಂಥ ಪಾತ್ರವೇ ಹುಡುಕಿಕೊಂಡು ಬಂದಿದೆ. ನಿರ್ದೇಶಕರು ತುಂಬಾ ಶಿಸ್ತುಬದ್ಧವಾಗಿ ಸಿನಿಮಾ ಮಾಡಿದ್ದಾರೆ. ಅವರಿಂದ ಕಲಿಯುವುದು ಬಹಳ ಇದೆ ಅನ್ನಿಸಿತು. ನಮಗೆಲ್ಲ ಅವರ ಕೆಲಸವೇ ದೊಡ್ಡ ಪಾಠ. ಯಾವ ಸಿನಿಮಾವೂ ಕಥೆಗಿಂತ ದೊಡ್ಡದಲ್ಲ ಎಂಬ ಅವರ ಮಾತು ಖಂಡಿತ ನಿಜ’ ಎಂದರು ಗೌರಿಶಂಕರ್.

‘ಈ ಹಿಂದೆ ಎರಡು ಸಿನಿಮಾಗಳನ್ನು ಮಾಡಿ ಕೈಸುಟ್ಟುಕೊಂಡಿದ್ದೆ. ಅದರಿಂದ ಸಾಕಷ್ಟು ಪಾಠ ಕಲಿತು ಈ ಸಿನಿಮಾವನ್ನು ಬಹಳ ಯೋಜಿತವಾಗಿ ಮಾಡಿದ್ದೇವೆ. 32 ದಿನಗಳಲ್ಲಿ ಚಿತ್ರೀಕರಣ ಮುಗಿಸಿದ್ದೇವೆ. ಸಿನಿಮಾ ಪ್ರಾರಂಭವಾಗಿ 90 ದಿನಗಳ ಒಳಗೆ ತೆರೆಗೆ ಬರಲಿದೆ. ನಿರ್ಮಾಣದ ಜತೆಗೆ ಮುಖ್ಯಮಂತ್ರಿ ಪಾತ್ರದಲ್ಲಿಯೂ ನಟಿಸಿದ್ದೇನೆ’ ಎಂದರು ನಿರ್ಮಾಪಕ.

ವಿನಯಚಂದ್ರ ಸಂಗೀತ ನಿರ್ದೇಶನವಿದ್ದು, ನಾಲ್ಕು ಹಾಡುಗಳಿವೆ. ಜೆ.ಜಿ.ಕೃಷ್ಣ ದೀಪಕ್ ಛಾಯಾಚಿತ್ರಗ್ರಹಣವಿದೆ. ಗಣೇಶರಾವ್ ಕೇಸರಕರ್, ಎಸ್ಕಾರ್ಟ್ ಶ್ರೀನಿವಾಸ್, ಪ್ರಕಾಶ್ ತೂಮಿನಾಡು ಮುಂತಾದವರು ಚಿತ್ರದಲ್ಲಿದ್ದಾರೆ. ❖

ಚಿತ್ರತಂಡ

ಆಂಚಲ್

ಮೇ 8ರಂದು ‘ಧೃತಿ’ ತೆರೆಗೆ

ಹೆಣ್ಣಿನ ಶೋಷಣೆ ಕುರಿತಾದ ಕಥೆಯನ್ನು ಹೊಂದಿರುವ ‘ಧೃತಿ’ ಚಿತ್ರ ಮೇ 8ರಂದು ತೆರೆಗೆ ಬರಲಿದೆ. ಜಗದೀಶ್ ಚಿತ್ರ ನಿರ್ದೇಶನದ ಜತೆಗೆ ನಿರ್ಮಾಣವನ್ನೂ ಮಾಡಿದ್ದಾರೆ.

‘ನಾನೊಬ್ಬ ಉದ್ಯಮಿ. ಚಿಕ್ಕಂದಿನಿಂದಲೂ ಚಿತ್ರ ನಿರ್ದೇಶನ ಮಾಡಬೇಕೆಂಬ ಆಸೆಯಿತ್ತು. ಅದು ಈಗ ಈಡೇರಿದೆ. ಆರು ವರ್ಷಗಳ ಹಿಂದೆ ಈ ಚಿತ್ರದ ಸ್ಕ್ರಿಪ್ಟ್ ಕೆಲಸ ಆರಂಭವಾಗಿತ್ತು. ಬಂಡವಾಳ ಹೆಚ್ಚು ಇರದ ಕಾರಣ ಮೊಬೈಲ್‌ನಲ್ಲೇ ಚಿತ್ರೀಕರಣ ಮಾಡುವ ಯೋಜನೆ ಇತ್ತು. ಆನಂತರ ನನ್ನ ಪತ್ನಿ ಹಾಗೂ ಸ್ನೇಹಿತರು ಸಹಕಾರ ನೀಡಿದರು. ಚಿತ್ರೀಕರಣ ಪ್ರಾರಂಭವಾದ ಕೆಲವೇ ದಿನಗಳಲ್ಲಿ ಛಾಯಾಚಿತ್ರಗ್ರಾಹಕ ನಿಧನರಾದರು. ಆ ಜವಾಬ್ದಾರಿಯನ್ನು ನಿರ್ವಹಿಸಿದೆ. ನಮ್ಮ ಸುತ್ತಮುತ್ತ ಹೆಣ್ಣಿನ ಮೇಲೆ ನಡೆಯುತ್ತಿರುವ ಹಾಗೂ ನಡೆದಿರುವ ಶೋಷಣೆಯ ಕುರಿತಾದ ಕಥೆ ಇದೆ’ ಎಂದರು ನಿರ್ದೇಶಕ.

ಪ್ರಶಾಂತ್‌ಗೆ ಆಂಚಲ್ ಜೋಡಿಯಾಗಿದ್ದಾರೆ. ಚಿತ್ರಕ್ಕೆ ಪ್ರಸನ್ನಕುಮಾರ್ ಸಂಗೀತವಿದೆ. ❖

ಚಿತ್ರತಂಡ

ಎರಡು ಚಿತ್ರಗಳಿಗೆ ಕ್ಲ್ಯಾಪ್

ಆರ್.ಧನರಾಜ್ ನಿರ್ಮಿಸಿ, ನಿರ್ದೇಶಿಸುತ್ತಿರುವ ‘ಕೊರಗ್ಲಾ ತನಿಯಾ’ ಮತ್ತು ‘ಕನ’ ಚಿತ್ರಗಳು ಇತ್ತೀಚಷ್ಟೇ ಸೆಟ್ಟೇರಿವೆ. ತುಳುನಾಡಿನ ಕಥೆಯನ್ನು ಹೊಂದಿರುವ ಎರಡೂ ಚಿತ್ರಗಳು ಕನ್ನಡ, ತುಳು ಸೇರಿದಂತೆ ಅರು ಭಾಷೆಗಳಲ್ಲಿ ಸಿದ್ಧಗೊಳ್ಳುತ್ತಿವೆ.

ಆರ್.ಧನರಾಜ್ ಈ ಹಿಂದೆ ಕಂಬಳ ಕುರಿತ ಕಥೆ ಹೊಂದಿರುವ ‘ಕೋಟಿ ಚೆನ್ನಯ್ಯ’ ಚಿತ್ರವನ್ನು ನಿರ್ಮಿಸಿ, ನಿರ್ದೇಶಿಸಿದ್ದರು. ಈ ಎರಡೂ ಸಿನಿಮಾಗಳಿಗೂ ಅವರೇ ಕಥೆ, ಚಿತ್ರಕಥೆ ಬರೆದಿದ್ದಾರೆ. ಸುಮನ್ ತಲ್ವಾರ್ ಪ್ರಮುಖ ಪಾತ್ರದಲ್ಲಿದ್ದಾರೆ.

‘20 ವರ್ಷಗಳ ನಂತರ ಧನರಾಜ್ ಚಿತ್ರರಂಗಕ್ಕೆ ಮರಳಿದ್ದಾರೆ. ‘ಕೋಟಿ ಚೆನ್ನಯ್ಯ’ ಅವರಿಗೆ ಉತ್ತಮ ಹೆಸರು ತಂದುಕೊಟ್ಟಿತ್ತು. ಅದೇ ರೀತಿ ಈ ಎರಡೂ ಸಿನಿಮಾಗಳು ನಮ್ಮ ನಾಡಿನ ಭಾಷೆ, ಸಂಪ್ರದಾಯ ಮತ್ತು ಸಂಸ್ಕೃತಿಯನ್ನು ಜಗತ್ತಿಗೆ ಪರಿಚಯಿಸಲಿವೆ’ ಎಂದರು ಸುಮನ್.

ಸಾಜನ್ ಶೆಟ್ಟಿ, ನಿಖಿಲ್ ಇಮಾನಿ ಚಿತ್ರದ ಪ್ರಮುಖ ತಾರಾಗಣದಲ್ಲಿದ್ದಾರೆ. ಇನ್ನುಳಿದ ಮಾಹಿತಿಯನ್ನು ಶೀಘ್ರದಲ್ಲಿ ಹಂಚಿಕೊಳ್ಳುವುದಾಗಿ ಚಿತ್ರತಂಡ ಹೇಳಿದೆ. ❖

‘ಸಿನಿಮಾ ಬಗ್ಗೆ ಜನ ಮಾತಾಡಬೇಕು’

ವಿನೋದ್ ಪ್ರಭಾಕರ್ ನಾಯಕನಾಗಿ ನಟಿಸಿರುವ ‘ಬಲರಾಮನ ದಿನಗಳು’ ಚಿತ್ರದ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಕೆ.ಎಂ.ಚೈತನ್ಯ ನಿರ್ದೇಶನದ ಚಿತ್ರ ಶೀಘ್ರದಲ್ಲಿ ತೆರೆ ಕಾಣಲಿದೆ.

‘ಸಿನಿಮಾ ಬಗ್ಗೆ ಜನ ಮಾತಾಡಬೇಕು ಹೊರತು, ನಾವು ಮಾತಾಡಬಾರದು. ಹೀಗಾಗಿ ಈ ಸಿನಿಮಾ ಬಗ್ಗೆ ಮಾತನಾಡಲು ಜನರಿಗೆ ಬಿಡುತ್ತೇನೆ. ಚಿತ್ರದ ಟೀಸರ್ ಬಿಡುಗಡೆಗೊಂಡಿದೆ. ಜನ ಇಷ್ಟಪಟ್ಟರೆ ಅವರೇ ಮುಂದಕ್ಕೆ ತೆಗೆದುಕೊಂಡು ಹೋಗುತ್ತಾರೆ. ಆದಷ್ಟು ಬೇಗ ಚಿತ್ರ ತೆರೆಗೆ ಬರಲಿದೆ. ಹಲವರು ಚಿತ್ರಮಂದಿರಗಳಿಗೆ ಜನ ಬರುತ್ತಿಲ್ಲ ಎನ್ನುತ್ತಾರೆ. ಆದರೆ ಚಿತ್ರಮಂದಿರಗಳಿಗೆ ಜನರನ್ನು ಕರೆಸುವ ತಾಕತ್ತು ಇರುವುದು ಸಿನಿಮಾಕ್ಕೆ ಮಾತ್ರ. ಸಿನಿಮಾ ಚೆನ್ನಾಗಿತ್ತು ಅಂದ್ರೆ, ಜನರನ್ನು ತಾನಾಗಿಯೇ ಕರೆದುಕೊಂಡು ಬರುತ್ತದೆ. ಅದಕ್ಕೆ ನಮ್ಮ ‘ಮಾದೇವ’ ಚಿತ್ರವೇ ಉದಾಹರಣೆ. ಸಿನಿಮಾಕ್ಕೆ ಜನ ಕರೆದುಕೊಂಡು ಬರುವುದು ಸುಲಭವಲ್ಲ. ಯಾವುದೇ ಗಿಮಿಕ್ಸ್ ಇಲ್ಲದೆ ಆ ಚಿತ್ರಕ್ಕೆ ಜನ ಬಂದರು. ಅದೇ ರೀತಿ ಈ ಸಿನಿಮಾಕ್ಕೂ ಜನ ಬರುತ್ತಾರೆ ಎಂಬ ನಂಬಿಕೆಯಿದೆ. ಇವತ್ತಿನ ಚಿತ್ರರಂಗದ ಸ್ಥಿತಿ ಗೊತ್ತೇ ಇದೆ. ಇಂಥ ಹೊತ್ತಿನಲ್ಲಿಯೂ ನಿರ್ಮಾಪಕರು ದೊಡ್ಡ ಬಜೆಟ್‌ನಲ್ಲಿ ಸಿನಿಮಾ ಮಾಡಿದ್ದಾರೆ. ಅವರಿಗೆ ಈ ಸಿನಿಮಾ ಖಂಡಿತ ದುಪ್ಪಟ್ಟು ಹಣ ವಾಪಾಸ್ ಕೊಡುತ್ತದೆ ಎಂಬ ನಂಬಿಕೆಯಿದೆ. ಚೈತನ್ಯ ಅವರು ತಾವು ಅಂದುಕೊಂಡಿದ್ದು ತೆರೆಯ ಮೇಲೆ ಬರಲೇಬೇಕು ಎಂಬ ವರ್ಗದ ನಿರ್ದೇಶಕ. ಬಹಳ ಬುದ್ಧಿವಂತ. ಆ್ಯಕ್ಷನ್ ಸಿನಿಮಾವನ್ನೂ ಕ್ಲಾಸ್ ಆಗಿ, ಕಲ್ಟ್ ಆಗಿ ಮಾಡಬಹುದು ಎಂದು ತೋರಿಸಿದ್ದಾರೆ’ ಎಂದರು ವಿನೋದ್ ಪ್ರಭಾಕರ್.

80ರ ದಶಕದ ಗ್ಯಾಂಗ್‌ಸ್ಟರ್ ಕಥೆಯಲ್ಲಿ ವಿನೋದ್ ಪ್ರಭಾಕರ್‌ಗೆ ಪ್ರಿಯಾ ಆನಂದ್ ಜೋಡಿಯಾಗಿದ್ದಾರೆ. ಅತುಲ್ ಕುಲಕರ್ಣಿ, ಶರತ್ ಲೋಹಿತಾಶ್ವ, ಆಶೀಶ್ ವಿದ್ಯಾರ್ಥಿ ಹಾಗೂ ಬಿಗ್ ಬಾಸ್ ಖ್ಯಾತಿಯ ವಿನಯ್ ಗೌಡ ಸೇರಿ ಹಲವು ಪ್ರತಿಭಾನ್ವಿತ ಕಲಾವಿದರು ಚಿತ್ರದಲ್ಲಿದ್ದಾರೆ. ಪದ್ಮಾವತಿ ಫಿಲ್ಮ್ಸ್ ಬ್ಯಾನರ್ ಅಡಿಯಲ್ಲಿ ಪದ್ಮಾವತಿ ಜಯರಾಂ ಹಾಗೂ ಶ್ರೇಯಸ್ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ.

‘ನಾನು 18 ವರ್ಷಗಳ ಹಿಂದೆ ‘ಆ ದಿನಗಳು’ ಮಾಡಿದ್ದೆ. ಅದೇ ರೀತಿಯ ಸಿನಿಮಾ ಮಾಡಬೇಕು, ವಿನೋದ್ ಪ್ರಭಾಕರ್ ನಾಯಕರಾಗಿರಬೇಕು ಎಂದು ನಿರ್ಮಾಪಕರಾದ ಶ್ರೇಯಸ್ ಮತ್ತು ಪದ್ಮಾವತಿ ಅವರು ನನ್ನ ಬಳಿ ಬಂದರು. ಹೀಗಾಗಿ ಈ ಸಿನಿಮಾದ ಶ್ರೇಯಸ್ಸು ಅವರಿಗೆ ಸಲ್ಲಬೇಕು. ಬಹಳ ಅದ್ಭುತವಾಗಿ, ಮಹತ್ವಾಕಾಂಕ್ಷೆಯಿಂದ ಸಿನಿಮಾ ನಿರ್ಮಾಣ ಮಾಡಿದ್ದಾರೆ. ಇಡೀ ತಂಡ ನನ್ನ ದೊಡ್ಡಶಕ್ತಿ. ಮುಂದಿನ ದಿನಗಳಲ್ಲಿ ಚಿತ್ರದ ಹಾಡುಗಳು, ಟ್ರೇಲರ್ ಬಿಡುಗಡೆಗೊಳ್ಳಲಿದೆ’ ಎಂದರು ನಿರ್ದೇಶಕ.

‘ಚಿತ್ರೋದ್ಯಮದಲ್ಲಿ ಕೆಲವರು ನಮ್ಮ ನಿರ್ದೇಶಕರು ಅಂತ ಇರುತ್ತಾರೆ. ಅವರು ಸಿನಿಮಾ ಮಾಡುತ್ತಾರೆ ಎಂದರೆ, ಆ ಸಿನಿಮಾದಲ್ಲಿ ನಾವು ಹಾಡು ಬರೆಯೋದು ಖಚಿತ. ಆ ಸಾಲಿನಲ್ಲಿ ಚೈತನ್ಯ ಮುಂಚೂಣಿಯಲ್ಲಿ ನಿಲ್ಲುತ್ತಾರೆ. ರೌಡಿಸಂ ಕಥೆಯನ್ನು ಕೆಲವು ನಿರ್ದೇಶಕರ ಕೈಗೆ ಕೊಟ್ಟರೆ, ಅದೊಂದು ಮಾಸ್ ಸಿನಿಮಾ ಆಗುತ್ತದೆ. ಚೈತನ್ಯ ಅವರ ಕೈಗೆ ಕೊಟ್ಟರೆ ಕಲ್ಟ್ ಸಿನಿಮಾ ಆಗುತ್ತದೆ. ಅದಕ್ಕೆ ‘ಆ ದಿನಗಳು’ ಸಿನಿಮಾವೇ ಸಾಕ್ಷಿ. ಈ ಸಲ ಕಪ್ ನಮ್ದೆ ಎನ್ನುವ ರೀತಿ ಈ ಸಿನಿಮಾದಲ್ಲಿಯೂ ಅವರು ಯಶಸ್ವಿಯಾಗುತ್ತಾರೆ ಎಂಬ ನಂಬಿಕೆ ಬಲವಾಗಿದೆ. ಚಿತ್ರದ ಕೆಲವಷ್ಟು ತುಣುಕುಗಳನ್ನು ನೋಡಿದ್ದೇನೆ. ವಿನೋದ್ ಪ್ರಭಾಕರ್ ತಮ್ಮ ಪಾತ್ರದಲ್ಲಿ ಮುಳುಗಿ ಹೋಗಿದ್ದಾರೆ. ಅವರಿಗೆ ಈ ಚಿತ್ರದಿಂದ ದೊಡ್ಡ ಯಶಸ್ಸು ಸಿಗಲಿ’ ಎಂದರು ಚಿತ್ರ ಸಾಹಿತಿ ಕವಿರಾಜ್.

‘ಚಿತ್ರೀಕರಣ ಕಾಲೇಜು ಟ್ರಿಪ್‌ನಂತೆ ಇತ್ತು. ನಿರ್ದೇಶಕರಿಗೆ ಎಲ್ಲರೂ ಭಯಪಡುತ್ತಿದ್ದೆವು. ಇವತ್ತು ಸಾಕಷ್ಟು ಸಿನಿಮಾಗಳಲ್ಲಿ ತಂಡದಲ್ಲಿ ಭಿನ್ನಾಭಿಪ್ರಾಯ ನೋಡುತ್ತಿದ್ದೇವೆ. ಆದರೆ ನಮ್ಮ ಸಿನಿಮಾದಲ್ಲಿ ಎಲ್ಲರೂ ಒಗ್ಗಟ್ಟಾಗಿದ್ದೇವೆ. ನಮ್ಮ ಪಯಣ ಇದೊಂದೇ ಚಿತ್ರಕ್ಕೆ ಸೀಮಿತವಾಗಿರುವುದಿಲ್ಲ. ಇನ್ನಷ್ಟು ಸಿನಿಮಾಗಳಲ್ಲಿ ಒಟ್ಟಿಗೆ ಕೆಲಸ ಮಾಡುತ್ತೇವೆ’ ಎಂದರು ನಿರ್ಮಾಪಕಿ.

ವೇಣು ಛಾಯಾಚಿತ್ರಗ್ರಹಣ, ಸಂತೋಷ್ ನಾರಾಯಣ್ ಸಂಗೀತ, ವಿಶ್ವಾಸ್ ಕಶ್ಯಪ್ ಕಲಾ ನಿರ್ದೇಶನ ಚಿತ್ರಕ್ಕಿದೆ. ❖

ಪ್ರಿಯಾ ಆನಂದ್, ವಿನೋದ್ ಪ್ರಭಾಕರ್

ಕಾಳಿಯ ಕ್ರೌರ್ಯ, ಪ್ರೇಮ್ ಮಾಸ್ ಮ್ಯಾಜಿಕ್

ಎಂಬತ್ತರ ದಶಕದ ಬೆಂಗಳೂರಿನ ಭೂಗತ ಜಗತ್ತು, ಅದರ ರಕ್ತಚರಿತ್ರೆ, ರಾಜಕೀಯದ ಪೈಪೋಟಿ, ಮತ್ತು ವೈಯಕ್ತಿಕ ಸಂಬಂಧಗಳ ಸಂಘರ್ಷ-ಇವೆಲ್ಲವನ್ನೂ ಒಟ್ಟುಗೂಡಿಸಿ ಕಟ್ಟಿದ ಕಥೆಯೇ ‘KD-ದಿ ಡೆವಿಲ್’. ಆ ಕಾಲಘಟ

ಸಾಧಕರಿಗೆ 'ಕರ್ನಾಟಕ ಕಲಾಶ್ರೀ' ಪ್ರಶಸ್ತಿ ಪ್ರದಾನ

ಅಕಾಡೆಮಿಗಳ ಪಾವಿತ್ರ್ಯ ಉಳಿಯಬೇಕು, ಪ್ರಶಸ್ತಿಗೆ ಆಯ್ಕೆ ಮಾಡುವಾಗ ಎಚ್ಚರ ವಹಿಸಬೇಕು: ಬಿ.ಎಸ್.ಮಂಜುನಾಥ ಸ್ವಾಮಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಕಾಡೆಮಿಗಳ ಪಾವಿತ್ರ್ಯ ಉಳಿಸಿಕೊಳ್ಳುವ ಜವಾಬ್ದಾರಿ ನಮ್ಮ ಮೇಲಿದ್ದು, ಯಾವುದೇ ಪ್ರಶಸ್ತಿಗೆ ಸಾಧಕರನ್ನು ಆಯ್ಕೆ ಮಾಡುವಾಗ ಬಹಳ ಎಚ್ಚರಿಕೆ ವಹಿಸಬೇಕಿದೆ' ಎಂದು ಕನ್ನಡ ಸಂಸ್ಕೃತಿ ಇಲಾಖೆ ನಿರ್ದೇಶಕ ಬಿ.ಎಸ್. ಮಂಜುನಾಥ ಸ್ವಾಮಿ ತಿಳಿಸಿದರು.

ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ವತಿಯಿಂದ ಆಯೋಜಿಸಿದ್ದ 'ಕರ್ನಾಟಕ ಕಲಾಶ್ರೀ' ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಅವರು, 'ಪ್ರಶಸ್ತಿಗಾಗಿ ಎಷ್ಟೋ ಜನರು ಶಿಫಾರಸು ಮಾಡಿಸುತ್ತಾರೆ. ಪ್ರತಿಯೊಂದು ಅಕಾಡೆಮಿಯೂ ಸಾಧಕರನ್ನು ಗುರುತಿಸಿ, ಗೌರವಿಸುವ ಕೆಲಸ ಮಾಡುತ್ತಿದೆ. ಪ್ರತಿ ಉಪ ವಿಭಾಗಗಳಿಗೂ ಅಕಾಡೆಮಿ ಸ್ಥಾಪಿಸಿದರೆ, ಅಕಾಡೆಮಿಗಳು ತಮ್ಮ ಹಕ್ಕುಗಳನ್ನು ಕಳೆದುಕೊಳ್ಳುತ್ತವೆ' ಎಂದು ತಿಳಿಸಿದರು.

'ಸಂಗೀತ ಮತ್ತು ನೃತ್ಯಕ್ಕೆ ಪ್ರತ್ಯೇಕ ಅಕಾಡೆಮಿ ಸ್ಥಾಪನೆಗೆ ಸೂಕ್ತ ಕಾರಣಗಳೊಂದಿಗೆ ಪ್ರಸ್ತಾವ ಸಲ್ಲಿಸಿದರೆ, ಸರ್ಕಾರದ ಗಮನಕ್ಕೆ ತರಲಾಗುವುದು. ಇನ್ನೇನು ಪದ್ಮ ಪ್ರಶಸ್ತಿಗೆ ಆಯ್ಕೆ ಪ್ರಾರಂಭವಾಗುತ್ತದೆ. ಈಗಾಗಲೇ ಪ್ರಶಸ್ತಿಗೆ ಶಿಫಾರಸುಗಳು ಬರುತ್ತಿವೆ. ಸಮಾಜವೇ ಸಾಧಕರನ್ನು ಗುರುತಿಸಿ, ಆಯ್ಕೆ ಮಾಡುವ ಕೆಲಸ ಮಾಡಬೇಕು' ಎಂದು ಹೇಳಿದರು.

ನಾಟಕ ಅಕಾಡೆಮಿ ಅಧ್ಯಕ್ಷ ಕೆ.ವಿ. ನಾಗರಾಜ ಮೂರ್ತಿ ಅವರು ಪ್ರಶಸ್ತಿ ಪುರಸ್ಕೃತರ ಪರಿಚಯ ಪುಸ್ತಕ ಬಿಡುಗಡೆ ಮಾಡಿದರು.

ಕನ್ನಡ ಪುಸ್ತಕ ಪ್ರಾಧಿಕಾರ ಅಧ್ಯಕ್ಷ ಮಾನಸ, ಸಂಗೀತ ನೃತ್ಯ ಅಕಾಡೆಮಿ ಅಧ್ಯಕ್ಷೆ ಶುಭಾ ಧನಂಜಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಬಲವಂತರಾವ್ ಪಾಟೀಲ, ಕನ್ನಡ ಪುಸ್ತಕ ಪ್ರಾಧಿಕಾರದ ಆಡಳಿತಾಧಿಕಾರಿ ಕಿರಣ್ ಸಿಂಗ್ ಉಪಸ್ಥಿತರಿದ್ದರು.

ಪ್ರಶಸ್ತಿ ಪುರಸ್ಕೃತರು

ಲೋಕೇಶ್ ದಾಸ್ (ಕಥಾಕೀರ್ತನ), ಪ್ರೊ. ಮಧೂರ ಮೋಹನ ಕಲ್ಲೂರಾಯ (ಗಮಕ ವಾಚನ) ಅವರಿಗೆ ತಲಾ ₹50 ಸಾವಿರ ನಗದು ಸಹಿತ ಕರ್ನಾಟಕ ಕಲಾಶ್ರೀ ಗೌರವ ಪ್ರಶಸ್ತಿ ನೀಡಲಾಯಿತು.

ವಾರ್ಷಿಕ ಪ್ರಶಸ್ತಿ: 'ಕರ್ನಾಟಕ ಸಂಗೀತ': ಡಾ. ಹಂಸಿನಿ ನಾಗೇಂದ್ರ (ಗಾಯನ), ನಾಗೇಶ್ ಎ.ಬಪ್ಪನಾಡು (ನಾದಸ್ವರ), ಎ.ವಿ.ವಿಶ್ವನಾಥ (ಹಾರ್ಮೋನಿಯಂ), ಎಂ.ವೆಂಕಟರಾಜು (ಡೋಲು)

ಹಿಂದೂಸ್ತಾನಿ ಸಂಗೀತ: ಮೃತ್ಯುಂಜಯ ಶೆಟ್ಟರ್, ರವೀಂದ್ರ ಸೊರಗಾವಿ (ಗಾಯನ), ಪಂಚಾಕ್ಷರಿ ಅಣ್ಣಿಗೇರಿ (ಹಾರ್ಮೋನಿಯಂ), ವಿಠ್ಠಲ ಸಿದ್ದಪ್ಪ ಪೂಜಾರ (ತಬಲಾ)

ನೃತ್ಯ: ನಾಗರತ್ನ ಹಡಗಲಿ, ಸಿ.ಆರ್.ಶಿವಪ್ರಕಾಶ್ (ಭರತನಾಟ್ಯ), ಎಸ್.ಕೆ.ಆರ್.ಜೀಲಾನಿ ಭಾಷಾ ಹಾಗೂ ಪಿ.ರಾಮಯ್ಯ (ಕಥಾ ಕೀರ್ತನ ತಬಲಾ), ವಿಶ್ವನಾಥ ಕುಲಕರ್ಣಿ (ಗಮಕ ವಾಚನ), ಶ್ರೀಧರ್ ಅಯ್ಯರ್ (ಸುಗಮ ಸಂಗೀತ), ಎಂ.ಕೃಷ್ಣಮೂರ್ತಿ (ವಾದ್ಯ ತಯಾರಿಕೆ).

ಕೊಪ್ಪಳ ಜಿಲ್ಲೆಯ ಕಲ್ಮಠದ ಕೊಟ್ಟೂರೇಶ್ವರ ಸಂಗೀತ ಮಹಾವಿದ್ಯಾಲಯಕ್ಕೆ ವಾರ್ಷಿಕ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಾಧಕರಿಗೆ 'ಕರ್ನಾಟಕ ಕಲಾಶ್ರೀ ಪ್ರಶಸ್ತಿ' ಪ್ರದಾನ ಮಾಡಲಾಯಿತು.ಎನ್. ನರೇಂದ್ರಬಾಬು, ಕೆ.ವಿ. ನಾಗರಾಜಮೂರ್ತಿ, ಮಾನಸ, ಬಿ.ಎಸ್. ಮಂಜುನಾಥಸ್ವಾಮಿ, ಶುಭ ಧನಂಜಯ, ಬಲವಂತ ರಾವ್ ಪಾಟೀಲ, ಕಿರಣ್ ಸಿಂಗ್ ಉಪಸ್ಥಿತರಿದ್ದಾರೆ ಪ್ರಜಾವಾಣಿ ಚಿತ್ರ

ಸುದ್ದಿ 2 ನಿಮಿಷ

'ಸಮಾಧಾನ ಸಮಾರೋಹ' ಅಭಿಯಾನ ಆಯೋಜನೆ

ಬೆಂಗಳೂರು: 'ಮನೆ ಬಾಗಿಲಿಗೆ ನ್ಯಾಯ ವಿತರಣೆ ಎಂಬ ಘೋಷ ವಾಕ್ಯದಡಿ ವ್ಯಾಜ್ಯಗಳ ಪರಿಹಾರವನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಸುಪ್ರೀಂ ಕೋರ್ಟ್, 'ಸಮಾಧಾನ ಸಮಾರೋಹ' ಅಭಿಯಾನ ಆಯೋಜಿಸಿದೆ' ಎಂದು ಹೈಕೋರ್ಟ್‌ನ ಹಿರಿಯ ನ್ಯಾಯಮೂರ್ತಿಗಳೂ ಆದ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷೆ ಅನು ಶಿವರಾಮನ್ ತಿಳಿಸಿದರು.

ಹೈಕೋರ್ಟ್‌ನಲ್ಲಿ ಗುರುವಾರ ಮಾಧ್ಯಮಗೋಷ್ಠಿಯಲ್ಲಿ ಈ ಕುರಿತು ವಿವರಿಸಿದ ಅವರು, 'ಏಪ್ರಿಲ್ 21ರಿಂದ ಪ್ರಾರಂಭವಾಗಿರುವ ಅಭಿಯಾನ 2026ರ ಆಗಸ್ಟ್ 21, 22 ಮತ್ತು 23ರಂದು ವಿಶೇಷ ಲೋಕ ಅದಾಲತ್ ಮೂಲಕ ಮುಕ್ತಾಯಗೊಳ್ಳಲಿದೆ' ಎಂದರು.

'ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ ವ್ಯಾಜ್ಯಗಳ ಪರಿಹಾರಕ್ಕಾಗಿ ಸಾರ್ವಜನಿಕರಿಗೆ ಅನುಕೂಲ ಕಲ್ಪಿಸಲು ಈ ವಿಶೇಷ ಅಭಿಯಾನ ಹಮ್ಮಿಕೊಳ್ಳಲಾಗಿದೆ. ಸುಪ್ರೀಂ ಕೋರ್ಟ್‌ನಲ್ಲಿರುವ 4,328 ಪ್ರಕರಣಗಳನ್ನು ರಾಜಿ ಸಂಧಾನದ ಮೂಲಕ ಇತ್ಯರ್ಥಪಡಿಸಿಕೊಳ್ಳಬಹುದಾಗಿದೆ ಎಂದು ಗುರುತಿಸಿ ಆಯಾ ರಾಜ್ಯಗಳಿಗೆ ವರ್ಗಾಯಿಸಲಾಗಿದೆ' ಎಂದು ತಿಳಿಸಿದರು.

'ರಾಜ್ಯದ ಯಾವುದೇ ಭಾಗದಲ್ಲಿನ ಪಕ್ಷಗಾರರು, ತಾವಿರುವ ಸ್ಥಳದಲ್ಲಿನ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರವನ್ನು ಸಂಪರ್ಕಿಸಿ ವ್ಯಾಜ್ಯ ಪರಿಹಾರ ಮಾಡಿಕೊಳ್ಳಬಹುದು. ಪಕ್ಷಗಾರರಿಬ್ಬರೂ ಒಂದೆಡೆ ಸೇರಿ ವ್ಯಾಜ್ಯ ಪರಿಹರಿಸಿಕೊಳ್ಳಲು ಇದೊಂದು ಸುವರ್ಣಾವಕಾಶ' ಎಂದರು.

ಹೈಕೋರ್ಟ್ ಕಾನೂನು ಸೇವಾ ಸಮಿತಿ ಅಧ್ಯಕ್ಷರೂ ಆದ ನ್ಯಾಯಮೂರ್ತಿ ಆರ್.ದೇವದಾಸ್ ಮತ್ತು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಚ್.ಶಶಿಧರ ಶೆಟ್ಟಿ ಇದ್ದರು.

ಸಿದ್ದರಾಮಯ್ಯ ಬಲಶಾಲಿ ಸಚಿವ ಜಾರ್ಜ್

ಬೆಂಗಳೂರು: 'ಸಿದ್ದರಾಮಯ್ಯ ಅವರಷ್ಟು ಬಲಶಾಲಿ ಯಾರೂ ಇಲ್ಲ' ಎಂದು ಇಂಧನ ಸಚಿವ ಕೆ.ಜೆ. ಜಾರ್ಜ್ ಹೇಳಿದರು.

ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ಮುಖ್ಯಮಂತ್ರಿಯವರು ಒಂದು ದಿನವಾದರೂ ಬದಲಾವಣೆ ಬಗ್ಗೆ ಮಾತನಾಡಿದ್ದಾರೆಯೇ? ಅವರು ಆರಾಮವಾಗಿ ಕೆಲಸ ಮಾಡುತ್ತಿದ್ದಾರೆ' ಎಂದರು.

'ಸಿದ್ದರಾಮಯ್ಯ ಅವರ ವಿಚಾರಗಳು, ಬದ್ಧತೆ ಎಲ್ಲವೂ ಗಟ್ಟಿಯಾದವು. ಅವರು ಆಡಳಿತಾತ್ಮಕವಾಗಿ ಜನಪರ ಕಾರ್ಯಕ್ರಮಗಳನ್ನು ಕೊಡುತ್ತಲೇ ಬಂದಿದ್ದಾರೆ' ಎಂದು ಬಣ್ಣಿಸಿದರು.

'ಎಲ್ಲ ಶಾಸಕರು ಸಚಿವ ಸ್ಥಾನಕ್ಕೆ ಅರ್ಹರು. ಹೀಗಾಗಿ, ಅವರು ಹೈಕಮಾಂಡ್ ನಾಯಕರನ್ನು ಭೇಟಿ ಮಾಡಿ ಸಚಿವ ಸ್ಥಾನ ಕೇಳುವುದರಲ್ಲಿ ತಪ್ಪೇನೂ ಇಲ್ಲ' ಎಂದರು.

'ಮೇ 15ರಂದು ಡಿ.ಕೆ ಶಿವಕುಮಾರ್‌ಗೆ ಪಟ್ಟ' ಎಂಬ ಶಿವಕುಮಾರ್ ಆಪ್ತರ ಹೇಳಿಕೆಗೆ ಪ್ರತಿಕ್ರಿಯಿಸಿದ ಜಾರ್ಜ್, 'ಈ ಮಾತನ್ನು ಯಾರು ಹೇಳುತ್ತಾರೊ ಅವರನ್ನು ಕೇಳಬೇಕು. ನಾನೇನೂ ಆ ಮಾತು ಹೇಳಿಲ್ಲವಲ್ಲ. ನಮಗೆ ಮುಖ್ಯಮಂತ್ರಿ ಇದ್ದಾರೆ. ಬದಲಾವಣೆ ನಮ್ಮ ಗಮನಕ್ಕೆ ಬಂದಿಲ್ಲ' ಎಂದರು.

ಕರ್ನಾಟಕ ಸಾಬೂನು ಕಾರ್ಖಾನೆ ಕಾರ್ಮಿಕರ ಸಂಘದ ಅಧ್ಯಕ್ಷ ಮೈಕಲ್ ಫರ್ನಾಂಡಿಸ್ ಮತ್ತು ಪದಾಧಿಕಾರಿಗಳು ಸಚಿವ ಎಂ.ಬಿ.ಪಾಟೀಲ ಆವರನ್ನು ಭೇಟಿ ಮಾಡಿ, ಅಭಿನಂದನೆ ಸಲ್ಲಿಸಿದರು

ಗುತ್ತಿಗೆದಾರರಿಗೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೂಚನೆ

'ಎತ್ತಿನಹೊಳೆ ಬಾಕಿ ಕಾಮಗಾರಿ ಶೀಘ್ರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೇಂದ್ರ ಪರಿಸರ ಇಲಾಖೆಯವರು ತಿಳಿಸಿದ ದಂಡ ಮತ್ತು ಅಪಾಯ ಶಮನ ವೆಚ್ಚ ಸೇರಿ ₹ 257 ಕೋಟಿ ಪಾವತಿಸಿದ ವಾರದೊಳಗೆ ಎತ್ತಿನಹೊಳೆ ಕೆಲಸ ಆರಂಭಿಸುವಂತೆ ಗುತ್ತಿಗೆದಾರರಿಗೆ ಸೂಚನೆ ನೀಡಲಾಗಿದೆ' ಎಂದು ಜಲ ಸಂಪನ್ಮೂಲ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

ಎತ್ತಿನಹೊಳೆ, ಮೇಕೆದಾಟು, ಭದ್ರಾ ಮೇಲ್ದಂಡೆ ಯೋಜನೆಯ ಪ್ರಗತಿ ಕುರಿತು ವಿಧಾನಸೌಧದಲ್ಲಿ ಗುರುವಾರ ನಡೆದ ಸಭೆಯ ಬಳಿಕ ಸುದ್ದಿಗಾರರ ಜತೆ ಅವರು ಮಾತನಾಡಿದರು.

'ಎತ್ತಿನಹೊಳೆ ಯೋಜನೆಗೆ ತುಮಕೂರು ಭಾಗದಲ್ಲೂ ಭೂಸ್ವಾಧೀನಕ್ಕೆ ಸರ್ವೆ ನಡೆಸಲು ಕ್ರಮ ತೆಗೆದುಕೊಳ್ಳಲಾಗುವುದು. ಚಿಕ್ಕಬಳ್ಳಾಪುರ ಮತ್ತು ಕೋಲಾರಕ್ಕೆ ಆದಷ್ಟು ಬೇಗ ನೀರು ತೆಗೆದುಕೊಂಡು ಹೋಗಲಾಗುವುದು' ಎಂದರು.

'ಎತ್ತಿನಹೊಳೆ ಯೋಜನೆಗೆ ಕೇಂದ್ರ ಪರಿಸರ ಇಲಾಖೆಯವರು ಒಂದಷ್ಟು ಷರತ್ತುಗಳನ್ನು ವಿಧಿಸಿ ಕಡತವನ್ನು ವಾಪಸ್ ಕಳುಹಿಸಿದ್ದರು. ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಗೆ ಬದಲಿ ಭೂಮಿ ಹಸ್ತಾಂತರಿಸಲಾಗುತ್ತಿದೆ. ಶೇ 10ರಷ್ಟು ಭೂಮಿ ವರ್ಗಾವಣೆ ಬಾಕಿಯಿತ್ತು. ವಾರದೊಳಗೆ ಈ ಪ್ರಕ್ರಿಯೆ ನಡೆಯಲಿದೆ' ಎಂದು ತಿಳಿಸಿದರು.

ಅರಣ್ಯ ಇಲಾಖೆಗೆ 5,300 ಎಕರೆ ಜಮೀನು: 'ಮೇಕೆದಾಟು ಯೋಜನೆಯ ಸಮಗ್ರ ಯೋಜನಾ ವರದಿ ಸಿದ್ಧವಾಗಿದ್ದು, ಅದನ್ನು ಸಮಿತಿ ಮುಂದೆ ಸಲ್ಲಿಸಲಾಗುವುದು. ಮತ್ತೊಮ್ಮೆ ವೆಚ್ಚ ಪರಿಷ್ಕರಣೆ ಮಾಡಿದ್ದೇವೆ. ಸುಮಾರು 5,300 ಎಕರೆ ಜಮೀನನ್ನು ನಾವು ಅರಣ್ಯ ಇಲಾಖೆಗೆ ನೀಡಬೇಕಿದೆ. ಆ ಬಗ್ಗೆಯೂ ಕಂದಾಯ ಇಲಾಖೆ ಜೊತೆ ಮಾತುಕತೆ ನಡೆಸಲಾಗುವುದು' ಎಂದರು.

ಅರಣ್ಯ ಸಚಿವ ಈಶ್ವರ ಖಂಡ್ರೆ, ಗೃಹ ಸಚಿವ ಜಿ. ಪರಮೇಶ್ವರ, ಡಿ.ಕೆ. ಶಿವಕುಮಾರ್, ಕಂದಾಯ ಸಚಿವ ಕೃಷ್ಣ ಬೈರೇಗೌಡ ಸಭೆಯಲ್ಲಿ ಪಾಲ್ಗೊಂಡಿದ್ದರು

ಎತ್ತಿನಹೊಳೆ ವಿಚಾರವಾಗಿ ಕೇಂದ್ರ ಸರ್ಕಾರದ ಸಂಬಂಧಪಟ್ಟ ಸಚಿವರನ್ನು ಇತ್ತೀಚೆಗೆ ಭೇಟಿಯಾಗಿದ್ದೆ. ಅವರ ಷರತ್ತುಗಳನ್ನು ಒಪ್ಪಿಕೊಂಡು ನಾವು ಮುಂದುವರಿದಿದ್ದೇವೆ
ಡಿ.ಕೆ. ಶಿವಕುಮಾರ್,
ಉಪ ಮುಖ್ಯಮಂತ್ರಿ

'ಕೆಎಸ್‌ಡಿಎಲ್ ಲಾಭ: ಪಾಟೀಲರಿಗೆ ಶ್ರೇಯ'

ಬೆಂಗಳೂರು: 'ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತವು (ಕೆಎಸ್‌ಡಿಎಲ್) ಇದೇ ಮೊದಲ ಬಾರಿಗೆ ವರ್ಷವೊಂದರಲ್ಲಿ 47,494 ಟನ್‌ಗಳಷ್ಟು ಉತ್ಪಾದನೆ ದಾಖಲಿಸಿದ್ದು, ಅದರ ಶ್ರೇಯ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಅವರಿಗೆ ಸಲ್ಲಬೇಕು' ಎಂದು ಕೆಎಸ್‌ಡಿಎಲ್ ಸಾಬೂನು ಕಾರ್ಖಾನೆ ಕಾರ್ಮಿಕರ ಸಂಘದ ಅಧ್ಯಕ್ಷ ಮೈಕಲ್ ಫರ್ನಾಂಡಿಸ್ ಹೇಳಿದ್ದಾರೆ.

ಸಂಘದ ನಿಯೋಗವು ಗುರುವಾರ ಸಚಿವ ಎಂ.ಬಿ.ಪಾಟೀಲ ಅವರನ್ನು ಭೇಟಿ ಮಾಡಿ, ಅಭಿನಂದನೆ ಸಲ್ಲಿಸಿತು.

ನಂತರ ಮೈಕಲ್, 'ಕಾರ್ಖಾನೆಯ 110 ವರ್ಷಗಳ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ವಾರ್ಷಿಕ ₹2,016 ಕೋಟಿ ವಹಿವಾಟು ನಡೆಸಿದೆ ಮತ್ತು ₹507 ಕೋಟಿ ಲಾಭ ದಾಖಲಿಸಿದೆ. ಇದಕ್ಕೆ ಸಚಿವರು, ಕೆಎಸ್‌ಡಿಎಲ್ ಅಧ್ಯಕ್ಷ ಸಿ.ಎಸ್. ಅಪ್ಪಾಜಿ ನಾಡಗೌಡ, ವ್ಯವಸ್ಥಾಪಕ ನಿರ್ದೇಶಕ ಪಿ.ಕೆ.ಎಂ. ಪ್ರಶಾಂತ್ ಮತ್ತು ಎಲ್ಲ ಅಧಿಕಾರಿಗಳು ಕಾರಣ' ಎಂದಿದ್ದಾರೆ.

'ಜತೆಗೆ, ಕಾರ್ಖಾನೆಯ ಉತ್ಪಾದನೆಯನ್ನು ಹೆಚ್ಚಿಸಲು ಸಚಿವರು ಹೊಸ ಯೋಜನೆಗಳನ್ನು ರೂಪಿಸುತ್ತಿದ್ದಾರೆ. ಅವುಗಳ ಯಶಸ್ವಿಗೆ ಕಾರ್ಮಿಕರ ಶ್ರಮವೂ ಬೇಕು. ಕಾರ್ಖಾನೆಯಲ್ಲಿ ಕಾರ್ಮಿಕರ ಸಂಖ್ಯೆ ಕಡಿಮೆ ಇದ್ದು, ಅಗತ್ಯವಿರುವಷ್ಟು ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಬೇಕು' ಎಂದು ಸಚಿವರಿಗೆ ಮನವಿ ಸಲ್ಲಿಸಿದರು.

ಡಾ.ಎಸಿಎಸ್ ಕಾಲೇಜ್ ಆಫ್ ಎಂಜಿನಿಯರಿಂಗ್ ನಗರದಲ್ಲಿ ಗುರುವಾರ ಹಮ್ಮಿಕೊಂಡಿದ್ದ ವಾರ್ಷಿಕ ಸಂಭ್ರಮ 'ಆರೋಹಣ'ದಲ್ಲಿ ನಟಿ ರಾಗಿಣಿ ದ್ವಿವೇದಿ ಅವರನ್ನು ಗೌರವಿಸಲಾಯಿತು. ಕಾಲೇಜಿನ ಡೀನ್ ಸೆಂಥಿಲ್ ಕುಮಾರನ್, ಸಾಂಸ್ಕೃತಿಕ ಸಂಯೋಜಕ ಸುನಿಲ್ ರಾಜ್, ದೈಹಿಕ ಶಿಕ್ಷಣ ನಿರ್ದೇಶಕ ದೇವೇಂದ್ರ ನಾಯಕ್, ಪ್ರಾಂಶುಪಾಲೆ ಬಿ.ಎಸ್ ಶೈಲಜಾ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸಿ.ಎನ್ ಸೀತಾರಾಮ್, ರಿಜಿಸ್ಟಾರ್ ಮೀನಾಕ್ಷಿ ಸುಂದರಂ ಮತ್ತು ಉಪ ಪ್ರಾಂಶುಪಾಲೆ ಉಷಾ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಬೆಂಗಳೂರು ರೇಸ್

ಬ್ಯೂರಿವೆಸ್ಟ್‌ನಿಕ್ ಗೆಲ್ಲುವ ನಿರೀಕ್ಷೆ

ಇಂಟರ್‌ನ್ಯಾಷನಲ್ ಲೇಬರ್ ಡೇ ಟ್ರೋಫಿ ಶುಕ್ರವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಬ್ಯೂರಿವೆಸ್ಟ್‌ನಿಕ್ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 3:00ಕ್ಕೆ ಏರ್ಪಡಿಸಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಟಿಯಾರಾ 1, ಝುಯಾನ 2, ಮಿಸ್ಟಿಕಲ್ ಕ್ವೀನ್ 8
2ನೇ ರೇಸ್: ಅಡೋರ್ನ್‌ಮೆಂಟ್ 2, ಸ್ಟಾಲಿನ್‌ಗಾರ್ಡ್ 5, ವೈಬ್ರ್ಯಾಂಟ್ ಕ್ವೀನ್ 3
3ನೇ ರೇಸ್: ಅಗ್ರಿಮ 3, ವಿಂಡ್‌ಕ್ಲೀವರ್ 1, ಝಿಫ್ಫಿನ್ 2
4ನೇ ರೇಸ್: ಶಿ ರೂಲ್ಸ್ 10, ಥ್ರಿಲ್ ಆಫ್ ಬ್ರೆಜಿಲ್ 1, ಬೆಲ್ಲಾವಿಟಾ 3
5ನೇ ರೇಸ್: ಬ್ಯೂರಿವೆಸ್ಟ್‌ನಿಕ್ 1, ಲೆಗಸಿ ಫೀಲ್ಡ್ 2, ಕಂಟ್ರೀಸ್ ಮೆಕ್ವಿನ್ 6
6ನೇ ರೇಸ್: ಈಗಲ್ ಐ 2, ಟೋಲ್ಡೀನ್ 3, ಮೂನ್ ಸ್ಟಾರ್ 9
7ನೇ ರೇಸ್: ಹೇಝುಲ್ 2, ಕ್ಯಾರಟ್ ಲವ್ 5, ಲಾರಿಸ್ಸಾ 7

ಉತ್ತಮ ಬೆಟ್: ಈಗಲ್ ಐ

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ನಗರದಲ್ಲಿ ಇಂದು

84ನೇ ವರ್ಷದ ಶಂಕರಾಚಾರ್ಯರ ಜಯಂತಿ ಪ್ರಯುಕ್ತ ಶಂಕರೋತ್ಸವ ಹಾಗೂ ರಂಗನಂದೋತ್ಸವ: ಬೆಳಿಗ್ಗೆ 6.30ಕ್ಕೆ ಪೂರ್ಣಾಭಿಷೇಕ, ಕಳಶ ಸ್ಥಾಪನೆ, 7.30ಕ್ಕೆ ಸತ್ಯನಾರಾಯಣಸ್ವಾಮಿ ಪೂಜೆ, 12.30ಕ್ಕೆ ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸಂಜೆ 6.30ಕ್ಕೆ ಸುಮಿತ್ರಾನಂದ ಅವರಿಂದ 'ಗಂಗಾವತರಣ' ಹರಿಕಥೆ, ಹಾರ್ಮೋನಿಯಂ: ರಘು, ತಬಲಾ: ಕಾಂತರಾಜು.

ಬುದ್ಧಪೂರ್ಣಿಮೆ: ಬೆಳಿಗ್ಗೆ 7ರಿಂದ ವಿವಿಧ ಧಾರ್ಮಿಕ ವಿಧಿ ವಿಧಾನ, ಮಧ್ಯಾಹ್ನ 12.20ಕ್ಕೆ ಧಮ್ಮ ಉಪನ್ಯಾಸ: ಬುದ್ಧದತ್ತ ಥೇರ, ಮಧ್ಯಾಹ್ನ 3ಕ್ಕೆ ಕನ್ನಡದಲ್ಲಿ ಧಮ್ಮ ಪ್ರವಚನ: ಆನಂದ ಥೇರ, ಸಂಜೆ 6ಕ್ಕೆ ದೀಪಗಳ ಸಮರ್ಪಣೆ, ಆಯೋಜನೆ ಹಾಗೂ ಸ್ಥಳ: ಮಹಾಬೋಧಿ ಸೊಸೈಟಿ, ಗಾಂಧಿನಗರ.

ಅನ್ನಪೂರ್ಣಾಂಬ ಸಮೇತ ನಗರೇಶ್ವರಸ್ವಾಮಿ ಅವರ 142ನೇ ಬ್ರಹ್ಮರಥೋತ್ಸವ: ಬೆಳಿಗ್ಗೆ 7ಕ್ಕೆ ಪಂಚಾಮೃತ ಅಭಿಷೇಕ, ಬೆಳಿಗ್ಗೆ 10ಕ್ಕೆ ರಾಜೋಪಚಾರ-ರಥಾದಿವಾಸ ಹೋಮ, ಮಧ್ಯಾಹ್ನ 12.20ಕ್ಕೆ ಬ್ರಹ್ಮರಥೋತ್ಸವ, ಮಧ್ಯಾಹ್ನ 2ಕ್ಕೆ ದಾಸೋಹ, ಸಂಜೆ 4.30ಕ್ಕೆ ಧೂಳೋತ್ಸವ, ಸಂಜೆ 5.30ಕ್ಕೆ ರುದ್ರಪಠಣ, ಸಂಜೆ 6ಕ್ಕೆ ಉಯ್ಯಾಲೋತ್ಸವ, ಆಯೋಜನೆ ಹಾಗೂ ಸ್ಥಳ: ಬಿ.ಎ.ಎಸ್.ವಿ. (ನಗರ್ತ) ಸಮಿತಿ, ನಗರೇಶ್ವರಸ್ವಾಮಿ ದೇವಾಲಯದ ಆವರಣ, ನಗರ್ತರಪೇಟೆ.

ಸ್ಯಾಂಕಿ ಕೆರೆ ಉಳಿಸಿ: ಕಾರ್ಮಿಕ ದಿನಚಾರಣೆ ಪ್ರಯುಕ್ತ ಪೌರಕಾರ್ಮಿಕರಿಗೆ ಗೌರವ ಸಮರ್ಪಣೆ, ಆಯೋಜನೆ: ವಾಯ್ಸ್ ಆಫ್ ಸದಾಶಿವನಗರ, ಸ್ಥಳ: ಸ್ಯಾಂಕಿ ಕೆರೆ, ಸದಾಶಿವನಗರ, ಬೆಳಿಗ್ಗೆ 7

ಅಗ್ನಿಕುಂಡ ಮತ್ತು ಕರಗ ಉತ್ಸವ: ಬೆಳಿಗ್ಗೆ 7.30ಕ್ಕೆ ಅಮ್ಮನವರಿಗೆ ಎಣ್ಣೆ ಸೀಗೆಕಾಯಿ ಸೇವೆ, ಸಂಜೆ 5.45ಕ್ಕೆ ವೈಶಾಖ ಬುದ್ಧ ಪೌರ್

ರಾಜ್ಯದಲ್ಲಿ ₹653 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ

ಬೆಂಗಳೂರಿನಲ್ಲಿ ಅತಿ ಹೆಚ್ಚು ಡ್ರಗ್ಸ್ ಮಾರಾಟ ದಂಧೆ: ವಿಶೇಷ ಕಾರ್ಯಾಚರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕಳೆದ ಮೂರು ವರ್ಷ ನಾಲ್ಕು ತಿಂಗಳಲ್ಲಿ ₹653 ಕೋಟಿ ಮೌಲ್ಯದ ಡ್ರಗ್ಸ್ ವಶಪಡಿಸಿಕೊಂಡು 18,593 ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

ಸರ್ಕಾರ ಮತ್ತು ಪೊಲೀಸ್ ಇಲಾಖೆಗೆ ದೊಡ್ಡ ಸವಾಲಾಗಿರುವುದು ಮಾದಕ ವಸ್ತು ಮಾರಾಟ ಹಾಗೂ ಸರಬರಾಜು ದಂಧೆ. ಡ್ರಗ್ಸ್ ಮಾರಾಟ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಲಾಗಿದೆ. 2023ರಿಂದ ಇದುವರೆಗೆ ಬೆಂಗಳೂರಿನಲ್ಲಿ ಡ್ರಗ್ಸ್ ದಂಧೆಯಲ್ಲಿ ತೊಡಗಿದ್ದ 291 ವಿದೇಶಿಯರನ್ನು ಬಂಧಿಸಲಾಗಿದೆ. ಇದೇ ಅವಧಿಯಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ವಿವಿಧ ಮಾದರಿಯ ₹25,500 ಕೆ.ಜಿ ಡ್ರಗ್ಸ್ ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಗೃಹ ಸಚಿವ ಜಿ.ಪರಮೇಶ್ವರ ಮಾಧ್ಯಮ-ಗೋಷ್ಠಿಯಲ್ಲಿ ಬುಧವಾರ ತಿಳಿಸಿದರು.

ರಾಜಧಾನಿ ಬೆಂಗಳೂರಿನಲ್ಲಿ ಅತಿ ಹೆಚ್ಚು ಡ್ರಗ್ಸ್ ಮಾರಾಟ ದಂಧೆ ನಡೆಯುತ್ತಿದ್ದು, ಇದೇ ವರ್ಷದ ಜನವರಿ 1ರಿಂದ ಏಪ್ರಿಲ್ 28ರವರೆಗೆ ₹130.18 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ಮಾದಕ ವಸ್ತುಗಳ ಮಾರಾಟ ಹಾಗೂ ಪೂರೈಕೆ ದಂಧೆ ಕಡಿವಾಣಕ್ಕೆ ಬೆಂಗಳೂರು ಪೊಲೀಸರು ವಿಶೇಷ ಕಾರ್ಯಾಚರಣೆ ಮುಂದುವರಿಸಿದ್ದಾರೆ. ಎನ್‌ಸಿಬಿ, ಅಬಕಾರಿ ಇಲಾಖೆ, ವಲಸೆ ಅಧಿಕಾರಿಗಳು ಹಾಗೂ ನಗರ ಪೊಲೀಸರು ಜಂಟಿ ಕಾರ್ಯಾಚರಣೆ ನಡೆಸಿ ಡ್ರಗ್ಸ್ ಪೆಡ್ಲರ್‌ಗಳನ್ನು ಬಂಧಿಸಿದ್ದಾರೆ. ನಗರದಲ್ಲಿ ಸೆರೆ ಸಿಕ್ಕಿದ ಆರೋಪಿಗಳು ನೀಡಿದ ಮಾಹಿತಿ ಆಧರಿಸಿ, ಕೇರಳ, ಗೋವಾ, ಮಹಾರಾಷ್ಟ್ರ, ನವದೆಹಲಿ ಹಾಗೂ ಬಿಹಾರದಲ್ಲೂ ಕಾರ್ಯಾಚರಣೆ ನಡೆಸಿ ಪೆಡ್ಲರ್‌ಗಳನ್ನು ಬಂಧಿಸಲಾಗಿದೆ ಎಂದು ತಿಳಿಸಿದರು.

ಆರೋಪಿಗಳಿಂದ ಜಪ್ತಿ ಮಾಡಿಕೊಂಡ ಡ್ರಗ್ಸ್

ಬೆಂಗಳೂರಿನ ಡ್ರಗ್ಸ್ ವಿರುದ್ಧ ನಡೆದ ಕಾರ್ಯಾಚರಣೆ

ವರ್ಷ	ಪೆಡ್ಲರ್ ಪ್ರಕರಣ	ಬಳಕೆದಾರ ಪ್ರಕರಣ	ಒಟ್ಟು ಪ್ರಕರಣ	ಬಂಧಿತರು	ವಶಕ್ಕೆ ಪಡೆದ ಡ್ರಗ್ಸ್(ಕೆ.ಜಿ)	ಮೌಲ್ಯ (ಕೋಟಿ)
2024	498	32	530	742	1,970	₹98.86
2025	502	900	1,402	1,929	1,499	₹173.03
2026*	256	1,703	1,959	2,612	1,085	₹130.18

(*ಏಪ್ರಿಲ್ 28ರವರೆಗೆ)

16 ಆರೋಪಿಗಳ ಬಂಧನ

ಬೆಂಗಳೂರು: ಮಾದಕ ವಸ್ತುಗಳ ಸಾಗಾಣಿಕೆ ಮತ್ತು ಮಾರಾಟ ಜಾಲದ ವಿರುದ್ಧ ನಗರದ ವಿವಿಧ ಠಾಣೆಗಳ ಪೊಲೀಸರು ಕಳೆದ ಒಂದು ವಾರದಲ್ಲಿ ವಿಶೇಷ ಕಾರ್ಯಾಚರಣೆ ನಡೆಸಿ, ಒಟ್ಟು ₹36.67 ಕೋಟಿ ಮೌಲ್ಯದ ವಿವಿಧ ಮಾದರಿಯ ಮಾದಕ ವಸ್ತುಗಳನ್ನು ಜಪ್ತಿ ಮಾಡಿದ್ದಾರೆ. ಸಿಸಿಬಿ ಮಾದಕ ದ್ರವ್ಯ ನಿಗ್ರಹ ದಳ ಮತ್ತು ಬಾಗಲೂರು, ಆಡುಗೋಡಿ, ಚಿಕ್ಕಜಾಲ, ಎಚ್‌ಎಸ್‌ಆರ್ ಲೇಔಟ್, ಯಶವಂತಪುರ ಠಾಣೆಯ ಪೊಲೀಸರು ಜಂಟಿ ಕಾರ್ಯಾಚರಣೆ ನಡೆಸಿ, ಡ್ರಗ್ಸ್ ಮಾರಾಟ ಮಾಡುತ್ತಿದ್ದ 16 ಆರೋಪಿಗಳನ್ನು ಬಂಧಿಸಿದ್ದಾರೆ.

ಬಂಧಿತರಲ್ಲಿ ನಾಲ್ವರು ವಿದೇಶಿ ಪ್ರಜೆಗಳು, ಎಂಟು ಮಂದಿ ಹೊರ ರಾಜ್ಯದವರು ಹಾಗೂ ನಾಲ್ವರು ಸ್ಥಳೀಯರು ಎಂದು ನಗರ ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಸಿಂಗ್ ಮಾಹಿತಿ ನೀಡಿದರು. 9.64 ಕೆ.ಜಿ ಎಂಡಿಎಂಎ, 5 ಕೆ.ಜಿ ಹೈಡ್ರೊ ಗಾಂಜಾ, 19,755 ಎಲ್‌ಎಸ್‌ಡಿ ಸ್ಟ್ರಿಪ್ಸ್, 156 ಗ್ರಾಂ ಹೆರಾಯಿನ್, 618 ಗ್ರಾಂ ಚರಸ್, 332 ಗ್ರಾಂ ಕೊಕೇನ್ ಹಾಗೂ 11.470 ಕೆ.ಜಿ ಗಾಂಜಾವನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ಹೇಳಿದರು.

ಆರೋಪಿಗಳು ವಿದೇಶ ಹಾಗೂ ಹೊರ ರಾಜ್ಯಗಳಿಂದ ಕಡಿಮೆ ದರಕ್ಕೆ ಮಾದಕ ವಸ್ತುಗಳನ್ನು ಖರೀದಿಸಿ, ಬೆಂಗಳೂರಿನ ಕಾಲೇಜು ವಿದ್ಯಾರ್ಥಿಗಳು-ಸಾರ್ವಜನಿಕರನ್ನು ಗುರಿಯಾಗಿಸಿಕೊಂಡು ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದರು ಎಂಬುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ. ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹಕ್ಕೆ ಕಳುಹಿಸಲಾಗಿದೆ. ಜಾಲದ ಹಿಂದಿರುವ ಪೆಡ್ಲರ್‌ಗಳ ಬಂಧನಕ್ಕೆ ಕಾರ್ಯಾಚರಣೆ ಮುಂದುವರಿದಿದೆ ಎಂದು ಪೊಲೀಸರು ಹೇಳಿದರು.

ಪ್ರತ್ಯೇಕ ಪ್ರಕರಣ: ಮೂವರ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎರಡು ಪ್ರತ್ಯೇಕ ಸರ ಕಳವು ಪ್ರಕರಣಗಳಲ್ಲಿ ಮಹಿಳೆ ಸೇರಿದಂತೆ ಮೂವರನ್ನು ಪೊಲೀಸರು ಬಂಧಿಸಿದ್ದಾರೆ.

ಮುಖಗವಸು (ಮಾಸ್ಕ್) ಧರಿಸಿ ವಾಯುವಿಹಾರ ಮಾಡುತ್ತಿದ್ದ ಮಹಿಳೆಯ ಚಿನ್ನದ ಸರ ಕಳವು ಮಾಡಿದ್ದ ಆರೋಪಿಯನ್ನು ಬಾಣಸವಾಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ. ರಾಮಮೂರ್ತಿನಗರ ನಿವಾಸಿ ಹರೀಶ್(32) ಬಂಧಿತ.

ಆರೋಪಿಯಿಂದ ₹3.50 ಲಕ್ಷ ಮೌಲ್ಯದ ಚಿನ್ನಾಭರಣ ಜಪ್ತಿ ಮಾಡಲಾಗಿದೆ. ಏಪ್ರಿಲ್ 16ರಂದು ಠಾಣೆ ವ್ಯಾಪ್ತಿಯ ಎಚ್‌ಆರ್‌ಬಿಆರ್ ಲೇಔಟ್‌ನಲ್ಲಿ ಮಹಿಳೆಯೊಬ್ಬರು ವಾಯುವಿಹಾರ ಮಾಡುವಾಗ ಬೈಕ್‌ನಲ್ಲಿ ಬಂದ ಆರೋಪಿ ಚಿನ್ನದ ಸರ ಕಳ್ತನ ಮಾಡಿಕೊಂಡು ಪರಾರಿಯಾಗಿದ್ದ. ಈ ಸಂಬಂಧ ಮಹಿಳೆ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಅಪರಾಧ ಸುದ್ದಿ

ಮತ್ತೊಂದು ಪ್ರಕರಣದಲ್ಲಿ ನಡೆದುಕೊಂಡು ಹೋಗುತ್ತಿದ್ದ ಮಹಿಳೆಯ ಸರ ಕಸಿದು ಪರಾರಿಯಾಗಿದ್ದ ಆರೋಪಿ ನದೀಮ್ (34) ಹಾಗೂ ಆ ಸರವನ್ನು ತೆಗೆದುಕೊಂಡಿದ್ದ ಮಹಿಳೆಯನ್ನು ಕೆಂಗೇರಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕಾರು ಡಿಕ್ಕಿ: ಪಾದಚಾರಿ ಸಾವು

ಬೆಂಗಳೂರು: ಕೆ.ಆರ್.ಪುರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಆವಲಹಳ್ಳಿ ಸಮೀಪದ ಕಾಟಂನಲ್ಲೂರು ಬಳಿ ರಸ್ತೆ ದಾಟುವಾಗ ಕಾರು ಡಿಕ್ಕಿಯಾಗಿ ಸ್ಥಳದಲ್ಲೇ ಪಾದಚಾರಿ ಮೃತಪಟ್ಟಿದ್ದಾರೆ.

ಅಸ್ಸಾಂನ ಹೇಮಂತ್ ಮೃತಪಟ್ಟವರು.

ಬುಧವಾರ ಸಂಜೆ ಗಾಳಿ ಸಹಿತ ಧಾರಾಕಾರ ಮಳೆ ಸುರಿಯುತ್ತಿತ್ತು. ಮಳೆಯಿಂದ ರಕ್ಷಣೆ ಪಡೆಯಲು ಆತುರದಿಂದ ರಸ್ತೆ ದಾಟುವಾಗ ವೇಗವಾಗಿ ಬಂದ ಕಾರು ಡಿಕ್ಕಿಯಾಗಿದೆ. ಡಿಕ್ಕಿಯ ರಭಸಕ್ಕೆ ಹೇಮಂತ್ ಗಂಭೀರವಾಗಿ ಗಾಯಗೊಂಡು ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ಸಂಚಾರ ಪೊಲೀಸರು ಹೇಳಿದರು. ಕೆ.ಆರ್. ಪುರ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆರೋಪಿಗಳ ಪೈಕಿ ನದೀಮ್, ಮಾರ್ಚ್ 25ರಂದು ಕೆಂಗೇರಿ ಉಪನಗರ ಮುಖ್ಯರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದ ಮಹಿಳೆಯ ಸರ ಕಸಿದುಕೊಂಡು ಪರಾರಿಯಾಗಿದ್ದ. ಅದನ್ನು ಮಹಿಳೆಯೊಬ್ಬಳಿಗೆ ನೀಡಿ ವಿಲೇವಾರಿ ಮಾಡಿಸಿದ್ದ. ಹೀಗಾಗಿ ಇಬ್ಬರನ್ನೂ ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಕನಕಪುರ ಮೆಗಾ ಡೈರಿಗೆ ಲಭಿಸಿರುವ 16ನೇ ಸಿಐಐ ಆಹಾರ ಸುರಕ್ಷತಾ ಪ್ರಶಸ್ತಿಯನ್ನು ನವದೆಹಲಿಯಲ್ಲಿ ಸ್ವೀಕರಿಸಿದ್ದ ಅಧಿಕಾರಿಗಳು, ಗುರುವಾರ ಬೆಂಗಳೂರಿನಲ್ಲಿ ಬಮೂಲ್ ಅಧ್ಯಕ್ಷ ಡಿ.ಕೆ.ಸುರೇಶ್ ಅವರಿಗೆ ಹಸ್ತಾಂತರಿಸಿದರು. ಬಮೂಲ್ ವ್ಯವಸ್ಥಾಪಕ ನಿರ್ದೇಶಕ ಎಸ್.ಟಿ.ಸುರೇಶ್, ನಿರ್ದೇಶಕರು ಉಪಸ್ಥಿತರಿದ್ದರು.

'ಸಾಂಸ್ಕೃತಿಕ ಕಾರ್ಯಕ್ರಮದಿಂದ ಸೃಜನಶೀಲತೆ'

ಪ್ರಜಾವಾಣಿ ವಾರ್ತೆ

ಕೆಂಗೇರಿ: ಸಾಂಸ್ಕೃತಿಕ ಚಟುವಟಿಕೆಗಳು ಸೃಜನಶೀಲತೆ ಹಾಗೂ ಆತ್ಮವಿಶ್ವಾಸ ವೃದ್ಧಿಗೆ ಸಹಕಾರಿಯಾಗಿವೆ. ವ್ಯಕ್ತಿಯ ಸಮಗ್ರ ಬೆಳವಣಿಗೆ ದೃಷ್ಟಿಯಿಂದ ಇಂತಹ ಚಟುವಟಿಕೆಗಳಲ್ಲಿ ಪ್ರತಿ ವಿದ್ಯಾರ್ಥಿಯೂ ಪಾಲ್ಗೊಳ್ಳಬೇಕು ಎಂದು ನಟಿ ಬೃಂದಾ ಆಚಾರ್ಯ ಹೇಳಿದರು.

ಮೈಸೂರು ಮುಖ್ಯರಸ್ತೆಯ ರಾಜರಾಜೇಶ್ವರಿ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಆಯೋಜಿಸಿದ್ದ 'ಕಲಾ ಸೌರಭ - 2026'ಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ವಿದ್ಯಾರ್ಥಿಗಳಲ್ಲಿ ಬಾಂಧವ್ಯ ಮೂಡಿಸಲು ಮತ್ತು ಸಾಂಸ್ಕೃತಿಕ ಪ್ರತಿಭೆ ಹೊರಹೊಮ್ಮಲು ವಾರ್ಷಿಕೋತ್ಸವದಂತಹ ಕಾರ್ಯಕ್ರಮಗಳು ಸಹಕಾರಿ ಆಗಲಿವೆ ಎಂದರು.

ಕಾಲೇಜು ದಿನಗಳಲ್ಲಿನ ಸಂಭ್ರಮ ಹಾಗೂ ಸಂತೋಷದ ಕ್ಷಣಗಳು ಪ್ರತಿಯೊಬ್ಬರ ಪಾಲಿಗೂ ಅಮೂಲ್ಯ ನೆನಪುಗಳು. ಈ ಸಡಗರದೊಂದಿಗೆ ಭವಿಷ್ಯವನ್ನು ರೂಪಿಸಿಕೊಳ್ಳುವ ಜವಾಬ್ದಾರಿ ಮರೆಯಬಾರದು ಎಂದು ತಿಳಿಸಿದರು.

ಕಾಲೇಜಿನ ಪ್ರಾಂಶುಪಾಲ ಬಾಲಕೃಷ್ಣ ಮಾತನಾಡಿ, ಸ್ಪರ್ಧಾತ್ಮಕ ಯುಗದಲ್ಲಿ ಅಂಕ ಗಳಿಕೆ ಅತ್ಯಗತ್ಯ. ಈ ಒತ್ತಡವನ್ನು ತಣಿಸುವಲ್ಲಿ ಕ್ರೀಡೆ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳು ಪ್ರಮುಖ ಪಾತ್ರ ವಹಿಸುತ್ತವೆ ಎಂದರು.

ಸಂಸ್ಥೆಯ ಅಧ್ಯಕ್ಷ ಡಾ.ಎ.ಸಿ.ಷಣ್ಮುಗಂ, ಎಸಿಎಸ್ ಅರುಣ್ ಕುಮಾರ್ ಹಾಗೂ ಲಲಿತಾ ಲಕ್ಷ್ಮಿ ಅವರ ಮಾರ್ಗದರ್ಶನದಲ್ಲಿ ಸಂಸ್ಥೆಯು ಶೈಕ್ಷಣಿಕವಾಗಿ ಅಮೋಘ ಸಾಧನೆ ಮಾಡುತ್ತಿದೆ ಎಂದು ಶ್ಲಾಘಿಸಿದರು. ವಿವಿಧ ಸ್ಪರ್ಧೆಗಳಲ್ಲಿ ಜಯ ಗಳಿಸಿದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.

ಕಾರ್ಯನಿರ್ವಾಹಕ ನಿರ್ದೇಶಕ ಡಾ.ಎಸ್.ವಿಜಯಾನಂದ್, ಸಿಇಒ ಸಿ.ಎನ್.ಸೀತಾರಾಮ್, ವಿಶೇಷಾಧಿಕಾರಿ ಡಾ.ಎಸ್. ಜಯಬಾಲನ್ ಉಪಸ್ಥಿತರಿದ್ದರು.

ಸ್ಪರ್ಧಾ ವಿಜೇತರಿಗೆ ನಟಿ ಬೃಂದಾ ಆಚಾರ್ಯ ಬಹುಮಾನ ವಿತರಿಸಿದರು. ಪ್ರಾಂಶುಪಾಲ ಡಾ.ಬಾಲಕೃಷ್ಣ ಪಾಲ್ಗೊಂಡಿದ್ದರು

ಕೋಗಿಲು: ಪುನರ್ವಸತಿ ಕಲ್ಪಿಸಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋಗಿಲು ಲೇಔಟ್‌ನಲ್ಲಿ ಶೆಡ್‌ಗಳ ತೆರವು ಕಾರ್ಯಾಚರಣೆಯಿಂದ ಸಂತ್ರಸ್ತರಾದ ಎಲ್ಲ ಕುಟುಂಬಗಳಿಗೆ ಎರಡು ವಾರಗಳಲ್ಲಿ ಪುನರ್ವಸತಿ ಕಲ್ಪಿಸಬೇಕು. ಇಲ್ಲದಿದ್ದರೆ ಸ್ವಾತಂತ್ರ್ಯ ಉದ್ಯಾನದಲ್ಲಿ ಅನಿರ್ದಿಷ್ಟಾವಧಿ ಸತ್ಯಾಗ್ರಹ ಹಮ್ಮಿಕೊಳ್ಳಲಾಗುವುದು ಎಂದು ಕೋಗಿಲು ಲೇಔಟ್ ಸ್ಲಂ ನಿವಾಸಿಗಳ ಹೋರಾಟ ಸಮಿತಿ ಎಚ್ಚರಿಕೆ ನೀಡಿದೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿಯ ಸದಸ್ಯರಾದ ಪೂಜಾ, ಗೌರಮ್ಮ, 'ಕೋಗಿಲು ಬಡಾವಣೆಯ ಫಕೀರ್ ಕಾಲೊನಿ ಮತ್ತು ಮಹಾನಾಯಕ ಅಂಬೇಡ್ಕರ್ ನಗರದಲ್ಲಿ (ವಸೀಮ್ ಲೇಔಟ್) 156 ಮುಸ್ಲಿಂ, 31 ಹಿಂದೂ ಕುಟುಂಬ ಹಾಗೂ ಕ್ರೈಸ್ತ ಕುಟುಂಬವೊಂದು ನೆಲಸಿದ್ದವು. ಕೇವಲ ನಾಲ್ಕು ಗಂಟೆಯೊಳಗೆ ಇವರ ಮನೆಗಳನ್ನು ನೆಲಸಮ ಮಾಡಲಾಗಿದೆ. 128 ದಿನಗಳಿಂದ ಈ ಸಂತ್ರಸ್ತರು ಬೀದಿಯಲ್ಲಿಯೇ ಜೀವನ ನಡೆಸುತ್ತಿದ್ದಾರೆ' ಎಂದು ದೂರಿದರು.

'ರಾಜೀವ್ ಗಾಂಧಿ ವಸತಿ ನಿಗಮ ಹಾಗೂ ಜಿಬಿಎ ಸತತವಾಗಿ ನಡೆಸಿದ ಸಮೀಕ್ಷೆಯಲ್ಲಿ ದಾಖಲೆಗಳನ್ನು ಪರಿಶೀಲಿಸುವ ಪ್ರಕ್ರಿಯೆ ಮಾತ್ರ ನಡೆಯುತ್ತಿದೆ. ಆದರೆ ಸಂತ್ರಸ್ತರಿಗೆ ಮನೆ ನೀಡುವ ಯಾವುದೇ ಸೂಚನೆಗಳು ಕಾಣಿಸುತ್ತಿಲ್ಲ. ಸಿದ್ದರಾಮಯ್ಯ ಅವರು ಘೋಷಿಸಿರುವಂತೆ ಎಲ್ಲ ಸಂತ್ರಸ್ತರಿಗೆ ಪುನರ್ವಸತಿ ಕಲ್ಪಿಸಬೇಕು' ಎಂದು ಆಗ್ರಹಿಸಿದರು.

ವಿವಿಧ ಬೇಡಿಕೆ: ಅಹೋರಾತ್ರಿ ಧರಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಭೂ-ಪರಭಾರೆ ನಿಷೇಧ ಕಾಯ್ದೆ 1978-79 (ಪಿಟಿಸಿಎಲ್ ಕಾಯ್ದೆ) ಉಲ್ಲಂಘನೆ ಮಾಡುತ್ತಿರುವ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಪಿ.ಟಿ.ಸಿ.ಎಲ್ ಕಾಯ್ದೆ ಭೂಮಿ ವಂಚಿತರ ಹೋರಾಟ ಸಮಿತಿ ಅಹೋರಾತ್ರಿ ಧರಣಿ ಆರಂಭಿಸಿದೆ.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆಯುತ್ತಿರುವ ಧರಣಿಯಲ್ಲಿ ವಿವಿಧ ಜಿಲ್ಲೆಗಳ ನೂರಾರು ಜನರು ಪಾಲ್ಗೊಂಡು, ಬೇಡಿಕೆ ಈಡೇರಿಸುವಂತೆ ಆಗ್ರಹಿಸಿದರು.

ಉಪವಿಭಾಗಾಧಿಕಾರಿಗಳು (ಎ.ಸಿ), ಜಿಲ್ಲಾಧಿಕಾರಿಗಳು (ಡಿ.ಸಿ) ಉದ್ದೇಶಪೂರ್ವಕವಾಗಿ ಸಂವಿಧಾನದ ಆಶಯ ಮತ್ತು 2023ರ ತಿದ್ದುಪಡಿ ಕಾಯ್ದೆಯ ವಿರುದ್ಧವಾಗಿ ಆದೇಶ ನೀಡುತ್ತಿದ್ದಾರೆ ಎಂದು ಪ್ರತಿಭಟನಕಾರರು ಆರೋಪಿಸಿದರು.

ನೆಕ್ಕಂಟಿ ರಾಮಲಕ್ಷ್ಮೀ ಪ್ರಕರಣದಲ್ಲಿ ಸಮಾಜ ಕಲ್ಯಾಣ ಇಲಾಖೆಯು ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದೆ. ಸಮರ್ಪಕವಾಗಿ ವಾದ ಮಂಡಿಸದೆ ಕಾಲಹರಣ ಮಾಡುತ್ತಿರುವ ಉತ್ತರ ಭಾರತದ ವಕೀಲರನ್ನು ಬದಲಾಯಿಸಿ ದಕ್ಷ ವಕೀಲರನ್ನು ನೇಮಿಸಿ, ಶೀಘ್ರ ನ್ಯಾಯ ದೊರಕುವಂತೆ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

'ಸರ್ಕಾರದಿಂದ ಮಂಜೂರಾದ ಎಲ್ಲಾ ಜಮೀನುಗಳು ಪಿಟಿಸಿಎಲ್ ಕಾಯ್ದೆಯ ಕಲಂ 3 (1)ಬಿಗೆ ಒಳಪಟ್ಟಿದ್ದರೂ ಎ.ಸಿ, ಡಿ.ಸಿ ಮತ್ತು ಕೆಲವರು ಸೇರಿಕೊಂಡು ಇನಾಂ, ಪ್ರತಿಕೂಲ ಸ್ವಾಧೀನ ಮತ್ತು ವಿಳಂಬ ನೀತಿ ಭೂಪರಿವರ್ತನೆ ಹಾಗೂ ಇತರೆ ಕಾರಣ ನೀಡಿ ಈ ಜಮೀನು ಕಾಯ್ದೆಗೆ ಒಳಡುವುದಿಲ್ಲ ಎನ್ನುತ್ತಿದ್ದಾರೆ. ಇಂತಹವರಿಗೆ ಕಡಿವಾಣ ಹಾಕಿ, ಇವೆಲ್ಲವೂ ಕಾಯ್ದೆಯ ಕಲಂ 3(1) ಬಿಗೆ ಒಳಪಡುತ್ತದೆ ಎಂದು ಸ್ಪಷ್ಟೀಕರಣ ನೀಡಬೇಕು' ಎಂದು ಸಮಿತಿ ಅಧ್ಯಕ್ಷ ಪಿಟಿಸಿಎಲ್ ಮಂಜುನಾಥ್ ಮನವಿ ಮಾಡಿದ್ದಾರೆ.

ನಮೂನೆ -50, 53 ಮತ್ತು 57ರ ಅರ್ಜಿಗಳನ್ನು ಗಂಭೀರವಾಗಿ ಪಗರಿಣಿಸಿ ಕೂಡಲೇ ಮಂಜೂರು ಮಾಡಬೇಕು. ಪಿಟಿಸಿಎಲ್ ಕಾಯ್ದೆಯ ಪ್ರಕರಣಗಳಿಗೆ ಸಂಬಂಧಿಸಿದಂತೆ ವಿಶೇಷ ನ್ಯಾಯಾಲಯ ಸ್ಥಾಪಿಸಿ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಸಮುದಾಯಗಳ ಭೂಮಿ ರಕ್ಷಿಸಬೇಕು ಎಂದು ಹೇಳಿದರು.

ಧರಣಿಯಲ್ಲಿ ಸಮಿತಿಯ ಉಪಾಧ್ಯಕ್ಷ ಶಾಂತಕುಮಾರ್ ಚಳ್ಳಕೆರೆ, ಕಾರ್ಯದರ್ಶಿ ಪಿ.ವೆಂಕಟೇಶ್, ಗೌರವಾಧ್ಯಕ್ಷ ಬಿ.ಎಂ. ವೆಂಕಟೇಶ್, ಮುಖಂಡರಾದ ಮಾರಸಂದ್ರ ಮುನಿಯಪ್ಪ, ಮಾವಳ್ಳಿ ಶಂಕರ್, ಚಂದ್ರು ತರಹುಣಸೆ ಭಾಗವಹಿಸಿದ್ದರು.

ವೆಂಕಟಾಲ ಮಾರಮ್ಮ ದೇಗುಲ ಲೋಕಾರ್ಪಣೆ

ಯಲಹಂಕ: ತಾಲ್ಲೂಕಿನ ವೆಂಕಟಾಲ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಗ್ರಾಮದೇವತೆ ಮಾರಮ್ಮದೇವಿ ಸಹಿತ ಅಣ್ಣಮ್ಮ, ಗಂಗಮ್ಮ, ಚೌಡೇಶ್ವರಿ ಹಾಗೂ ದುರ್ಗಾಪರಮೇಶ್ವರಿ ದೇವಿಯರ ದೇವಾಲಯದ ಪ್ರತಿಷ್ಠಾಪನಾ ಮಹೋತ್ಸವ ವಿಜೃಂಭಣೆಯಿಂದ ನಡೆಯಿತು.

ಬೆಳಗ್ಗೆಯಿಂದಲೇ ದೇವತೆಯರಿಗೆ ಹೋಮ, ಅಭಿಷೇಕ, ವಿಶೇಷ ಅಲಂಕಾರ ಸೇರಿದಂತೆ ವಿವಿಧ ಪೂಜಾ ಕೈಂಕರ್ಯಗಳು ಹಾಗೂ ಧಾರ್ಮಿಕ ವಿಧಿ-ವಿಧಾನಗಳನ್ನು ನೆರವೇರಿಸಲಾಯಿತು. ದೇವಾಲಯಕ್ಕೆ ಬಂದ ಎಲ್ಲ ಮಹಿಳೆಯರಿಗೂ ಬಳೆ ತೊಡಿಸಿ, ಹೂವು ಮತ್ತು ಅರಿಶಿನ-ಕುಂಕುಮ ನೀಡಿ ಸ್ವಾಗತಿಸಿದ್ದು, ವಿಶೇಷವಾಗಿತ್ತು. ಅನ್ನದಾನ ಏರ್ಪಡಿಸಲಾಗಿತ್ತು.

ದೇವಾಲಯಕ್ಕೆ ಬಂದ ಎಲ್ಲ ಮಹಿಳೆಯರಿಗೂ ಬಳೆ ತೊಡಿಸಿ, ಹೂವು ಮತ್ತು ಅರಿಶಿನ-ಕುಂಕುಮ ನೀಡಿ ಸ್ವಾಗತಿಸಿದ್ದು, ವಿಶೇಷವಾಗಿತ್ತು. ಅನ್ನದಾನ ಏರ್ಪಡಿಸಲಾಗಿತ್ತು.

ವನಕಲ್ಲು ಮಲ

ಮಳೆ - ನಿಲ್ಲದ ಗೋಳು

ಪ್ರತಿ ವರ್ಷವೂ ಮಳೆ ಹಾನಿ
ಮುನ್ನೆಚ್ಚರಿಕೆ ವಹಿಸಲು ನಿರ್ಲಕ್ಷ್ಯ

• ಆರ್.ಮಂಜುನಾಥ್

ಬೆಂಗಳೂರು: ನಗರದಲ್ಲಿ ಪ್ರತಿ ವರ್ಷವೂ ಭಾರಿ ಮಳೆಗೆ ನಾಗರಿಕರು ಸಂಕಷ್ಟ ಎದುರಿಸುತ್ತಿದ್ದಾರೆ. ಎಲ್ಲೆಲ್ಲಿ ಯಾವ ರೀತಿಯ ಸಮಸ್ಯೆ ಉಂಟಾಗುತ್ತದೆ ಎಂಬ ಅರಿವು ಜಿಬಿಎ, ನಗರ ಪಾಲಿಕೆಗಳ ಅಧಿಕಾರಿಗಳಿಗೆ ಇದ್ದರೂ, ಮುನ್ನೆಚ್ಚರಿಕೆ ವಹಿಸದೆ, ನಿರ್ಲಕ್ಷ್ಯಭಾವ ತೋರುವುದರಿಂದ ಪ್ರತಿಬಾರಿ ಸಂಕಷ್ಟ ವೃದ್ಧಿಯಾಗುತ್ತಲೇ ಇದೆ.

ಮಳೆ ಬಂದಾಗ ಯಾವ ಪ್ರದೇಶಗಳಲ್ಲಿ ಯಾವ ರೀತಿಯ ಸಮಸ್ಯೆ ಎದುರಾಗುತ್ತದೆ ಎಂಬುದರ ಕುರಿತು ಕಳೆದ ಐದಾರು ವರ್ಷಗಳಿಂದ ಬಿಬಿಎಂಪಿ/ಜಿಬಿಎ ಪಟ್ಟಿಯನ್ನೇ ತಯಾರಿಸಿದೆ. 209 ಸ್ಥಳಗಳನ್ನು ಪ್ರವಾಹ ಪೀಡಿತ ಪ್ರದೇಶ ಎಂದು ಗುರುತಿಸಲಾಗಿದ್ದು, ಇದರಲ್ಲಿ 49 ಪ್ರದೇಶಗಳಲ್ಲಿ ಇನ್ನೂ ಸಮಸ್ಯೆ ಮುಂದುವರಿದಿದೆ ಎಂದು ಐ.2ರ ಜಿಬಿಎ ಸುತ್ತೋಲೆಯಲ್ಲಿಯೇ ತಿಳಿಸಲಾಗಿದೆ.

ಪ್ರವಾಹ ತಡೆಗಟ್ಟಲು ಶಾಶ್ವತ ಪರಿಹಾರ ಕ್ರಮಗಳನ್ನು ತೆಗೆದುಕೊಂಡು, ಯಾವುದೇ ಸಮಸ್ಯೆ ಉಂಟಾಗದಂತೆ ಅಗತ್ಯ ಕಾಮಗಾರಿಗಳನ್ನು ನಡೆಸಬೇಕು ಎಂದು ಜನವರಿಯಿಂದಲೂ ನಗರ ಪಾಲಿಕೆಗಳಿಗೆ ಜಿಬಿಎ ಸೂಚನೆ ನೀಡುತ್ತಿದೆ. ಯಾವ ಕೆಲಸವನ್ನು ಯಾರು ನಿರ್ವಹಿಸಬೇಕು ಎಂಬ ಬಗ್ಗೆಯೂ ಮಾರ್ಗಸೂಚಿ ಇದೆ. ಆದರೆ, ಮಳೆ ಬರುವವರೆಗೂ ಈ ಕೆಲಸಗಳು ಆಗಿರುವುದಿಲ್ಲ. ಹೀಗಾಗಿ, ಇಂತಹದ್ದೇ ಸೂಚನೆ/ ಮಾರ್ಗಸೂಚಿಯನ್ನು ಏಪ್ರಿಲ್ 30ರಂದು ಕೂಡ ಜಿಬಿಎ ಮುಖ್ಯ ಆಯುಕ್ತರು ಹೊರಡಿಸಿದ್ದಾರೆ.

ನಗರ ಪಾಲಿಕೆಗಳ ಆಯುಕ್ತರು ಹಾಗೂ ಜಿಬಿಎ ಅಧಿಕಾರಿಗಳಿಗೆ ಮಳೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲು ನೀಡಿದ್ದ ಸೂಚನೆಗಳಲ್ಲಿ ಶೇ 50ರಷ್ಟು ಜಾರಿಯಾಗಿದ್ದರೂ, ನಗರದಲ್ಲಿ ಮಳೆಯಿಂದ ಇಷ್ಟೊಂದು ಸಮಸ್ಯೆ ಎದುರಾಗುತ್ತಿರಲಿಲ್ಲ. 'ಒಂದು ಗಂಟೆಯಲ್ಲಿ ಅತಿಹೆಚ್ಚು ಮಳೆ ಬಂದಿದೆ' ಎಂಬ ಸಬೂಬು ಹೇಳುತ್ತಿದ್ದಾರೆ. ಆದರೆ, 'ಎಲ್ಲ ರೀತಿಯ ಮುಂಜಾಗ್ರತಾ ಕ್ರಮ ಕೈಗೊಳ್ಳಲಾಗಿದೆ' ಎಂದು ಎರಡು ವಾರದ ಹಿಂದೆ ಹೇಳಿದ್ದನ್ನು ಹೇಗೆ ಅಧಿಕಾರಿಗಳು ಸಮರ್ಥಿಸಿಕೊಳ್ಳುತ್ತಾರೆ ಎಂಬ ಪ್ರಶ್ನೆ ಉದ್ಭವಿಸುತ್ತದೆ.

'ಹೊಸ ಕಟ್ಟಡದಲ್ಲಿ ಒಂದು ಗೋಡೆ ಹೆಚ್ಚಾಗಿ ನಿರ್ಮಿಸುತ್ತಿರುವುದನ್ನು ಮೂರನೇ ಕಣ್ಣಿನಿಂದಲೇ ತಿಳಿದುಕೊಳ್ಳುವ ಎಂಜಿನಿಯರ್‌ಗಳಿಗೆ ತಮ್ಮ ವ್ಯಾಪ್ತಿಯಲ್ಲಿ ಶಿಥಿಲವಾಗಿರುವ ಕಟ್ಟಡ, ಗೋಡೆಗಳ ಅರಿವು ಇರುವುದಿಲ್ಲವೇ? ಇಂತಹ, ಅಪಾಯಕಾರಿ ಪ್ರದೇಶಗಳಲ್ಲಿ ಮುಂಜಾಗ್ರತಾ ಕ್ರಮ ಕೈಗೊಂಡಿದ್ದರೆ ಬೌರಿಂಗ್ ಆಸ್ಪತ್ರೆಯ ಗೋಡೆ ಕುಸಿತದ ದುರ್ಘಟನೆಯನ್ನು ತಪ್ಪಿಸಬಹುದಿತ್ತಲ್ಲವೇ ಎಂಬ ಪ್ರಶ್ನೆಗಳು ಎದುರಾಗಿವೆ. 'ಅದು ಖಾಸಗಿ ಅಥವಾ ಪಾಲಿಕೆಗೆ ಸಂಬಂಧಿಸಿದ್ದಲ್ಲ' ಎಂಬ ಉತ್ತರಿಸಬಹುದು. ಆದರೆ, ಜವಾಬ್ದಾರಿ ನಗರ ಪಾಲಿಕೆಗಳದ್ದೇ ಆಗಿರುತ್ತದೆ ಅಲ್ಲವೇ' ಎಂದು ನಾಗರಿಕರು ಪ್ರಶ್ನಿಸುತ್ತಾರೆ.

ಧರೆಗುರುಳುವ ಮರ, ಕೊಂಬೆಗಳನ್ನು ತುರ್ತಾಗಿ ತೆರವುಗೊಳಿಸಲು ತಂಡ ರಚಿಸಬೇಕು. ನಾಗರಿಕರಿಂದ ದೂರು ಬಂದರೆ ತಕ್ಷಣ ಸ್ಪಂದಿಸಬೇಕು. ಬಾಗಿರುವ ಹಾಗೂ ಬೀಳುವಂತಹ ಸ್ಥಿತಿಯಲ್ಲಿರುವ ರೆಂಬೆ-ಕೊಂಬೆಗಳನ್ನು ತೆರವುಗೊಳಿಸಲು ಕ್ರಮ ವಹಿಸಬೇಕು ಎಂದು ಜಿಬಿಎಯಲ್ಲಿರುವ ಅರಣ್ಯ ವಿಭಾಗದ ವಿಶೇಷ ಆಯುಕ್ತರಿಗೆ ಜವಾಬ್ದಾರಿ ವಹಿಸಲಾಗಿದೆ. ಆದರೆ, ಈ ಬಗ್ಗೆ ಕ್ರಮಗಳಾಗಿದ್ದರೆ, ಏಪ್ರಿಲ್ 29ರಂದು ಸುರಿದ ಮಳೆಗೆ ಮರಗಳಿಂದ ಇಷ್ಟೊಂದು ಹಾನಿ ಆಗುತ್ತಿರಲಿಲ್ಲ ಎಂಬ ಅಭಿಪ್ರಾಯವಿದೆ.

ಮಳೆಯಿಂದಾಗುವ ಸಮಸ್ಯೆ ನಿವಾರಣೆಗೆ ಹೊಸದಾಗಿ ಯೋಜನೆ ರೂಪಿಸುವ ಅಗತ್ಯವೇನೂ ಇಲ್ಲ. ಬಿಬಿಎಂಪಿ ಅಥವಾ ಜಿಬಿಎ ಈ ಹಿಂದೆ ರೂಪಿಸಿರುವ ಯೋಜನೆಗಳನ್ನೇ ಅನುಷ್ಠಾನಗೊಳಿಸಿದರೆ, 2026ರ ಜನವರಿಯಿಂದ ನೀಡುತ್ತಿರುವ ಸೂಚನೆ/ಮಾರ್ಗಸೂಚಿಗಳನ್ನು ಅನುಸರಿಸಿದ್ದರೆ ಜನರಿಗೆ ಮಳೆಯಿಂದ ಇಷ್ಟೊಂದು ಸಂಕಷ್ಟ ಎದುರಾಗುತ್ತಿಲ್ಲ. ಮಳೆಗಾಲ ಶುರುವಾಗುವ ಮೊದಲು ಅಗತ್ಯ ಕ್ರಮಗಳನ್ನು ತುರ್ತಾಗಿ ಜಿಬಿಎ ಹಾಗೂ ನಗರ ಪಾಲಿಕೆಗಳು ಕೈಗೊಂಡರೆ, ಅನಾಹುತಗಳನ್ನು ತಪ್ಪಿಸಬಹುದು.

4 ತಿಂಗಳಿಂದ ಜಿಬಿಎ ನೀಡುತ್ತಿರುವ ಸೂಚನೆ

- ರಸ್ತೆಬದಿ ಚರಂಡಿ ಮತ್ತು ಮಳೆನೀರು ಕಾಲುವೆಗಳಲ್ಲಿ ಹೂಳು, ಕಸ ಹಾಗೂ ಇನ್ನಿತರೆ ಅಡೆತಡೆಗಳನ್ನು ತೆರವುಗೊಳಿಸಬೇಕು. ಚರಂಡಿಗಳು, ಕಾಲುವೆಗಳಿಂದ ಹೊರ ತೆಗೆದ ಹೂಳು, ಮಣ್ಣು ಮತ್ತು ತ್ಯಾಜ್ಯವನ್ನು ವಿಲೇವಾರಿ ಮಾಡಬೇಕು
- ರಸ್ತೆ ಮೇಲಿನ ಮಳೆ ನೀರು ಸರಾಗವಾಗಿ ಚರಂಡಿಗೆ ಹರಿಯಲು ಕರ್ಬ್ ಪ್ರವೇಶಗಳಲ್ಲಿನ ಗ್ರೇಟಿಂಗ್ ಮತ್ತು ಅಂಡರ್ ಪಾಸ್ ಗ್ರೇಟಿಂಗ್ ಸ್ವಚ್ಛಗೊಳಿಸಬೇಕು
- ಎಲ್ಲಾ ಡ್ರೈನೇಜ್ ಚೇಂಬರ್‌ಗಳನ್ನು ಸ್ವಚ್ಛಗೊಳಿಸಿ ನೀರಿನ ಸರಾಗ ಹರಿವಿಗೆ ಕ್ರಮವಹಿಸಬೇಕು
- ನೀರು ನಿಲ್ಲುವ ಸಮಸ್ಯೆ ಹೆಚ್ಚಿರುವ ಪ್ರದೇಶಗಳಲ್ಲಿ ವಿಶೇಷ ಗಮನ ನೀಡಿ ಶಾಶ್ವತ ಪರಿಹಾರ ಕ್ರಮ ಕೈಗೊಳ್ಳಬೇಕು
- ಚರಂಡಿಗಳು, ಕಾಲುವೆಗಳ ಅಕ್ಕಪಕ್ಕದಲ್ಲಿ 'ಬ್ಲಾಕ್ ಸ್ಪಾಟ್' ಆಗದಂತೆ ಕ್ರಮವಹಿಸಬೇಕು
- ಪ್ರಾಥಮಿಕ ಹಾಗೂ ದ್ವಿತೀಯ ಹಂತದ ಮಳೆ ನೀರುಗಾಲುವೆಗಳ ಹೂಳು ತೆಗೆದು, ಪುನಶ್ಚೇತನ ಕಾರ್ಯ ಕೈಗೊಳ್ಳಬೇಕು

ಅಪಾಯದ ಸ್ಥಳಗಳಿವೆಯೇ?

ಮಳೆಯಿಂದ ಸಮಸ್ಯೆಯಾಗುವ ಪ್ರದೇಶಗಳು, ಶಿಥಿಲವಾದ ಗೋಡೆ, ಕಟ್ಟಡಗಳು ನಿಮ್ಮ ಸಮೀಪದ ಸ್ಥಳಗಳಲ್ಲಿ ಇದ್ದರೆ, ಯಾವುದಾದರೂ ಪ್ರದೇಶದಲ್ಲಿ ಮಳೆಯಿಂದ ಸಮಸ್ಯೆ ಆಗುತ್ತಿರುವ ಮಾಹಿತಿ ಇದ್ದರೆ, ಚಿತ್ರ ಸಹಿತ 'ಪ್ರಜಾವಾಣಿ'ಗೆ ಕಳುಹಿಸಿ ಕೊಡಿ.

ವಾಟ್ಸ್ ಆ್ಯಪ್: 96060 38256

ನಿರ್ಲಕ್ಷ್ಯ ಕಂಡುಬಂದರೆ ಜಿಬಿಎ ಅಧಿಕಾರಿಗಳು, ಗುತ್ತಿಗೆದಾರರ ವಿರುದ್ಧ ಎಫ್‌ಐಆರ್

• ಆದಿತ್ಯ ಕೆ.ಎ.

ಬೆಂಗಳೂರು: 'ಆಟದ ಮೈದಾನ ನಿರ್ಮಿಸುವ ಉದ್ದೇಶದಿಂದ ಮಣ್ಣು ಅಗೆದು ಕಾಂಪೌಂಡ್ ಬಳಿ ಸುರಿದು ಜಾಗ ಎತ್ತರಿಸಿದ್ದು ಹಾಗೂ ಅಲ್ಲಲ್ಲಿ ಗುಂಡಿಗಳನ್ನು ತೆಗೆದಿದ್ದು ಶಿವಾಜಿನಗರದ ಬೌರಿಂಗ್ ಆಸ್ಪತ್ರೆಯ ಕಾಂಪೌಂಡ್ ಕುಸಿಯಲು ಕಾರಣವಾಗಿದೆ' ಎಂಬುದು ಪೊಲೀಸರ ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ.

ದುರಂತ ಸಂಭವಿಸಿದ ಸ್ಥಳಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಬುಧವಾರ ರಾತ್ರಿಯೇ ಭೇಟಿ ನೀಡಿ, ತನಿಖೆಗೆ ಆದೇಶಿಸಿದ್ದರು. ಪೂರ್ವ ವಿಭಾಗದ ಕಮರ್ಷಿಯಲ್ ಸ್ಟ್ರೀಟ್ ಠಾಣೆಯ ಪೊಲೀಸರು, ಯುಡಿಆರ್(ಅಸಹಜ ಸಾವು) ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದಾರೆ.

'ಸದ್ಯ ಯಾರ ವಿರುದ್ಧವೂ ಎಫ್‌ಐಆರ್ ದಾಖಲು ಮಾಡಿಲ್ಲ. ಪ್ರಾಥಮಿಕ ತನಿಖೆಯಷ್ಟೇ ಪೂರ್ಣವಾಗಿದೆ. ಹಿರಿಯ ಅಧಿಕಾರಿಗಳಿಗೆ ವರದಿ ಸಲ್ಲಿಸಲಾಗಿದೆ. ಮುಂದಿನ ಹಂತದ ತನಿಖೆಯ ವೇಳೆ ನಿರ್ಲಕ್ಷ್ಯ ಕಂಡುಬಂದರೆ, ಜಿಬಿಎ ಅಧಿಕಾರಿಗಳು, ಗುತ್ತಿಗೆದಾರರ ವಿರುದ್ಧ ಎಫ್‌ಐಆರ್ ದಾಖಲಿಸಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲಾಗುವುದು. ಪಾದಚಾರಿ ಮಾರ್ಗದಲ್ಲಿ ಪ್ರತಿನಿತ್ಯ ಬೀದಿಬದಿಯ ವ್ಯಾಪಾರಿಗಳು ವ್ಯಾಪಾರ ನಡೆಸುತ್ತಿದ್ದಾರೆ ಎಂಬ ಅರಿವಿದ್ದರೂ ಮಣ್ಣು ಸುರಿದು ಕಾಂಪೌಂಡ್ ದುರ್ಬಲ ಮಾಡಿರುವುದು ಕಂಡುಬಂದಿದೆ' ಎಂದು ಪೊಲೀಸ್ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

'ವೈದ್ಯಕೀಯ ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಬೌರಿಂಗ್ ಆಸ್ಪತ್ರೆ ಸೇರ್ಪಡೆಯಾದ ಮೇಲೆ ಆಸ್ಪತ್ರೆಯ ಆವರಣದಲ್ಲಿ ಹೊಸ ಕಟ್ಟಡಗಳು ನಿರ್ಮಾಣವಾಗಿವೆ. ದುರಂತದ ಸ್ಥಳದಿಂದ ಕೆಲವೇ ಮೀಟರ್‌ಗಳಲ್ಲಿ ಹಳೆಯ ವಸತಿಗೃಹಗಳಿದ್ದವು. ಕಟ್ಟಡಗಳನ್ನು ಇತ್ತೀಚೆಗೆ ತೆರವು ಮಾಡಿ, ವೈದ್ಯಕೀಯ ವಿದ್ಯಾರ್ಥಿಗಳಿಗೆ ಅನುಕೂಲವಾಗಲೆಂದು ಮೈದಾನ ನಿರ್ಮಿಸುವ ಕಾಮಗಾರಿ ಆರಂಭಿಸಲಾಗಿತ್ತು. ಮಣ್ಣು ಅಗೆದು ಕಾಂಪೌಂಡ್ ಬಳಿಯೇ ರಾಶಿ ಹಾಕಲಾಗಿತ್ತು. ಅಲ್ಲದೇ ಕಾಂಪೌಂಡ್ ಬಳಿ ಗಿಡಗಳನ್ನು ನೆಡಲು ಆಳವಾದ ಗುಂಡಿ ತೆಗೆಯಲಾಗಿತ್ತು. ಬುಧವಾರ ಸಂಜೆ ಸುರಿದ ಧಾರಾಕಾರ ಮಳೆಯಿಂದ ಮಣ್ಣಿನ ರಾಶಿ ಹಾಗೂ ಗುಂಡಿಗಳಲ್ಲಿ ನೀರು ಶೇಖರಣೆಗೊಂಡಿತ್ತು. ಅಲ್ಲದೇ ಮಣ್ಣಿನ ಒತ್ತಡವು ಕಾಂಪೌಂಡ್ ಮೇಲೆ ಬಿದ್ದಿತ್ತು. ಮಣ್ಣಿನಲ್ಲಿ ಶೇಖರಣೆಗೊಂಡಿದ್ದ ನೀರು ಕಾಂಪೌಂಡ್ ಮೂಲಕ ಹೊರಗೆ ಹರಿಯಲು ಆರಂಭಿಸಿತ್ತು. ಮೊದಲೇ ಶಿಥಿಲಗೊಂಡಿದ್ದ ಕಾಂಪೌಂಡ್ ಏಕಾಏಕಿ ಕುಸಿದಿದೆ ಎಂಬುದು ಸದ್ಯದ ತನಿಖೆಯಿಂದ ಗೊತ್ತಾಗಿದೆ' ಎಂದು ಅಧಿಕಾರಿಯೊಬ್ಬರು ಹೇಳಿದರು.

'ಬಹಳ ವರ್ಷಗಳ ಹಿಂದೆಯೇ ಕಾಂಪೌಂಡ್ ಅನ್ನು ಕಲ್ಲಿನಿಂದ ನಿರ್ಮಿಸಲಾಗಿತ್ತು. ಕಾಂಪೌಂಡ್ ಹೆಚ್ಚು ಎತ್ತರ ಇಲ್ಲದಿದ್ದರೂ ಕಲ್ಲು ಹಾಗೂ ಮಣ್ಣು ವ್ಯಾಪಾರಿಗಳು, ಪ್ರವಾಸಿಗರ ಮೇಲೆ ಕುಸಿದು ಬಿದ್ದಿದೆ. ನಿಂತಿದ್ದವರ ಮೇಲೆ ದೊಡ್ಡ ಗಾತ್ರದ ಕಲ್ಲುಗಳು ಬಿದ್ದ ಪರಿಣಾಮ ಹೊರಕ್ಕೆ ಬರಲು ಸಾಧ್ಯವಾಗದೇ ಏಳು ಮಂದಿ ಸ್ಥಳದಲ್ಲೇ ಮೃತರಾದರು' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

'ಬಹಳ ವರ್ಷಗಳಿಂದಲೂ ಆಸ್ಪತ್ರೆಯ ರಸ್ತೆ ಬದಿಯಲ್ಲಿ ಬೀದಿಬದಿಯ ವ್ಯಾಪಾರಿಗಳಿಗೆ ಅವಕಾಶ ಕಲ್ಪಿಸಲಾಗಿದೆ. ಹಿಂದೊಮ್ಮೆ ವ್ಯಾಪಾರಿಗಳನ್ನು ತೆರವು ಮಾಡಲಾಗಿತ್ತು. ಪರ್ಯಾಯ ಜಾಗವಿಲ್ಲದ ಕಾರಣಕ್ಕೆ ಮಾನವೀಯ ನೆಲೆಯಲ್ಲಿ ಅದೇ ಸ್ಥಳದಲ್ಲಿ ವ್ಯಾಪಾರಕ್ಕೆ ಅವಕಾಶ ಕಲ್ಪಿಸಲಾಗಿತ್ತು' ಎಂದು ಮೂಲಗಳು ತಿಳಿಸಿವೆ.

ಶಿವಾಜಿನಗರದ ಬೌರಿಂಗ್ ಆಸ್ಪತ್ರೆಯ ಕಾಂಪೌಂಡ್ ಕುಸಿದ ಸ್ಥಳವನ್ನು ಪೊಲೀಸ್ ಕಾನ್‌ಸ್ಟೆಬಲ್‌ವೊಬ್ಬರು ಗುರುವಾರ ಪರಿಶೀಲನೆ ನಡೆಸಿದರು

ಚಿತ್ರ: ವಿ.ಪುಷ್ಕರ್

ಕಾಂಪೌಂಡ್ ಬಳಿ ಮಣ್ಣು ಸುರಿದಿದ್ದೇ ಕಾರಣ

ಸಿಮೆಂಟ್ ಇಟ್ಟಿಗೆ ಬಿದ್ದು ವ್ಯಕ್ತಿ ಸಾವು

ನಗರದಲ್ಲಿ ಬುಧವಾರ ಸಂಜೆ ಹಾಗೂ ರಾತ್ರಿ ಸುರಿದ ಧಾರಾಕಾರ ಮಳೆ ಹಾಗೂ ಬೀಸಿದ ಗಾಳಿಗೆ ಮನೆಯ ಚಾವಣಿ, ಸಿಮೆಂಟ್ ಇಟ್ಟಿಗೆ ಬಿದ್ದು ಮಂಜುನಾಥ್ ಎಂಬುವವರು ಮೃತಪಟ್ಟಿದ್ದಾರೆ. ಚಾಮರಾಜಪೇಟೆ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ. ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ ಮೃತ ದೇಹವನ್ನು ಹಸ್ತಾಂತರ ಮಾಡಲಾಗಿದೆ.

ಮನೆಯ ಮೇಲಿನ ಶೀಟ್ ಹಾರದಂತೆ ಕಲ್ಲು ಇಡಲಾಗಿತ್ತು. ಗಾಳಿ, ಮಳೆಗೆ ಶೀಟ್ ಬಿದ್ದಿದ್ದು ಈ ವೇಳೆ ಶೀಟ್ ಮೇಲಿಟ್ಟಿದ್ದ ಕಲ್ಲು ಮನೆಯಲ್ಲಿ ಮಲಗಿದ್ದ ಮಂಜುನಾಥ್ ಮೇಲೆ ಬಿದ್ದ ಪರಿಣಾಮ ಸಾವು ಸಂಭವಿಸಿದೆ ಎಂದು ಪೊಲೀಸರು ಹೇಳಿದರು.
ಮಳೆಯಿಂದ ಸಂಭವಿಸಿದ ದುರಂತದಲ್ಲಿ ಮೃತಪಟ್ಟವರ ಸಂಖ್ಯೆ 10ಕ್ಕೆ ಏರಿಕೆಯಾಗಿದೆ.

ಜನ್ಮದಿನ: ಬಟ್ಟೆ ಖರೀದಿಗಾಗಿ ಬಂದಿದ್ದ ಬಾಲಕಿ

ದುರಂತದಲ್ಲಿ ಕೆ.ಜಿ.ಹಳ್ಳಿಯ ಮುಸಾವೀರ್ ಬೇಗಂ (6) ಮೃತಪಟ್ಟಿದ್ದಾಳೆ. ಮೇ 3ರಂದು ಆಕೆಯ ಹುಟ್ಟುಹಬ್ಬ ಇತ್ತು. ಹುಟ್ಟುಹಬ್ಬಕ್ಕೆಂದು ಹೊಸ ಬಟ್ಟೆ ಖರೀದಿಸಲು ಮುಸಾವೀರ್ ಬೇಗಂ ಪೋಷಕರ ಜತೆಗೆ ಮಾರುಕಟ್ಟೆಗೆ ಬಂದಿದ್ದಳು. ಅದೇ ವೇಳೆ ಸುರಿದ ಮಳೆಯಿಂದ ರಕ್ಷಣೆ ಪಡೆಯಲು ಕಾಂಪೌಂಡ್ ಬಳಿ ನಿಂತಿದ್ದಳು. ಅಷ್ಟರಲ್ಲಿ ಕಾಂಪೌಂಡ್ ಕುಸಿದು ಅವಶೇಷಗಳ ಅಡಿ ಸಿಲುಕಿ ಮೃತಪಟ್ಟಿದ್ದಾಳೆ. ಮುಬೀನಾ-ಚಾಂದ್ ಪಾಷಾ ದಂಪತಿಯ ಏಕೈಕ ಪುತ್ರಿ ಮುಸಾವೀರ್ ಬೇಗಂ.

ಚರ್ಚ್‌ಗೆ ಬಂದಿದ್ದ ಕೇರಳದ ಪ್ರವಾಸಿಗರು

ಕೇರಳದ ಲತಾ, ಸ್ಮಿತಾ, ಪ್ರೀತಿ, ಸಿಜಿ, ಮಾಯಾ ಪ್ರವಾಸಕ್ಕೆಂದು ನಗರಕ್ಕೆ ಬಂದಿದ್ದರು. ಸೇಂಟ್ ಬೆಸಿಲಿಕಾ ಚರ್ಚ್ ವೀಕ್ಷಣೆ ಮಾಡಿಕೊಂಡು ರಸೆಲ್ ಮಾರುಕಟ್ಟೆಯತ್ತ ಧಾವಿಸಿದ್ದರು. ಅಲ್ಲಿಂದ ಶಿವಾಜಿನಗರದತ್ತ ಬರುವಾಗ ಜೋರು ಮಳೆ ಆರಂಭವಾಗಿತ್ತು. ಕಾಂಪೌಂಡ್ ಪಕ್ಕದಲ್ಲಿ ರಕ್ಷಣೆ ಪಡೆಯಲು ನಿಂತಿದ್ದರು. ಆಗ ಕಾಂಪೌಂಡ್ ಕುಸಿದು ಪ್ರವಾಸಕ್ಕೆ ಬಂದಿದ್ದ ಐವರ ಪೈಕಿ ಇಬ್ಬರು ಸ್ಥಳದಲ್ಲೇ ಅಸುನೀಗಿದ್ದಾರೆ.

ಬೌರಿಂಗ್ ಆಸ್ಪತ್ರೆಯಲ್ಲಿ ಏಳು ಹಾಗೂ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಇಬ್ಬರು ಸೇರಿದಂತೆ ಒಟ್ಟು ಒಂಬತ್ತು ಗಾಯಾಳುಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ. ಎಲ್ಲರೂ ಚೇತರಿಸಿಕೊಳ್ಳುತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ.

ತಡರಾತ್ರಿಯೇ ಮರಣೋತ್ತರ ಪರೀಕ್ಷೆ

ದುರಂತದಲ್ಲಿ ಮೃತಪಟ್ಟವರ ಮರಣೋತ್ತರ ಪರೀಕ್ಷೆಯನ್ನು ಬುಧವಾರ ತಡರಾತ್ರಿಯೇ ನಡೆಸಿ ಮೃತದೇಹಗಳನ್ನು ಹಸ್ತಾಂತರ ಮಾಡಲಾಯಿತು. ಕಣ್ಣೀರು ಸುರಿಸುತ್ತಲೇ ಮೃತದೇಹಗಳನ್ನು ಕುಟುಂಬಸ್ಥರು ಪಡೆದುಕೊಂಡರು. ಘಟನೆ ನಡೆದ ಸ್ಥಳದ ಕೂಗಳತೆಯ ದೂರದಲ್ಲೇ ಬೌರಿಂಗ್ ಆಸ್ಪತ್ರೆಯ ಶವಾಗಾರವಿದೆ. ಅದೇ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಲಾಯಿತು. ಇಬ್ಬರ ಮೃತದೇಹಗಳನ್ನು ಕೇರಳಕ್ಕೆ ರವಾನೆ ಮಾಡಲಾಗಿದೆ. ಆಪ್ತರನ್ನು ಕಳೆದುಕೊಂಡ ನೋವಿನಲ್ಲಿ ಕುಟುಂಬಸ್ಥರು ಕಣ್ಣೀರಾದರು.

ಸಂಕ್ಷಿಪ್ತ ಸುದ್ದಿ

ತನಿಖೆಗೆ ಎರಡು ಸಮಿತಿ

ಬೆಂಗಳೂರು: ಕಾಂಪೌಂಡ್ ಕುಸಿದ ಪ್ರಕರಣದ ತನಿಖೆ ನಡೆಸಲು ಎರಡು ಸಮಿತಿಗಳನ್ನು ರಚಿಸಿದ್ದು, ಏಳು ದಿನಗಳಲ್ಲಿ ವರದಿ ನೀಡಲು ಸೂಚಿಸಲಾಗಿದೆ.

ಏಳು ಮಂದಿ ಮೃತಪಟ್ಟ ಪ್ರಕರಣದ ತನಿಖೆ ಕೈಗೊಂಡು ವರದಿ ಸಲ್ಲಿಸಲು ನಗರ ಜಿಲ್ಲಾಧಿಕಾರಿ ಹಾಗೂ ಯಲಹಂಕದ ತಹಶೀಲ್ದಾರ್ ಅವರನ್ನು ಒಳಗೊಂಡ ಸಮಿತಿ ರಚಿಸಿ ಗುರುವಾರ ಆದೇಶ ಹೊರಡಿಸಲಾಗಿದೆ.

ಮುಖ್ಯಮಂತ್ರಿಯವರ ಸೂಚನೆಯಂತೆ, ಪ್ರಕರಣವನ್ನು ತಾಂತ್ರಿಕವಾಗಿ ಪರಿಶೀಲಿಸಿ ವರದಿ ಸಲ್ಲಿಸಲು ಲೋಕೋಪಯೋಗಿ ಇಲಾಖೆ ನಿವೃತ್ತ ಮುಖ್ಯ ಎಂಜಿನಿಯರ್ ಕೆ. ಮೋಹನ್ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿದೆ. ಲೋಕೋಪಯೋಗಿ ಇಲಾಖೆಯ ಕಟ್ಟಡಗಳ ವೃತ್ತದ ಅಧೀಕ್ಷಕ ಎಂಜಿನಿಯರ್ ಈ ಸಮಿತಿಯ ಸದಸ್ಯ ಕಾರ್ಯದರ್ಶಿಯಾಗಿದ್ದು, ಗುಣಭರವಸೆ ವೃತ್ತದ ಅಧೀಕ್ಷಕ ಎಂಜಿನಿಯರ್, ಮುಖ್ಯ ಎಂಜಿನಿಯರ್ ಕಚೇರಿಯ ವಿನ್ಯಾಸ ಶಾಖೆಯ ಸಹಾಯಕ ಕಾರ್ಯಪಾಲಕ ಎಂಜಿನಿಯರ್, ನಂ.1 ಉಪ ವಿಭಾಗದ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಸದಸ್ಯರಾಗಿದ್ದಾರೆ.

ಕೆಲವೆಡೆ ಮಳೆ

ಬೆಂಗಳೂರು: ನಗರದ ಕೆಲವು ಭಾಗಗಳಲ್ಲಿ ಗುರುವಾರ ಸಂಜೆಯಿಂದ ಮಧ್ಯರಾತ್ರಿಯವರೆಗೆ ಮಳೆಯಾಯಿತು.

ಸಿಂಗಸಂದ್ರದಲ್ಲಿ 1.8 ಸೆಂ.ಮೀ ಮಳೆಯಾಗಿದ್ದರೆ, ಎಚ್.ಗೊಲ್ಲಹಳ್ಳಿ, ವನ್ನಾರ್‌ಪೇಟೆ, ಕೋರಮಂಗಲದಲ್ಲಿ ತಲಾ ಒಂದು ಸೆಂ.ಮೀ ಮಳೆಯಾಗಿದೆ. ಹೆಮ್ಮಿಗೆಪುರ, ಅಂಜನಾಪುರ, ಗೊಟ್ಟಿಗೆರೆ, ವಸಂತಪುರ, ಬೊಮ್ಮನಹಳ್ಳಿ, ಎಚ್‌ಎಸ್‌ಆರ್ ಲೇಔಟ್, ಬಿಟಿಎಂ ಲೇಔಟ್, ಬೆಳ್ಳಂದೂರು, ವಿಜ್ಞಾನನಗರ, ಸಿ.ವಿ. ರಾಮನ್‌ನಗರ, ಬಾಣಸವಾಡಿ, ಕೊಡಿಗೆಹಳ್ಳಿ, ರಾಮಮೂರ್ತಿನಗರ, ಹೊರಮಾವು, ಲಗ್ಗೆರೆ, ವಿದ್ಯಾಪೀಠ, ಹೊಸಕೆರೆಹಳ

ಮುಯ್ಯಿ ತೀರಿಸಿಕೊಂಡ ಗಿಲ್ ಬಳಗ

ಟೂರ್ನಿಯಲ್ಲಿ ಮೊದಲ ಬಾರಿ ಆಲೌಟ್ ಆದ ಆರ್‌ಸಿಬಿ; ಟೈಟನ್ಸ್‌ಗೆ 4 ವಿಕೆಟ್ ಜಯ

ಅಹಮದಾಬಾದ್ (ಪಿಟಿಐ): ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಪ್ರಸಕ್ತ ಐಪಿಎಲ್‌ನಲ್ಲಿ ಮೊದಲ ಬಾರಿಗೆ ಎಲ್ಲ ವಿಕೆಟ್ ಕಳೆದುಕೊಂಡು ಸಾಧಾರಣ ಮೊತ್ತ ಗಳಿಸಿತು. ಇದರಿಂದಾಗಿ ಗುಜರಾತ್ ಟೈಟನ್ಸ್ ತಂಡವು ರಜತ್ ಪಾಟೀದಾರ್ ಬಳಗದ ಎದುರು 'ಮುಯ್ಯಿ' ತೀರಿಸಿಕೊಂಡಿತು.

ನರೇಂದ್ರ ಮೋದಿ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆದ ಐಪಿಎಲ್ ಪಂದ್ಯದಲ್ಲಿ ಟೈಟನ್ಸ್ ತಂಡ 4 ವಿಕೆಟ್‌ಗಳಿಂದ ಗೆದ್ದಿತು. ಹೋದ ವಾರ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆರ್‌ಸಿಬಿಯು ಗುಜರಾತ್ ತಂಡವನ್ನು ಸೋಲಿಸಿತ್ತು. ಶುಭಮನ್ ಗಿಲ್ ನಾಯಕತ್ವದ ಗುಜರಾತ್ ತಂಡದ ಬೌಲರ್‌ಗಳು ಈ ಗೆಲುವಿನಲ್ಲಿ ಪ್ರಮುಖ ಪಾತ್ರವಹಿಸಿದರು.

ಟಾಸ್ ಗೆದ್ದ ಆತಿಥೇಯ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಆರ್‌ಸಿಬಿ ತಂಡವು 19.2 ಓವರ್‌ಗಳಲ್ಲಿ 155 ರನ್‌ಗಳಿಗೆ ಎಲ್ಲ ವಿಕೆಟ್ ಕಳೆದುಕೊಂಡಿತು. ಅದಕ್ಕುತ್ತರವಾಗಿ ಗಿಲ್ ಬಳಗವು 15. 5 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 158 ರನ್ ಗಳಿಸಿತು. ಟೂರ್ನಿಯಲ್ಲಿ ಆರ್‌ಸಿಬಿಗೆ ಇದು ಮೂರನೇ ಸೋಲು.

ಕಗಿಸೊ-ವಿರಾಟ್ ಮುಖಾಮುಖಿ: ಈ ಪಂದ್ಯದಲ್ಲಿ ವಿರಾಟ್ ಕೊಹ್ಲಿ ಮತ್ತು ಗುಜರಾತ್ ವೇಗಿ ಕಗಿಸೊ ರಬಾಡ ಅವರ ಪೈಪೋಟಿಯು ಗಮನ ಸೆಳೆಯಿತು. ರಬಾಡ ಅವರ ಮೊದಲ ಓವರ್‌ನಲ್ಲಿ ಕೊಹ್ಲಿ ಭರ್ಜರಿ ಬೀಸಾಟವಾಡಿದರು. ಸತತ ಐದು ಬೌಂಡರಿಗಳನ್ನು ಬಾರಿಸಿದರು. ಅದೊಂದೇ ಓವರ್‌ನಲ್ಲಿ 21 ರನ್‌ಗಳು ದಾಖಲಾದವು. ಆದರೆ ನಾಯಕ ಶುಭಮನ್ ಗಿಲ್ ಅವರು ಇದರಿಂದ ವಿಚಲಿತರಾಗಲಿಲ್ಲ. ಇನಿಂಗ್ಸ್‌ನ ನಾಲ್ಕನೇ ಓವರ್ ಬೌಲಿಂಗ್ ಮಾಡಲು ಮತ್ತೆ ರಬಾಡ ಅವರಿಗೇ ಚೆಂಡು ಕೊಟ್ಟರು. ಇದು ಫಲಪ್ರದವಾಯಿತು. ಕೊಹ್ಲಿ (28; 13ಎ) ಮುನ್ನುಗ್ಗಿ ಹೊಡೆವ ಯತ್ನದಲ್ಲಿ ಎಸೆತದ ಪುಟಿತವನ್ನು ಅಂದಾಜು ಮಾಡಲಿಲ್ಲ. ಇದರಿಂದಾಗಿ ರಶೀದ್ ಖಾನ್ ಅವರಿಗೆ ಕ್ಯಾಚ್ ಆದರು.

ಇದಕ್ಕೂ ಮುನ್ನ ಮೂರನೇ ಓವರ್‌ನಲ್ಲಿ ಮೊಹಮ್ಮದ್ ಸಿರಾಜ್ ಅವರು ಜೇಕಬ್ ಬೆಥೆಲ್ ವಿಕೆಟ್ ಕಬಳಿಸಿದ್ದರು. ಕನ್ನಡಿಗ, ಎಡಗೈ ಬ್ಯಾಟರ್ ದೇವದತ್ತ ಪಡಿಕ್ಕಲ್ (40 ರನ್) ತಂಡಕ್ಕೆ ಮತ್ತೊಮ್ಮೆ ಆಸರೆಯಾದರು. ಬೌಲರ್‌ಗಳ ಪರಿಣಾಮಕಾರಿ ದಾಳಿಯನ್ನು ಆತ್ಮವಿಶ್ವಾಸದಿಂದ ಎದುರಿಸಿದರು. ಈ ಕಾರಣದಿಂದಾಗಿ ತಂಡವು 7 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 71 ರನ್ ಗಳಿಸಿತ್ತು. ಎಡಗೈ ವೇಗಿ ಅರ್ಷದ್ ಖಾನ್ (22ಕ್ಕೆ3) ಮತ್ತು ಸ್ಪಿನ್ನರ್ ರಶೀದ್ ಖಾನ್ (19ಕ್ಕೆ2) ಅವರು ಉತ್ತಮ ದಾಳಿ ನಡೆಸಿದರು. ರಶೀದ್ ಅವರು ದೇವದತ್ತ ಮತ್ತು ಟಿಮ್ ಡೇವಿಡ್ (9ರನ್) ಅವರ ವಿಕೆಟ್ ಗಳನ್ನು ಕಬಳಿಸಿದ್ದು ಆರ್‌ಸಿಬಿ ರನ್ ಗಳಿಕೆಯನ್ನು ತಗ್ಗಿಸಿತು.

ಇದರಿಂದಾಗಿ ಆರ್‌ಸಿಬಿ ತಂಡವು 10.3 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 96 ರನ್ ಗಳಿಸಿತು. ನಾಯಕ ರಜತ್ ಪಾಟೀದಾರ್ (19; 15ಎ), ಜಿತೇಶ್ ಶರ್ಮಾ (1; 3ಎ), ಟಿಮ್ ಡೇವಿಡ್ (9; 6ಎ) ಮತ್ತು ಕೃಣಾಲ್ ಪಾಂಡ್ಯ ಅವರ ಬ್ಯಾಟ್‌ಗಳಿಂದ ರನ್‌ಗಳು ಹರಿಯಲಿಲ್ಲ.

ಗುಜರಾತ್ ತಂಡದ ಆಲ್‌ರೌಂಡರ್ ಜೇಸನ್ ಹೋಲ್ಡರ್ (29ಕ್ಕೆ2) ಅವರೂ ಆರ್‌ಸಿಬಿಗೆ ಪೆಟ್ಟುಕೊಟ್ಟರು. ಅವರು ಮೂರು ಅಮೋಘ ಕ್ಯಾಚ್‌ಗಳನ್ನೂ ಹಿಡಿದರು. ಕೊನೆಯ ಹಂತದ ಓವರ್‌ಗಳಲ್ಲಿ ರೊಮಾರಿಯೊ ಶೆಫರ್ಡ್ ಮತ್ತು ಭುವನೇಶ್ವರ್ ಕುಮಾರ್ ರನ್‌ಗಳ ಕಾಣಿಕೆ ನೀಡಿದರು. ಆದರೆ ವೆಂಕಟೇಶ್ ಅಯ್ಯರ್ 15 ಎಸೆತಗಳಲ್ಲಿ ಕೇವಲ 12 ರನ್ ಗಳಿಸಿ ಅಚ್ಚರಿ ಮೂಡಿಸಿದರು.

ಗುರಿ ಬೆನ್ನಟ್ಟಿದ ಟೈಟನ್ಸ್‌ಗೆ ಗಿಲ್ (43; 18 ಎ, 4x3, 6x3) ಹಾಗೂ ಜೋಸ್ ಬಟ್ಲರ್ (39; 19 ಎ, 4x2, 6x4) ಅವರು ಆಸರೆಯಾದರು. ಒಂದು ಹಂತದಲ್ಲಿ ಆರ್‌ಸಿಬಿಯ ಭುವನೇಶ್ವರ್ ಕುಮಾರ್ ಅವರು 3 ವಿಕೆಟ್ ಗಳಿಸಿ ಗುಜರಾತ್ ತಂಡಕ್ಕೆ ಆತಂಕ ಮೂಡಿಸಿದ್ದರು. ಆದರೆ ಕೆಳಕ್ರಮಾಂಕದ ಬ್ಯಾಟರ್‌ಗಳು ತಮ್ಮ ಅಲ್ಪ ಕಾಣಿಕೆಗಳ ಮೂಲಕ ತಂಡವನ್ನು ಗೆಲುವಿನತ್ತ ಮುನ್ನಡೆಸಿದರು. ಇಂಪ್ಯಾಕ್ಟ್ ಪ್ಲೇಯರ್ ರಾಹುಲ್ ತೆವಾಟಿಯಾ 17 ಎಸೆತಗಳಲ್ಲಿ ಅಜೇಯ 27 ರನ್ ಗಳಿಸಿ, ತಂಡವನ್ನು ಗೆಲುವಿನ ದಡ ಸೇರಿಸಿದರು.

ಆರ್‌ಸಿಬಿ ತಂಡದ ವಿರಾಟ್ ಕೊಹ್ಲಿ ಅವರ ವಿಕೆಟ್ ಗಳಿಸಿದ ಗುಜರಾತ್ ಟೈಟನ್ಸ್ ವೇಗಿ ಕಗಿಸೊ ರಬಾಡ (ಮಧ್ಯ) ಅವರನ್ನು ಜೇಸನ್ ಹೋಲ್ಡರ್, ಆರ್ಷದ್ ಖಾನ್ ಹಾಗೂ ಜೋಸ್ ಬಟ್ಲರ್ ಅಭಿನಂದಿಸಿದರು ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ರಾಯಲ್ ಚಾಲೆಂಜರ್ಸ್ ಬೆಂಗಳೂರು: 155 (19.2 ಓವರುಗಳಲ್ಲಿ)

ಬೆಥೆಲ್ ಸಿ ರಶೀದ್ ಬಿ ಸಿರಾಜ್ 5 (5ಎ, 4x1)
ಕೊಹ್ಲಿ ಸಿ ರಶೀದ್ ಬಿ ರಬಾಡ 28 (13ಎ, 4x5, 6x1)
ಪಡಿಕ್ಕಲ್ ಬಿ ರಶೀದ್ 40 (24ಎ, 4x5, 6x2)
ರಜತ್ ಸಿ ಹೋಲ್ಡರ್ ಬಿ ಅರ್ಷದ್ 19 (15ಎ, 4x2, 6x1)
ಜಿತೇಶ್ ಸಿ ಬಟ್ಲರ್ ಬಿ ಹೋಲ್ಡರ್ 1 (3ಎ)
ಡೇವಿಡ್ ಸಿ ಹೋಲ್ಡರ್ ಬಿ ರಶೀದ್ 9 (6ಎ, 6x1)
ಕೃಣಾಲ್ ಸಿ ಹೋಲ್ಡರ್ ಬಿ ಅರ್ಷದ್ 4 (4ಎ, 4x1)
ಶೆಫರ್ಡ್ ಸಿ ಸುದರ್ಶನ್ ಬಿ ಹೋಲ್ಡರ್ 17 (15ಎ, 6x2)
ಅಯ್ಯರ್ ಸಿ ಸುದರ್ಶನ್ ಬಿ ಅರ್ಷದ್ 12 (15ಎ, 4x1)
ಭುವನೇಶ್ವರ್ ಕುಮಾರ್ ಔಟಾಗದೇ 15 (15ಎ, 4x2)
ಹೇಝಲ್‌ವುಡ್ ರನೌಟ್ (ಬಟ್ಲರ್/ ಶುಭಮನ್) 0 (1ಎ)
ಇತರೆ: 5 (ಲೆಗ್‌ಬೈ 3, ವೈಡ್ 2)
ವಿಕೆಟ್ ಪತನ: 1-34 (ಜೇಕಬ್ ಬೆಥೆಲ್, 2.4), 2-35 (ವಿರಾಟ್ ಕೊಹ್ಲಿ, 3.2), 3-79 (ರಜತ್ ಪಾಟೀದಾರ್, 7.4), 4-80 (ಜಿತೇಶ್ ಶರ್ಮಾ, 8.1), 5-91 (ಟಿಮ್ ಡೇವಿಡ್, 9.4), 6-96 (ಕೃಣಾಲ್ ಪಾಂಡ್ಯ, 10.3), 7-126 (ದೇವದತ್ತ ಪಡಿಕ್ಕಲ್, 13.6), 8-126 (ರೊಮಾರಿಯೊ ಶೆಫರ್ಡ್, 14.1), 9-155 (ವೆಂಕಟೇಶ್ ಅಯ್ಯರ್, 19.1), 10-155 (ಜೋಶ್ ಹೇಝಲ್‌ವುಡ್, 19.2)
ಬೌಲಿಂಗ್: ಮೊಹಮ್ಮದ್ ಸಿರಾಜ್ 4-0-38-1; ಕಗಿಸೊ ರಬಾಡ 4-0-44-1; ಜೇಸನ್ ಹೋಲ್ಡರ್ 4-0-29-2; ಅರ್ಷದ್ ಖಾನ್ 3.2-0-22-3; ರಶೀದ್ ಖಾನ್ 4-0-19-2.

ಗುಜರಾತ್ ಟೈಟನ್ಸ್: 6ಕ್ಕೆ158 (15.5 ಓವರುಗಳಲ್ಲಿ)

ಸಾಯಿ ಸಿ ಜಿತೇಶ್ ಬಿ ಭುವನೇಶ್ವರ್ 6 (5ಎ, 4x1)
ಗಿಲ್ ಸಿ ವಿರಾಟ್ ಬಿ ಭುವನೇಶ್ವರ್ 43 (18ಎ, 4x3, 6x3)
ಬಟ್ಲರ್ ಬಿ ಭುವನೇಶ್ವರ್ 39 (19ಎ, 4x2, 6x4)
ವಾಷಿಂಗ್ಟನ್ ಎಲ್‌ಬಿಡಬ್ಲ್ಯು ಬಿ ಶೆಫರ್ಡ್ 12 (12ಎ, 6x1)
ಶಾರುಕ್ ಸಿ ಹೇಝಲ್‌ವುಡ್ ಬಿ ಶೆಫರ್ಡ್ 8 (8ಎ, 4x1)
ರಾಹುಲ್ ತೆವಾಟಿಯಾ ಔಟಾಗದೇ 27 (17ಎ, 4x4)
ಜೇಸನ್ ಹೋಲ್ಡರ್ ಸಿ ಪಡಿಕ್ಕಲ್ ಬಿ ಸುಯಶ್ 12 (10ಎ, 6x1)
ರಶೀದ್ ಖಾನ್ ಔಟಾಗದೇ 7 (6ಎ, 4x1)
ಇತರೆ: 4 (ವೈಡ್ 4)
ವಿಕೆಟ್ ಪತನ: 1-42 (ಸಾಯಿ ಸುದರ್ಶನ್, 2.6), 2-57 (ಶುಭಮನ್ ಗಿಲ್, 4.6), 3-92 (ಜೋಸ್ ಬಟ್ಲರ್, 7.3), 4-109 (ಶಾರುಕ್ ಖಾನ್, 10.1), 5-111 (ವಾಷಿಂಗ್ಟನ್ ಸುಂದರ್, 10.3), 6-141 (ಜೇಸನ್ ಹೋಲ್ಡರ್, 13.5)
ಬೌಲಿಂಗ್: ಭುವನೇಶ್ವರ್ ಕುಮಾರ್ 4-0-28-3; ಜೋಶ್ ಹೇಝಲ್‌ವುಡ್ 4-0-56-0; ಸುಯಶ್ ಶರ್ಮಾ 3.5-0-44-1; ರೊಮಾರಿಯೊ ಶೆಫರ್ಡ್ 4-0-30-2
ಪಂದ್ಯದ ಆಟಗಾರ: ಜೇಸನ್ ಹೋಲ್ಡರ್

ಐಪಿಎಲ್ 2026: ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ಎಸ್‌ಆರ್‌ಆರ್
ಪಿಬಿಕೆಎಸ್	8	6	1	1	13	1.043
ಆರ್‌ಸಿಬಿ	9	6	3	0	12	1.420
ಎಸ್‌ಆರ್‌ಎಚ್	9	6	3	0	12	0.832
ಆರ್ ಆರ್	9	6	3	0	12	0.617
ಜಿ ಟಿ	9	5	4	0	10	-0.192
ಸಿಎಸ್‌ಕೆ	8	3	5	0	6	-0.121
ಡಿ ಸಿ	8	3	5	0	6	-1.060
ಕೆಕೆಆರ್	8	2	5	1	5	-0.751
ಎಂ ಐ	8	2	6	0	4	-0.784
ಎಲ್‌ಎಸ್‌ಜಿ	8	2	6	0	4	-1.106

ಆರೆಂಜ್ ಕ್ಯಾಪ್: ಅಭಿಷೇಕ್ ಶರ್ಮಾ, ಎಸ್‌ಆರ್‌ಎಚ್ (425 ರನ್)
ಪರ್ಪಲ್ ಕ್ಯಾಪ್: ಭುವನೇಶ್ವರ್ ಕುಮಾರ್, ಆರ್‌ಸಿಬಿ (17 ವಿಕೆಟ್)

ಕ್ಯಾಪಿಟಲ್ಸ್‌ಗೆ ಸ್ಟಾರ್ಕ್ ಬಲ; ವೈಭವ್, ರಾಹುಲ್ ಮೇಲೆ ಚಿತ್ತ

ರಾಯಲ್ಸ್‌ಗೆ ಡೆಲ್ಲಿ ಸವಾಲು ಇಂದು

ಜೈಪುರ: ಪಂಜಾಬ್ ಕಿಂಗ್ಸ್ ತಂಡಕ್ಕೆ ಮೊದಲ ಸೋಲಿನ ರುಚಿ ತೋರಿಸಿದ ಸಂತಸದಲ್ಲಿರುವ ರಾಜಸ್ಥಾನ ರಾಯಲ್ಸ್ ತಂಡವು ಶುಕ್ರವಾರ ಇಲ್ಲಿ ನಡೆಯಲಿರುವ ಐಪಿಎಲ್ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ಬಳಗವನ್ನು ಎದುರಿಸಲಿದೆ.

ನಾಲ್ಕನೇ ಸ್ಥಾನದಲ್ಲಿರುವ ರಾಜಸ್ಥಾನ ತಂಡವು ಸದ್ಯ ಅಂಕಪಟ್ಟಿಯಲ್ಲಿ ನಾಲ್ಕನೇ ಸ್ಥಾನದಲ್ಲಿದೆ. ವೈಭವ್ ಸೂರ್ಯವಂಶಿ ಮತ್ತು ಯಶಸ್ವಿ ಜೈಸ್ವಾಲ್ ಅವರ ಅಬ್ಬರದ ಆರಂಭದ ಬಲದ ಮೇಲೆ ದೊಡ್ಡ ಮೊತ್ತದ ಇನಿಂಗ್ಸ್ ಕಟ್ಟುತ್ತಿದೆ. ಪಂಜಾಬ್ ಎದುರಿನ ಪಂದ್ಯದಲ್ಲಿ ವೈಭವ್ ಐದು ಸಿಕ್ಸರ್ ಹೊಡೆದು ಮಿಂಚಿದ್ದರು. ಯಶಸ್ವಿ ಅರ್ಧಶತಕ ಗಳಿಸಿದ್ದರು. ಮಧ್ಯಮ ಕ್ರಮಾಂಕದಲ್ಲಿ ಡೊನೊವನ್ ಫೆರೀರಾ ಅಜೇಯ ಅರ್ಧಶತಕ ಗಳಿಸಿದ್ದರು. ಅದರಿಂದಾಗಿ ಕಠಿಣ ಗುರಿಯನ್ನು ಯಶಸ್ವಿಯಾಗಿ ಬೆನ್ನಟ್ಟಿ ಗೆದ್ದಿತ್ತು. ಸದ್ಯ 'ಇ ಸಿಗರೇಟ್' ವಿವಾದದಲ್ಲಿ ಸಿಲುಕಿರುವ ನಾಯಕ ರಿಯಾನ್ ಪರಾಗ್ ಅವರು ಇದುವರೆಗೂ ಬ್ಯಾಟಿಂಗ್‌ನಲ್ಲಿ ಹೇಳಿಕೊಳ್ಳುವಂತಹ ಪ್ರದರ್ಶನ ನೀಡಿಲ್ಲ.

ಬೌಲಿಂಗ್ ವಿಭಾಗದಲ್ಲಿ ವೇಗಿ ಜೋಫ್ರಾ ಆರ್ಚರ್, ನಾಂದ್ರೆ ಬರ್ಗರ್ ಮತ್ತು ಕನ್ನಡಿಗ ಯಶರಾಜ್ ಪುಂಜಾ ಅವರು ವಿಕೆಟ್ ಗಳಿಸಿದ್ದರು. ಆದರೆ ಅನುಭವಿ ಸ್ಪಿನ್ನರ್ ರವೀಂದ್ರ ಜಡೇಜ ವಿಕೆಟ್ ಪಡೆಯದಿದ್ದರೂ ಉಳಿದೆಲ್ಲ ಬೌಲರ್‌ಗಳಿಗಿಂತ ಕಡಿಮೆ ರನ್ ಕೊಟ್ಟಿದ್ದರು. ಈ ಬೌಲಿಂಗ್ ಪಡೆಯ ಮುಂದೆ ಡೆಲ್ಲಿ ತಂಡದ ಬ್ಯಾಟಿಂಗ್ ಪಡೆಯನ್ನು ಕಟ್ಟಿಹಾಕುವ ಸವಾಲು ಇದೆ.

ಅಕ್ಷರ್ ಪಟೇಲ್ ನಾಯಕತ್ವದ ಡೆಲ್ಲಿ ತಂಡವು ತನ್ನ ಕಳೆದೆರಡು ಪಂದ್ಯಗಳಲ್ಲಿ ಸೋತಿದೆ. ಆದರೆ ಪಂಜಾಬ್ ಎದುರು 264 ರನ್ ಗುರಿಯೊಡ್ಡಿಯೂ ಸೋತಿದ್ದ ತಂಡವು, ನಂತರ ಆರ್‌ಸಿಬಿ ಎದುರು ಕೇವಲ 75 ರನ್‌ಗಳಿಗೆ ಕುಸಿದಿತ್ತು. ಕೆ.ಎಲ್. ರಾಹುಲ್ ಪಂಜಾಬ್ ಎದುರು ಶತಕ ಹೊಡೆದಿದ್ದರು. ಆದರೆ ಅವರೂ ಸೇರಿದಂತೆ ಎಲ್ಲ ಬ್ಯಾಟರ್‌ಗಳೂ ಆರ್‌ಸಿಬಿ ಎದುರು ವಿಫಲರಾಗಿದ್ದರು.

ಡೆಲ್ಲಿ ತಂಡದ ಬೌಲಿಂಗ್ ಪಡೆಯಲ್ಲಿ ಲುಂಗಿ ಎನ್‌ಗಿಡಿ ಆಡುವುದು ಇನ್ನೂ ಖಚಿತವಾಗಿಲ್ಲ. ಆದರೆ ಅನುಭವಿ ವೇಗಿ, ಆಸ್ಟ್ರೇಲಿಯಾದ ಮಿಚೆಲ್ ಸ್ಟಾರ್ಕ್ ಅವರು ತಂಡಕ್ಕೆ ಮರಳಿದ್ದಾರೆ. ಕಳೆದ ಪಂದ್ಯದಲ್ಲಿ ಕೈಲ್ ಜೇಮಿಸನ್ ಉತ್ತಮವಾಗಿ ಬೌಲಿಂಗ್ ಮಾಡಿದ್ದರು. ಆದರೆ, ದುಷ್ಮಂತ ಚಮೀರಾ, ನಾಯಕ ಅಕ್ಷರ್ ಮತ್ತು ಟಿ. ನಟರಾಜನ್ ಅವರು ತಮ್ಮ ನೈಜ ಸಾಮರ್ಥ್ಯವನ್ನು ಪಣಕ್ಕೊಡ್ಡುವ ಅಗತ್ಯ ಈಗ ಇದೆ. ಪ್ಲೇ ಆಫ್ ಪ್ರವೇಶದ ಅವಕಾಶ ಜೀವಂತವಾಗಿ ಇರಬೇಕಾದರೆ ಈ ಪಂದ್ಯವೂ ಸೇರಿದಂತೆ ಮುಂದಿನ ಎಲ್ಲದರಲ್ಲೂ ಜಯಿಸಿದರೆ ಅನುಕೂಲ.

ವೈಭವ್ ಸೂರ್ಯವಂಶಿ ಅಭ್ಯಾಸ ಪಿಟಿಐ ಚಿತ್ರ

ಮಿಚೆಲ್ ಸ್ಟಾರ್ಕ್

ಬಲಾಬಲ	ಒಟ್ಟು ಪಂದ್ಯ 30
ರಾಯಲ್ಸ್ ಗೆಲುವು	15
ಕ್ಯಾಪಿಟಲ್ಸ್ ಜಯ	15

ಇಂದಿನ ಪಂದ್ಯ

ರಾಜಸ್ಥಾನ ರಾಯಲ್ಸ್ vs ಡೆಲ್ಲಿ ಕ್ಯಾಪಿಟಲ್ಸ್
ತಾಣ: ಜೈಪುರ
ಆರಂಭ: ರಾತ್ರಿ 7.30
ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್ ಆ್ಯಪ್

ಪರಾಗ್ 'ಧೂಮಲೀಲೆ'ಗೆ ಬಿತ್ತು ದಂಡ

ನವದೆಹಲಿ (ಪಿಟಿಐ): ರಾಜಸ್ಥಾನ ರಾಯಲ್ಸ್ ತಂಡದ ನಾಯಕ ರಿಯಾನ್ ಪರಾಗ್ ಅವರಿಗೆ ಪಂದ್ಯದ ಸಂಭಾವನೆಯ ಶೇ 25ರಷ್ಟು ಮೊತ್ತವನ್ನು ದಂಡ ವಿಧಿಸಲಾಗಿದೆ.

ಈಚೆಗೆ ಮುಲ್ಲನಪುರದಲ್ಲಿ ನಡೆದಿದ್ದ ಪಂಜಾಬ್ ಕಿಂಗ್ಸ್ ಎದುರಿನ ಪಂದ್ಯದ ಸಂದರ್ಭದಲ್ಲಿ ರಿಯಾನ್ ಅವರು ಡ್ರೆಸಿಂಗ್ ಕೋಣೆಯಲ್ಲಿ ಇ ಸಿಗರೇಟ್ ಬಳಸಿ ಧೂಮಪಾನ ಮಾಡುತ್ತಿದ್ದರು. ಇದರ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತ್ತು. ಅವರ ನಡವಳಿಕೆಯು ಕ್ರಿಕೆಟ್‌ಗೆ 'ಅಪಖ್ಯಾತಿ' ಉಂಟು ಮಾಡಿದೆ ಎಂದು ದಂಡ ವಿಧಿಸಲಾಗಿದೆ.

ಆ ಪಂದ್ಯದ ಫೀಲ್ಡ್ ಅಂಪೈರ್‌ಗಳಾದ ನಿತಿನ್ ಮೆನನ್ ಮತ್ತು ತನ್ಮಯ್ ಶ್ರೀವಾಸ್ತವ ಅವರು ರಿಯಾನ್ ನಡವಳಿಕೆ ಕುರಿತು ಪಂದ್ಯದ ತಕ್ಷಣ ವರದಿ ಮಾಡಿರಲಿಲ್ಲ. ಆದರೆ ವಿಡಿಯೊ ದೃಶ್ಯಗಳನ್ನು ನೋಡಿದ ನಂತರ ಅಂಪೈರ್‌ಗಳು ರೆಫರಿ ಅಮಿತ್ ಶರ್ಮಾ ಅವರಿಗೆ ವರದಿ ಸಲ್ಲಿಸಿದ್ದಾರೆ. ವರದಿ ಮತ್ತು ವಿಡಿಯೊಗಳನ್ನು ಪರಿಶೀಲಿಸಿದ ನಂತರ ಶರ್ಮಾ ಅವರು ಐಪಿಎಲ್ ನಿಯಮ ಲೆವೆಲ್ 1 ಅಪರಾಧ ಎಂದು ಪರಿಗಣಿಸಿದ್ದಾರೆ. ಪಂದ್ಯ ವಿಧಿಸಬಹುದಾಗಿದೆ.

ಶುಲ್ಕದ ಶೇ 25ರಷ್ಟು ಮೊತ್ತದ ದಂಡ ವಿಧಿಸಲು ಪರಾಗ್ ಅವರಿಗೆ ತಿಳಿಸಲಾಗಿದೆ. ಒಂದು ಡಿಮೆರಿಟ್ ಪಾಯಿಂಟ್ ಕೂಡ ವಿಧಿಸಲಾಗಿದೆ.

'ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಬಿಸಿಸಿಐ, ರಾಜಸ್ಥಾನ ರಾಯಲ್ಸ್ ತಂಡದ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲು ಚಿಂತನೆ ನಡೆಸಿದೆ. ತಂಡದ ಅಧಿಕಾರಿಗಳು ಮತ್ತು ಆಟಗಾರರು ಐಪಿಎಲ್ ಘನತೆಯು ಮುಕ್ಕಾಗದಂತೆ ನೋಡಿಕೊಳ್ಳಬೇಕು' ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

'ಪ್ರಕಟಣೆಯಲ್ಲಿ ತಿಳಿಸಿದಂತೆ ತಂಡದ ಮೇಲೆ ಏನು ಕ್ರಮ ಕೈಗೊಳ್ಳಬೇಕು ಎಂಬುದರ ಬಗ್ಗೆ ಪರಿಶೀಲನೆ ನಡೆಯುತ್ತಿದೆ. ಆದರೆ ಇಲ್ಲಿಯವರೆಗೂ ಯಾವುದೇ ನಿರ್ಣಯ ಕೈಗೊಂಡಿಲ್ಲ' ಎಂದು ಬಿಸಿಸಿಐ ಕಾರ್ಯದರ್ಶಿ ದೇವಜೀತ್ ಸೈಕಿಯಾ ಪಿಟಿಐಗೆ ತಿಳಿಸಿದ್ದಾರೆ.

2019ರಲ್ಲಿಯೇ ಭಾರತ ಸರ್ಕಾರವು ಇ-ಸಿಗರೇಟ್ ಉತ್ಪಾದನೆ, ಮಾರಾಟ ಮತ್ತು ಹಂಚಿಕೆಯನ್ನು ನಿಷೇಧಿಸಿದೆ. ಇ-ಸಿಗರೇಟ್ ಬಳಕೆ ಕಾನೂನುಬಾಹಿರವಾಗಿದೆ. ಆರೋಪಿಗೆ ಒಂದು ವರ್ಷ ಜೈಲು ಶಿಕ್ಷೆ ಅಥವಾ ಒಂದು ಲಕ್ಷ ರೂಪಾಯಿ ದಂಡ ವಿಧಿಸಬಹುದಾಗಿದೆ.

ಭೂಮಾಲೀಕರಿಗೆ ₹8.8 ಕೋಟಿ ಪಾವತಿಗೆ ಸುಪ್ರೀಂ ಕೋರ್ಟ್ ನಿರ್ದೇಶನ

ನೈಸ್: ಹೈಕೋರ್ಟ್ ಆದೇಶ ರದ್ದು

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರು-ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಯೋಜನೆಗಾಗಿ (ಬಿಎಂಐಸಿಪಿ) ನಂದಿ ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಎಂಟರ್‌ಪ್ರೈಸ್ ಲಿಮಿಟೆಡ್ (ನೈಸ್) ಪಾವತಿಸಬೇಕಾದ ಭೂಪರಿಹಾರವನ್ನು ಪ್ರತಿ ಚದರ ಅಡಿಗೆ ₹1,000ದಿಂದ ₹500ಕ್ಕೆ ಇಳಿಸಿದ್ದ ಕರ್ನಾಟಕ ಹೈಕೋರ್ಟ್‌ನ 2012ರ ತೀರ್ಪನ್ನು ಸುಪ್ರೀಂ ಕೋರ್ಟ್ ಗುರುವಾರ ರದ್ದುಗೊಳಿಸಿದೆ.

ಬೆಂಗಳೂರಿನ ಹೆಚ್ಚುವರಿ ಸಿಟಿ ಸಿವಿಲ್ ನ್ಯಾಯಾಧೀಶರು 2012ರಲ್ಲಿ ನೀಡಿದ್ದ ಆದೇಶವನ್ನು ಮಾರ್ಪಡಿಸಿದ್ದ ಹೈಕೋರ್ಟ್‌ನ ತೀರ್ಪಿನ ವಿರುದ್ಧ ಬಿ.ಗುರಪ್ಪ ನಾಯ್ಡು ಮತ್ತು ಸುನೀತಾ ಸಲ್ಲಿಸಿದ್ದ ಮೇಲ್ಮನವಿಯನ್ನು ನ್ಯಾಯಮೂರ್ತಿಗಳಾದ ಅರವಿಂದ್ ಕುಮಾರ್ ಮತ್ತು ಎನ್.ವಿ. ಅಂಜಾರಿಯಾ ಅವರ ಪೀಠವು ಪುರಸ್ಕರಿಸಿತು.

ನೈಸ್ ರಸ್ತೆ

ಬೆಂಗಳೂರು ದಕ್ಷಿಣ ತಾಲ್ಲೂಕಿನ ಕೆಂಗೇರಿ ಗ್ರಾಮದ ಒಟ್ಟು 3 ಎಕರೆ 6 ಗು

'ಮುಷ್ಕರ ಹೂಡಿದರೆ ನೌಕರರೇ ಹೊಣೆ'

ಅವ್ಯವಸ್ಥೆಗೆ ಬಿಜೆಪಿ ಸರ್ಕಾರವೇ ಕಾರಣ; ರಾಮಲಿಂಗಾರೆಡ್ಡಿ ಟೀಕೆ

ಪ್ರಜಾವಾಣಿ ವಾರ್ತೆ

ರಾಮಲಿಂಗಾರೆಡ್ಡಿ

ಬೆಂಗಳೂರು: 'ಸದ್ಯವೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜತೆಗೆ ಚರ್ಚಿಸಿ ಎಷ್ಟು ಶೇಕಡ ವೇತನ ಹೆಚ್ಚಳ ಮಾಡಲಾಗುತ್ತದೆ ಎಂದು ತಿಳಿಸಿದ ನಂತರವೂ ಸಾರಿಗೆ ನೌಕರರು ಮುಷ್ಕರ ಮಾಡಿದರೆ ಅದಕ್ಕೆ ಅವರೇ ಹೊಣೆ' ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದ್ದಾರೆ.

'2026ರ ಮಾರ್ಚ್ ಅಂತ್ಯಕ್ಕೆ ನಾಲ್ಕು ಸಾರಿಗೆ ನಿಗಮಗಳ ಬಾಕಿ ಪ್ರಮಾಣ ₹7,130.80 ಕೋಟಿಯಿದ್ದು, ಇದರಲ್ಲಿ ನೌಕರರ ಭವಿಷ್ಯ ನಿಧಿ ₹2,298.20 ಕೋಟಿ, ಇಂಧನ ಪಾವತಿ ಬಾಕಿ ₹822.26 ಕೋಟಿ ಸೇರಿದೆ. ಕಾರ್ಮಿಕ ಸಂಘಟನೆಗಳ ಬೇಡಿಕೆಯಂತೆ ಶೇ 25 ವೇತನ ಪರಿಷ್ಕರಣೆ ಮಾಡಿದಲ್ಲಿ, ಪ್ರತಿ ತಿಂಗಳು ನಾಲ್ಕು ಸಾರಿಗೆ ಸಂಸ್ಥೆಗಳಿಗೆ ₹131.52 ಕೋಟಿ (ವಾರ್ಷಿಕ ₹1,578.18 ಕೋಟಿ) ಭರಿಸಬೇಕಾಗುತ್ತದೆ' ಎಂದು ತಿಳಿಸಿದ್ದಾರೆ.

'ಹಿಂದಿನ ಬಿಜೆಪಿ ಸರ್ಕಾರದ ಆಡಳಿತ ಅವಧಿಯ ಬಾಕಿ ಪಾವತಿಗೆ ಕಳೆದ ವರ್ಷ ಬ್ಯಾಂಕ್‌ನಿಂದ ಸಾರಿಗೆ ಸಂಸ್ಥೆಗಳು ₹2,000 ಕೋಟಿ ಸಾಲ ಪಡೆದಿದ್ದು, ಸರ್ಕಾರವೇ ಅಸಲು, ಬಡ್ಡಿ ಪಾವತಿಸುತ್ತಿದೆ. ಪ್ರತಿ ವರ್ಷ ನಾಲ್ಕು ಸಾರಿಗೆ ಸಂಸ್ಥೆಗಳು ಗಳಿಸುವ ಆದಾಯದಲ್ಲಿ ಶೇ 49.15 ಸಿಬ್ಬಂದಿ ವೆಚ್ಚ (₹6,759.68 ಕೋಟಿ) ಶೇ 34.49 ಡೀಸೆಲ್ ವೆಚ್ಚ (₹4,744.41 ಕೋಟಿ) ವ್ಯಯ ಮಾಡುತ್ತಿವೆ ಎಂದು ವಿವರಿಸಿದ್ದಾರೆ.

'2023ರ ಮಾರ್ಚ್ ತಿಂಗಳಲ್ಲಿ ಬಿಜೆಪಿ ಸರ್ಕಾರ ಇದ್ದಾಗ ಸಾರಿಗೆ ಸಂಸ್ಥೆಗಳ ನೌಕರರ ವೇತನ ಪರಿಷ್ಕರಣೆ ಮಾಡಿ, 38 ತಿಂಗಳ ಹಿಂಬಾಕಿ ವೇತನ ಪಾವತಿ ಬಾಕಿಯಿಟ್ಟು, ಬಜೆಟ್‌ನಲ್ಲಿ ಯಾವುದೇ ಅನುದಾನವನ್ನು ಮೀಸಲಿಡದೆ ತಪ್ಪಾದ ಸರ್ಕಾರಿ ಆದೇಶ ಹೊರಡಿಸಿರುವುದೇ ಈ ಎಲ್ಲಾ ತೊಡಕುಗಳಿಗೆ ಮೂಲ ಕಾರಣವಾಗಿದೆ' ಎಂದು ಆರೋಪಿಸಿದ್ದಾರೆ.

'15 ದಿನ ಮುಷ್ಕರ: ಅಶೋಕಗೆ ಕೀರ್ತಿ ಸಲ್ಲಬೇಕು'

'ಸಾರಿಗೆ ಸಂಸ್ಥೆಗಳ ಇತಿಹಾಸದಲ್ಲಿ ಮೊದಲ ಬಾರಿ 15 ದಿನ ಮುಷ್ಕರ ಮಾಡಿಸಿದ ಕೀರ್ತಿ ಅಂದಿನ ಸಾರಿಗೆ ಸಚಿವ ಆರ್. ಅಶೋಕಗೆ ಸಲ್ಲಬೇಕು. ಮುಷ್ಕರದ ಹೆಸರಿನಲ್ಲಿ ಸುಮಾರು 3500 ನೌಕರರನ್ನು ಕೆಲಸದಿಂದ ವಜಾ, ಅಮಾನತು ಮಾಡಿದ್ದೂ ಅಲ್ಲದೇ ಎಫ್‌ಐಆರ್ ಹಾಕಿಸಿದ್ದರಿಂದ ನ್ಯಾಯಾಲಯಕ್ಕೆ ಅಲೆಯುತ್ತಿದ್ದಾರೆ. ಈಗ ಸಾರಿಗೆ ನೌಕರರ ಬಗ್ಗೆ ಅನುಕಂಪದ ಮಾತನ್ನು ಆಡಲು ಅವರಿಗೆ ಯಾವ ನೈತಿಕತೆ ಇದೆ' ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಟೀಕಿಸಿದ್ದಾರೆ.

'ಮುಖ್ಯಮಂತ್ರಿ ಅನುಮತಿ ಇಲ್ಲದೇ ವೇತನ ಹೆಚ್ಚಳ ಘೋಷಣೆ ಮಾಡಲು ಸಚಿವರೊಬ್ಬರಿಗೆ ಸಾಧ್ಯವೇ ಎನ್ನುವುದು ಉಪಮುಖ್ಯಮಂತ್ರಿ, ಸಾರಿಗೆ ಸಚಿವರಾಗಿ ಕೆಲಸ ಮಾಡಿರುವ ಅಶೋಕ ಅವರಿಗೆ ತಿಳಿದಿಲ್ಲವೇ. ಬಿಜೆಪಿ ಆಡಳಿತದ ಅವಧಿಯಲ್ಲಿ ಸಾರಿಗೆ ಸಂಸ್ಥೆಗಳು ಉತ್ತುಂಗದಲ್ಲಿದ್ದವು ಎನ್ನುವ ಭ್ರಮೆಯಿಂದ ಅವರು ಹೊರ ಬರಬೇಕು' ಎಂದಿದ್ದಾರೆ.

ಐಸಿಎಸ್‌ಇ ಶೇ 99.97, ಐಎಸ್‌ಸಿ 99.96 ಫಲಿತಾಂಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐಸಿಎಸ್‌ಇ 10ನೇ ತರಗತಿ, ಐಎಸ್‌ಸಿ 12ನೇ ತರಗತಿ ಪರೀಕ್ಷೆಗಳಲ್ಲಿ ಕರ್ನಾಟಕದ ವಿದ್ಯಾರ್ಥಿಗಳು ಕ್ರಮವಾಗಿ ಶೇ 99.77 ಹಾಗೂ ಶೇ 99.96 ಫಲಿತಾಂಶ ಪಡೆದಿದ್ದಾರೆ.



ಭಾರತೀಯ ಶಾಲಾ ಪ್ರಮಾಣಪತ್ರ ಪರೀಕ್ಷಾ ಮಂಡಳಿ (ಸಿಐಎಸ್‌ಸಿಇ) ಗುರುವಾರ ಫಲಿತಾಂಶ ಪ್ರಕಟಿಸಿದೆ. ಐಸಿಎಸ್‌ಇ ಪರೀಕ್ಷೆಗೆ ಹಾಜರಾದ 31,018 ವಿದ್ಯಾರ್ಥಿಗಳಲ್ಲಿ 30,948 ಉತ್ತೀರ್ಣರಾಗಿದ್ದಾರೆ. ಅವರಲ್ಲಿ 15,438 (ಶೇ 99.67) ಬಾಲಕರು ಹಾಗೂ 15,510 (ಶೇ99.88) ಬಾಲಕಿಯರು. ಐಎಸ್‌ಸಿ ಪರೀಕ್ಷೆ ಬರೆದಿದ್ದ 2,673 ವಿದ್ಯಾರ್ಥಿಗಳಲ್ಲಿ 2,672 ಉತ್ತೀರ್ಣರಾಗಿದ್ದಾರೆ. ಅವರಲ್ಲಿ 1,283 (ಶೇ 100) ಬಾಲಕರು ಹಾಗೂ 1,389 (ಶೇ 99.93) ಬಾಲಕಿಯರು.

ಬೆಂಗಳೂರಿನ ಕಾಡುಗೋಡಿ ವಿಬ್‌ಗಯಾರ್ ಶಾಲೆಯ ವಿದ್ಯಾರ್ಥಿನಿ ಶಾಗವಿ ಭಗವಾನ್ ಐಸಿಎಸ್‌ಇ ಪರೀಕ್ಷೆಯಲ್ಲಿ ಶೇ99.80 ಅಂಕ ಪಡೆದು ರಾಜ್ಯಕ್ಕೆ ಮೊದಲಿಗರಾಗಿದ್ದಾರೆ. ಗ್ರೀನ್‌ವುಡ್ ಹೈ ಇಂಟರ್‌ನ್ಯಾಷನಲ್ ಶಾಲೆಯ ಕಾಶ್ವಿ ಪ್ರೋಗ್ಲಾ ಶೇ 99.40 ಅಂಕ ಗಳಿಸಿದ್ದಾರೆ.

'ನಿರಂತರ ಅಧ್ಯಯನ, ವಿಷಯಗಳ ಸ್ಪಷ್ಟ ಅರಿವು ಮತ್ತು ಸಮತೋಲನ ಜೀವನಶೈಲಿ ಸಾಧನೆಗೆ ಕಾರಣ' ಎಂದು ಪ್ರತಿಕ್ರಿಯಿಸಿರುವ ಶಾಗವಿ, ಖಗೋಳ ಭೌತಶಾಸ್ತ್ರ ಮತ್ತು ಅಂತರಿಕ್ಷ ವಿಜ್ಞಾನದಲ್ಲಿ ಭವಿಷ್ಯ ಕಂಡುಕೊಳ್ಳುವ ಗುರಿ ಹೊಂದಿದ್ದಾರೆ.

ಐಎಸ್‌ಸಿ ವಿಜ್ಞಾನ ವಿಭಾಗದಲ್ಲಿ ಕೆಂಗೇರಿ ಉಪನಗರದ ಬೆಥೆನ್ನಾ ಇಂಟರ್‌ನ್ಯಾಷನಲ್ ಶಾಲೆಯ ತನಿಷ್ಕಾ ಬಿ. ಮಾಜ ಶೇ 99.6 ಅಂಕ ಪಡೆದು ಮುಂಚೂಣಿಯಲ್ಲಿ ಇದ್ದಾರೆ. ಗ್ರೀನ್‌ವುಡ್ ಹೈ ಶಾಲೆಯ ತನಿಷ್ಕಾ ಕಿಲಾರು ವಿಜ್ಞಾನ ವಿಭಾಗದಲ್ಲಿ ಶೇ 99.25 ಅಂಕ ಪಡೆದಿದ್ದಾರೆ.

ರಾಜ್ಯದಲ್ಲಿ ಒಟ್ಟು 454 ಶಾಲೆಗಳ ವಿದ್ಯಾರ್ಥಿಗಳು ಐಸಿಎಸ್‌ಇ ಮತ್ತು 67 ಶಾಲೆಗಳ ವಿದ್ಯಾರ್ಥಿಗಳು ಐಎಸ್‌ಸಿ ಪರೀಕ್ಷೆ ತೆಗೆದುಕೊಂಡಿದ್ದರು.

ಮಣಿಪುರ: ಎಸ್‌ಡಿಪಿಒ ಹತ್ಯೆ ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ಗುವಾಹಟಿ: ಮಣಿಪುರದ ಗಡಿ ಪಟ್ಟಣವಾದ ಮೊರೆಹ್‌ನಲ್ಲಿ 2023ರ ಗಲಭೆ ಸಂದರ್ಭದಲ್ಲಿ ಉಪ ವಿಭಾಗೀಯ ಪೊಲೀಸ್ ಅಧಿಕಾರಿ (ಎಸ್‌ಡಿಪಿಒ) ಚಿಂಗ್ಥಮ್ ಆನಂದಕುಮಾರ್ ಸಿಂಗ್ ಅವರನ್ನು ಹತ್ಯೆ ಮಾಡಿದ ಪ್ರಮುಖ ಆರೋಪಿಯನ್ನು ಬಂಧಿಸಲಾಗಿದೆ ಎಂದು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಗುರುವಾರ ಹೇಳಿದೆ.

ಆರೋಪಿಯು ಮೊರೆಹ್ ನಿವಾಸಿ, ಕುಕಿ ಸಮುದಾಯದ ಒಟ್ಟೊಥಾಂಗ್ ಬೈತೆ ಅಲಿಯಾಸ್ ಒತಾಂಗ್ ಬೈತೆ ಎಂದು ಎನ್‌ಐಎ ಪ್ರಕಟಣೆ ತಿಳಿಸಿದೆ. ಮೈತೇಯಿ ಮತ್ತು ಕುಕಿ ಬುಡಕಟ್ಟು ಸಮುದಾಯಗಳ ಮಧ್ಯದ ಸಂಘರ್ಷದಲ್ಲಿ, ಬಂಡುಕೋರರು ನಡೆಸಿದ ದಾಳಿಯಲ್ಲಿ ಎಸ್‌ಡಿಪಿಒ ಮೃತಪಟ್ಟಿದ್ದರು.

ಬಿರೇನ್ ಆಡಿಯೊ ತುಣುಕು ಪರೀಕ್ಷಿಸಲು ಸೂಚನೆ

ನವದೆಹಲಿ (ಪಿಟಿಐ): ಮಣಿಪುರದಲ್ಲಿ ಸಂಭವಿಸಿದ ಸಂಘರ್ಷಕ್ಕೆ ತಳುಕುಹಾಕಿಕೊಂಡ, ಮಾಜಿ ಮುಖ್ಯಮಂತ್ರಿ ಎನ್. ಬಿರೇನ್ ಸಿಂಗ್ ಅವರದ್ದೆನ್ನಲಾದ ಆಡಿಯೊ ತುಣುಕುಗಳನ್ನು ಪರೀಕ್ಷಿಸಲು ಗುಜರಾತ್‌ನ ರಾಷ್ಟ್ರೀಯ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ (ಎನ್‌ಎಫ್‌ಎಸ್‌ಯು) ಕಳುಹಿಸಿಕೊಡಬೇಕು ಎಂದು ಸುಪ್ರೀಂ ಕೋರ್ಟ್ ಗುರುವಾರ ನಿರ್ದೇಶಿಸಿದೆ.

ನ್ಯಾಯಮೂರ್ತಿ ಸಂಜಯ್ ಕುಮಾರ್ ಹಾಗೂ ಕೆ. ವಿನೋದ್ ಚಂದನ್ ಅವರನ್ನು ಒಳಗೊಂಡ ಪೀಠವು, ಕುಕಿ ಮಾನವ ಹಕ್ಕುಗಳ ಟ್ರಸ್ಟ್‌ನ ಪರವಾಗಿ ವಾದ ಮಾಡುತ್ತಿರುವ ವಕೀಲರಾದ ಪ್ರಶಾಂತ್ ಭೂಷಣ್ ಅವರಿಗೆ ಈ ಕುರಿತು ನಿರ್ದೇಶನ ನೀಡಿದೆ. ಎನ್‌ಎಫ್‌ಎಸ್‌ಯುಗೂ ಆಡಿಯೊ ತುಣುಕುಗಳನ್ನು ಪರೀಕ್ಷಿಸುವಂತೆ ಸೂಚನೆ ನೀಡಿದೆ.

ರಕ್ಷಣಾ ಸಚಿವ ರಾಜನಾಥ ಸಿಂಗ್ ಮತ್ತು ಇಟಲಿಯ ರಕ್ಷಣಾ ಸಚಿವ ಗೈಡೊ ಕ್ರೊಸೆಟ್ಟೊ ಗುರುವಾರ ಕೈ ಕುಲುಕಿದರು — ಪಿಟಿಐ ಚಿತ್ರ

ರಕ್ಷಣಾ ಸಹಕಾರ ವೃದ್ಧಿಗೆ ಭಾರತ–ಇಟಲಿ ನಿರ್ಧಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ಮಿಲಿಟರಿ ಹಾರ್ಡ್‌ವೇರ್ ಮತ್ತು ಭಾರತದ ಕರಾವಳಿ ರಕ್ಷಣಾ ಪಡೆಗೆ ಅಗತ್ಯವಿರುವ ತಂತ್ರಜ್ಞಾನದ ಜಂಟಿ ಅಭಿವೃದ್ಧಿಗಾಗಿ ಚೌಕಟ್ಟು ರೂಪಿಸಲು ಭಾರತ ಮತ್ತು ಇಟಲಿ ಗುರುವಾರ ನಡೆದ ದ್ವಿಪಕ್ಷೀಯ ಮಾತುಕತೆಯಲ್ಲಿ ನಿರ್ಧರಿಸಿವೆ.

ಭಾರತದ ರಕ್ಷಣಾ ಸಚಿವ ರಾಜನಾಥ ಸಿಂಗ್ ಮತ್ತು ಇಟಲಿಯ ರಕ್ಷಣಾ ಸಚಿವ ಗೈಡೊ ಕ್ರೊಸೆಟ್ಟೊ ಅವರು, ಸಭೆಯ ಬಳಿಕ ಉಭಯ ದೇಶಗಳ ಶಸಸ್ತ್ರ ಪಡೆಗಳಿಗೆ ಅಗತ್ಯವಿರುವ ರಕ್ಷಣಾ ತಂತ್ರಜ್ಞಾನದ ಯೋಜನೆ 2026-27 ಅನಾವರಣಗೊಳಿಸಿದರು.

'ಪಶ್ಚಿಮ ಏಷ್ಯಾ ಸಂಘರ್ಷವೂ ಸೇರಿದಂತೆ ಪ್ರಾದೇಶಿಕ ಮತ್ತು ಅಂತರರಾಷ್ಟ್ರೀಯ ಮಟ್ಟದ ಹಲವು ಸಮಸ್ಯೆಗಳ ಬಗ್ಗೆ ನಾವು ಚರ್ಚೆ ನಡೆಸಿದ್ದೇವೆ. ಆತ್ಮನಿರ್ಭರ ಭಾರತ ಮತ್ತು ಇಟಲಿಯ ರಕ್ಷಣಾ ಸಹಕಾರ ಯೋಜನೆಯಡಿ ಎರಡೂ ದೇಶಗಳಿಗೆ ಸಹಕಾರಿಯಾಗಬಲ್ಲ ಮಿಲಿಟರಿ ಸಹಕಾರ ಬಗ್ಗೆ, ಇಂಡೊ–ಪೆಸಿಫಿಕ್ ವಲಯದಲ್ಲಿ ಸಹಕಾರ ವಿಸ್ತರಣೆ ಬಗ್ಗೆ ಮಾತುಕತೆ ನಡೆಯಿತು' ಎಂದು ರಾಜನಾಥ್ ಸಿಂಗ್ ಎಕ್ಸ್ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

ರಕ್ಷಣಾ ಸಚಿವರ ಸಭೆಯ ಸಂದರ್ಭದಲ್ಲೇ, ಭಾರತೀಯ ಕರಾವಳಿ ರಕ್ಷಣಾ ಪಡೆಯು, ಇಟಲಿಯ ಹಡಗು ನಿರ್ಮಾಣ ಕಂಪನಿ ಫಿನ್‌ಕಾಂಟೇರಿ ಜತೆಗೆ ಅತ್ಯಾಧುನಿಕ ವಿನ್ಯಾಸ, ಸಂಯೋಜಿತ ಅಗ್ನಿಶಾಮಕ ವ್ಯವಸ್ಥೆ ಮತ್ತು ಹೈಬ್ರಿಡ್ ಪ್ರೊಪಲ್ಷನ್ ಬಗ್ಗೆ ಚರ್ಚೆ ನಡೆಸಿತು ಎಂದು ಮೂಲಗಳು ತಿಳಿಸಿವೆ.

'ರಾಜಕೀಯಕ್ಕೆ ಧಾರ್ಮಿಕ ಸ್ಥಳ ಬಳಕೆ ಸಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಧಾರ್ಮಿಕ ಸ್ಥಳಗಳನ್ನು ರಾಜಕೀಯ ಉದ್ದೇಶಕ್ಕೆ ಬಳಸುವುದು ಸರಿಯಲ್ಲ' ಎಂದಿರುವ ಹೈಕೋರ್ಟ್, ಲೋಕಸಭಾ ಚುನಾವಣೆಯ ವೇಳೆ ಶಿವಮೊಗ್ಗ ದೇವಸ್ಥಾನದಲ್ಲಿ ರಾಜಕೀಯ ಸಭೆ ನಡೆಸಿದ ಆರೋಪಕ್ಕೆ ಸಂಬಂಧಿಸಿದಂತೆ ಮಾಜಿ ಉಪಮುಖ್ಯಮಂತ್ರಿ ಕೆ.ಎಸ್.ಈಶ್ವರಪ್ಪ ಮತ್ತು ಇತರರ ವಿರುದ್ಧದ ಕ್ರಿಮಿನಲ್ ಪ್ರಕರಣ ರದ್ದುಪಡಿಸಲು ನಿರಾಕರಿಸಿದೆ.

ಶಿವಮೊಗ್ಗದ ತುಂಗಾನಗರ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣ ರದ್ದುಪಡಿಸುವಂತೆ ಕೋರಿ ಕೆ.ಎಸ್.ಈಶ್ವರಪ್ಪ ಸೇರಿದಂತೆ ಒಂಬತ್ತು ಆರೋಪಿಗಳು ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಸುನಿಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, 'ದೇವಸ್ಥಾನದ ಅರ್ಚಕ ಹಾಗೂ ಇನ್ನೊಬ್ಬ ಅರ್ಜಿದಾರರ ವಿರುದ್ಧದ ಪ್ರಕರಣ ರದ್ದುಪಡಿಸಬೇಕು' ಎಂದು ಮನವಿ ಮಾಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ರಾಜಕೀಯ ಕಾರಣಗಳಿಗೆ ಧಾರ್ಮಿಕ ಸ್ಥಳಗಳನ್ನು ಬಳಕೆ ಮಾಡಲಾಗದು. ಇದಕ್ಕೆ ಇತಿಶ್ರೀ ಹಾಡಬೇಕು' ಎಂದು ಮೌಖಿಕವಾಗಿ ನುಡಿದು, 'ಪ್ರಕರಣದ ವಿಸ್ತೃತ ವಿಚಾರಣೆ ಅಗತ್ಯವಿದೆ' ಎಂದು ವಿಚಾರಣೆ ಮುಂದೂಡಿತು.

ಪ್ರಕರಣ: 2024ರ ಲೋಕಸಭಾ ಚುನಾವಣೆಯ ವೇಳೆ ನೀತಿ ಸಂಹಿತೆ ಜಾರಿಯಲ್ಲಿದ್ದಾಗ ಶಿವಮೊಗ್ಗದ ಆದಿ ರಂಗನಾಥ ದೇವಾಲಯದಲ್ಲಿ ಈಶ್ವರಪ್ಪ ಮತ್ತು ಇತರರು ಚುನಾವಣೆಯಲ್ಲಿ ಸ್ಪರ್ಧಿಸುವ ಕುರಿತು ಸಭೆ ನಡೆಸಿದ್ದರು. ಈ ಹಿನ್ನೆಲೆಯಲ್ಲಿ ಚುನಾವಣಾ ವೀಕ್ಷಕರು ಈಶ್ವರಪ್ಪ ಸೇರಿದಂತೆ ಒಂಬತ್ತು ಜನರ ವಿರುದ್ಧ ಧಾರ್ಮಿಕ ಸಂಸ್ಥೆಗಳ (ದುರ್ಬಳಕೆ ತಡೆ) ಕಾಯ್ದೆಯ ವಿವಿಧ ಕಲಂಗಳಡಿ ತುಂಗಾನಗರ ಪೊಲೀಸ್ ಠಾಣೆಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಿಸಿದ್ದರು.

'ಲಂಚ: ಉಪವಿಭಾಗಾಧಿಕಾರಿಗೂ ಕೆಐಎಡಿಬಿಗೂ ಸಂಬಂಧವಿಲ್ಲ'

ಬೆಂಗಳೂರು: ಜಮೀನು ವ್ಯಾಜ್ಯದಲ್ಲಿ ವಾದಿಗಳ ಪರವಾಗಿ ಆದೇಶ ನೀಡಲು ₹30 ಲಕ್ಷ ಲಂಚ ಪಡೆದು ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದ ಉಪವಿಭಾಗಾಧಿಕಾರಿ ನಾಗಪ್ರಶಾಂತ್ ಅವರು, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಲ್ಲಿ (ಕೆಐಎಡಿಬಿ) ಕಾರ್ಯನಿರ್ವಹಿಸುತ್ತಿಲ್ಲ ಎಂದು ಮಂಡಳಿಯು ತಿಳಿಸಿದೆ.

ಬೆಂಗಳೂರು ಉತ್ತರ ತಾಲ್ಲೂಕಿನ ವಿಶೇಷ ಉಪ ವಿಭಾಗಾಧಿಕಾರಿ ಮತ್ತು ವಿಶೇಷ ಭೂಸ್ವಾಧೀನಾಧಿಕಾರಿ-1 (ಬೆಂಗಳೂರು ಉತ್ತರ) ನಾಗಪ್ರಶಾಂತ್ ಅವರು ಗಟ್ಟಿಗಾನಹಳ್ಳಿಯ ಜಮೀನಿಗೆ ಸಂಬಂಧಿಸಿದ ವ್ಯಾಜ್ಯದಲ್ಲಿ ವಾದಿಗಳಿಂದ ₹30 ಲಕ್ಷ ಲಂಚ ಪಡೆದಿದ್ದರು. ಈ ವೇಳೆ ದಾಳಿ ನಡೆಸಿ ಅವರನ್ನು ಬಂಧಿಸಲಾಗಿತ್ತು.

ನಾಗ ಪ್ರಶಾಂತ್ ಅವರು ಕಂದಾಯ ಇಲಾಖೆಯ ಅಧಿಕಾರಿಯಾಗಿದ್ದು, ನಿಯೋಜನೆ ಮೇರೆಗೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗೆ ಬಂದಿದ್ದರು. ಆದರೆ ಬಹಳ ಹಿಂದೆಯೇ ಅವರನ್ನು ಮಂಡಳಿಯಿಂದ ಬಿಡುಗಡೆ ಮಾಡಲು ಆದೇಶಿಸಲಾಗಿದೆ ಎಂದು ಮಂಡಳಿಯ ಮೂಲಗಳು ತಿಳಿಸಿವೆ.

ಗಟ್ಟಿಗಾನಹಳ್ಳಿಯ ಜಮೀನಿಗೆ ಸಂಬಂಧಿಸಿದಂತೆ ಕಂದಾಯ ಇಲಾಖೆಯ ವಿಶೇಷ ಉಪ ವಿಭಾಗಾಧಿಕಾರಿಯಾಗಿ ತಮಗಿರುವ ಅಧಿಕಾರವನ್ನು ಬಳಸಿ ನಾಗಪ್ರಶಾಂತ್ ಅವರು ಆದೇಶ ಹೊರಡಿಸಲು ಲಂಚ ಪಡೆದಿದ್ದಾರೆ. ಅದಕ್ಕೂ ಕೆಐಎಡಿಬಿಗೂ ಸಂಬಂಧವಿಲ್ಲ ಎಂದು ವಿವರಿಸಿವೆ.

ಬೌರಿಂಗ್ ಮುಖ್ಯಸ್ಥರಿಗೆ ನೋಟಿಸ್

ಒಂದನೇ ಪುಟದಿಂದ...

'ಗೋಡೆಗೆ ಹಾನಿ ಆಗಲಿದೆ ಎಂಬ ಮಾಹಿತಿ ಇದ್ದರೂ ಕಾಮಗಾರಿ ನಡೆಯುವಾಗ ಅವರಣದಲ್ಲಿ ಮಣ್ಣು ಸುರಿದಿದ್ದು ಏಕೆ? ಭವಿಷ್ಯದಲ್ಲಿ ಇಂತಹ ಅವಘಡಗಳು ನಡೆಯದಂತೆ ಮುನ್ನೆಚ್ಚರಿಕೆ ವಹಿಸಬೇಕು. ಗಾಯಗೊಂಡವರಿಗೆ ಉಚಿತ ಚಿಕಿತ್ಸೆ ನೀಡಬೇಕು. ನಿರ್ಲಕ್ಷ್ಯ ತೋರುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು' ಎಂದು ಸಿದ್ದರಾಮಯ್ಯ ಎಚ್ಚರಿಸಿದರು. ಶಾಸಕ ರಿಜ್ವಾನ್ ಅರ್ಷದ್, ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಜಿಬಿಎ ಆಯುಕ್ತ ಮಹೇಶ್ವರ ರಾವ್, ಮುಖ್ಯಮಂತ್ರಿ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅಂಜುಂ ಪರ್ವೇಜ್ ಇದ್ದರು.

'ಸರ್ಕಾರ ಸೂಕ್ತ ಕ್ರಮವಹಿಸಲಿ'

ಕಲಬುರ್ಗಿ: ಬೆಂಗಳೂರು ಮಾತ್ರವಲ್ಲದೇ ಬಹುತೇಕ ಎಲ್ಲ ನಗರಗಳಲ್ಲಿ ಸಣ್ಣ-ಪುಟ್ಟ ವ್ಯಾಪಾರಿಗಳು ರಸ್ತೆ ಬದಿಯೇ ವಹಿವಾಟು ನಡೆಸುತ್ತಾರೆ. ಏನಾದರೂ ಹೇಳಲು ಹೋದರೆ ನಮ್ಮ ಹೊಟ್ಟೆ ಮೇಲೆ ಹೊಡೆಯಬೇಡಿ ಎನ್ನುತ್ತಾರೆ. ಹೀಗಾಗಿ ನಗರ-ಸ್ಥಳೀಯ ಸಂಸ್ಥೆಗಳು ಅವರಿಗೆ ಯೋಗ್ಯ ಜಾಗ ತೋರಿಸಿ ವ್ಯಾಪಾರಕ್ಕೆ ಅನುಕೂಲ ಕಲ್ಪಿಸಬೇಕು. ಇಂಥ ಅವಘಡಗಳ ತಡೆಗೆ ಸರ್ಕಾರ ಮುಂಜಾಗ್ರತೆ ವಹಿಸುವ ಜೊತೆಗೆ ಬೀದಿಬದಿ ವ್ಯಾಪಾರಿಗಳಿಗೆ ನೆರವಾಗಬೇಕು ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ತಿಳಿಸಿದ್ದಾರೆ.

'ಎಐ ಸಿಟಿ'ಗೆ ₹18,133 ಕೋಟಿ

ಒಂದನೇ ಪುಟದಿಂದ...

ಈ ಯೋಜನೆಯ ಯೋಜನಾ ವೆಚ್ಚಗಳಿಗಾಗಿ ಹುಡ್ಕೊ ಸಂಸ್ಥೆಯಿಂದ ₹9,011 ಕೋಟಿ ಸಾಲ ಪಡೆಯಲು ಮತ್ತು ಅದಕ್ಕೆ ತಗಲುವ ಬಡ್ಡಿ ಮೊತ್ತಕ್ಕೆ ಸರ್ಕಾರ ಗ್ಯಾರಂಟಿ ನೀಡಲಿದೆ. ಬಿಎಂಆರ್‌ಡಿಎ ವ್ಯಾಪ್ತಿಯಲ್ಲಿನ ಪ್ರಾಧಿಕಾರಗಳ ಸ್ವತ್ತುಗಳ ಸೂಕ್ತ ನಗದೀಕರಣ ಅಂದರೆ ಅಡಮಾನ ಮೂಲಕ ಬ್ಯಾಂಕುಗಳಿಂದ ₹3,650 ಕೋಟಿ ಸಾಲ ಪಡೆಯಲು ತೀರ್ಮಾನಿಸಲಾಗಿದೆ ಎಂದು ತಿಳಿಸಿದರು.

ಯೋಜನಾ ವೆಚ್ಚ: ಭೂಸ್ವಾಧೀನ ವೆಚ್ಚಕ್ಕೆ ₹9,081 ಕೋಟಿ, ಅಭಿವೃದ್ಧಿ ವೆಚ್ಚ ₹6,580 ಕೋಟಿ, ನಿರ್ಮಾಣದ ವೇಳೆಯ ಬಡ್ಡಿ ₹2,472 ಕೋಟಿ. ಹೀಗೆ ಒಟ್ಟು ₹18,133 ಕೋಟಿ ಆಗಲಿದೆ ಎಂದರು.

ಗ್ರಾಮಗಳ ವ್ಯಾಪ್ತಿ: ಬಿಡದಿ ಹೋಬಳಿಯ ಬೈರಮಂಗಲ, ಬನ್ನಿಗಿರಿ, ಹೊಸೂರು, ಕೆ.ಜಿ. ಗೊಲ್ಲರಹಳ್ಳಿ, ಕಂಚುಗಾರನಹಳ್ಳಿ, ಅರಳಾಳುಸಂದ್ರ, ಕೆಂಪಯ್

‘ಕನ್ನಡದಲ್ಲಿ ಅನುತ್ತೀರ್ಣ: ವಿಕರೂಪ ಕೊರತೆ’

ಕನ್ನಡ ಅಭಿವೃದ್ಧಿ ಪ್ರಾಧಿಕಾರದಿಂದ ಶಾಲಾ ಶಿಕ್ಷಣ ಇಲಾಖೆಗೆ ಅಧ್ಯಯನ ವರದಿ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಸ್‌ಎಸ್‌ಎಲ್‌ಸಿ ಕನ್ನಡ ಪರೀಕ್ಷೆಯಲ್ಲಿ ಹೆಚ್ಚಿನ ವಿದ್ಯಾರ್ಥಿಗಳು ಅನುತ್ತೀರ್ಣ ರಾಗುತ್ತಿರುವುದಕ್ಕೆ ಶಿಕ್ಷಣದಲ್ಲಿ ಏಕರೂಪತೆಯ ಕೊರತೆ ಸೇರಿ ವಿವಿಧ ಕಾರಣಗಳನ್ನು ಗುರುತಿಸಿರುವ ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕನ್ನಡದತ್ತ ಆಸಕ್ತಿ ಮೂಡಿಸಲು 22 ಶಿಫಾರಸು ಮಾಡಿದೆ.

‘ಕನ್ನಡ ನಾಡಿನ ಮಕ್ಕಳು ಕನ್ನಡದಲ್ಲೇಕೆ ನಪಾಸಾಗುತ್ತಾರೆ?’ ಶೀರ್ಷಿಕೆಯಡಿ ಸಿದ್ಧಪಡಿಸಿದ ಅಧ್ಯಯನ ವರದಿಯನ್ನು ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಅವರು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರಿಗೆ ಗುರುವಾರ ಸಲ್ಲಿಸಿದರು. ಪ್ರಾಧಿಕಾರದ ಸದಸ್ಯರೂ ಆಗಿರುವ ಶಿಕ್ಷಣ ತಜ್ಞ ವಿ.ಪಿ. ನಿರಂಜನಾರಾಧ್ಯ ಅವರ ಮಾರ್ಗದರ್ಶನದಲ್ಲಿ ಎಂಟು ಶಿಕ್ಷಕರನ್ನು ಒಳಗೊಂಡ ಸಮಿತಿ ಈ ಸಂಶೋಧನಾ ವರದಿ ಸಿದ್ಧಪಡಿಸಿದೆ.

‘ಕರ್ನಾಟಕದ ಶಾಲಾ ಶಿಕ್ಷಣ ವ್ಯವಸ್ಥೆಯಲ್ಲಿ ಕನ್ನಡವು ಒಂದು ಭಾಷೆಯಾಗಿ ಯಾವ ಸ್ಥಾನದಲ್ಲಿದೆ ಎಂಬುದನ್ನು ಅರ್ಥಮಾಡಿಕೊಳ್ಳಲು ಸಂಖ್ಯಾತ್ಮಕ, ದತ್ತಾಂಶ ಆಧಾರಿತ ಅಧ್ಯಯನ ನಡೆಯಬೇಕಿದೆ. ಈ ಅಧ್ಯಯನವು ಎಸ್‌ಎಸ್‌ಎಲ್‌ಸಿ ಫಲಿತಾಂಶಗಳ ದತ್ತಾಂಶವನ್ನು ಆಧರಿಸಿದ್ದು, ಕನ್ನಡ ಭಾಷಾ ಶಿಕ್ಷಣದ ಸ್ಥಿತಿಯನ್ನು ಸಂಖ್ಯಾತ್ಮಕ ಮತ್ತು ವ್ಯಾಖ್ಯಾನಾತ್ಮಕ ದೃಷ್ಟಿಕೋನದಿಂದ ವಿಶ್ಲೇಷಿಸಿದೆ’ ಎಂದು ವರದಿಯಲ್ಲಿ ತಿಳಿಸಲಾಗಿದೆ.

ಪ್ರಮುಖ ಅಂಶಗಳು: ಕನ್ನಡವನ್ನು ಪ್ರಥಮ ಭಾಷೆಯನ್ನಾಗಿ ಆಯ್ಕೆ ಮಾಡಿಕೊಳ್ಳುವ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಇಳಿಕೆಯಾಗಿದೆ. 2016ರಲ್ಲಿ ಶೇ 83.13ರಷ್ಟಿದ್ದ ಕನ್ನಡ ಪ್ರಥಮ ಭಾಷಾ ಪ್ರಾಬಲ್ಯ, 2025ರಲ್ಲಿ ಶೇ 81.03ಕ್ಕೆ ಇಳಿದಿದೆ. ಇದೇ ಅವಧಿಯಲ್ಲಿ ಆಂಗ್ಲ ಭಾಷೆಯನ್ನು ಪ್ರಥಮ ಭಾಷೆಯನ್ನಾಗಿ ಆಯ್ಕೆ ಮಾಡಿಕೊಳ್ಳುವ ವಿದ್ಯಾರ್ಥಿಗಳ ಪ್ರಮಾಣ ಶೇ 10.61ರಿಂದ ಶೇ 14.62ಕ್ಕೆ ಏರಿಕೆಯಾಗಿದೆ.

2025ರಲ್ಲಿ ಪ್ರಥಮ ಭಾಷೆ ಕನ್ನಡದಲ್ಲಿ ಅನುತ್ತೀರ್ಣರಾದ 80,373 ವಿದ್ಯಾರ್ಥಿಗಳು ಕೇವಲ ಸಂಖ್ಯೆ ಮಾತ್ರವಲ್ಲ, ಕನ್ನಡಕ್ಕೆ ಭವಿಷ್ಯದಲ್ಲಿ ಒದಗಿರುವ ಅಪಾಯದ ಸೂಚಕವಾಗಿದ್ದಾರೆ. ಇದು ಎಚ್ಚರಿಕೆಯ ಗಂಟೆ. ಈ ಪ್ರವೃತ್ತಿಯನ್ನು ಹಿಮ್ಮೆಟ್ಟಿಸಲು ಮತ್ತು ಕರ್ನಾಟಕದಲ್ಲಿನ ಎಲ್ಲ ವಿದ್ಯಾರ್ಥಿಗಳಿಗೆ ಸಮಾನ ಗುಣಮಟ್ಟದ ಶಿಕ್ಷಣವನ್ನು ಖಾತ್ರಿಪಡಿಸಲು ಸರ್ಕಾರವು ರಾಜ್ಯ, ಜಿಲ್ಲೆ, ತಾಲ್ಲೂಕು ಮತ್ತು ಶಾಲಾ ಮಟ್ಟದಲ್ಲಿನ ತುರ್ತು ಹಾಗೂ ಸಮಗ್ರ ಕ್ರಮಗಳನ್ನು ಕೈಗೊಳ್ಳುವ ಅಗತ್ಯವಿದೆ.

ಒಂದು ರಾಜ್ಯ ಒಂದು ಶಿಕ್ಷಣ ಕ್ರಮವನ್ನು ಜಾರಿಗೊಳಿಸಬೇಕು. ವಿದ್ಯಾರ್ಥಿ ಯಾವುದೇ ಶಾಲೆಯಲ್ಲಿ ಕಲಿಯಲಿ, ಕಡ್ಡಾಯ ಶಿಕ್ಷಣದ ಅವಧಿಯಲ್ಲಿ ಒಂದೇ ರೀತಿಯ ಶಿಕ್ಷಣ ನೀಡಿದಾಗ ಶಿಕ್ಷಣದಲ್ಲಿ ಅನಾರೋಗ್ಯಕರ ಸ್ಪರ್ಧೆ ತಪ್ಪಲಿದೆ. ಸಮಾನ ಶಾಲಾ ಶಿಕ್ಷಣ ಪದ್ಧತಿ ಕಡ್ಡಾಯವಾಗಿ ಜಾರಿಯಾಗಬೇಕು. ಶಿಕ್ಷಣದ ವ್ಯವಸ್ಥೆಯಲ್ಲಿ ಯಾವುದೇ ತಾರತಮ್ಯ ಇರಬಾರದು.

ಪುರುಷೋತ್ತಮ ಬಿಳಿಮಲೆ ಅವರು ಮಧು ಬಂಗಾರಪ್ಪ ಅವರಿಗೆ ವರದಿ ಸಲ್ಲಿಸಿದರು. ಪ್ರಾಧಿಕಾರದ ಕಾರ್ಯದರ್ಶಿ ಸಂತೋಷ ಹಾನಗಲ್ಲ, ಶಿಕ್ಷಕಿ ಆಶಾ ಕೆ.ಸಿ. ಉಪಸ್ಥಿತರಿದ್ದರು

‘ವಾಸ್ತವ ಚಿತ್ರಣ ನೀಡುವ ವರದಿ’

‘ಕರ್ನಾಟಕದಲ್ಲಿ ತಾಯ್ನುಡಿಯಲ್ಲಿಯೇ ಮಕ್ಕಳು ದೊಡ್ಡ ಸಂಖ್ಯೆಯಲ್ಲಿ ನಪಾಸಾಗುತ್ತಿರುವುದು ಆಘಾತಕಾರಿಯಾಗಿದೆ. ಇದಕ್ಕೆ ಸ್ಪಷ್ಟ ಕಾರಣ ಹುಡುಕಿ, ಶಿಕ್ಷಣದಲ್ಲಿ ಕನ್ನಡ ಉಳಿದು ಬೆಳೆಯುವಂತೆ ಮಾಡಲು ಪ್ರಾಧಿಕಾರ ವರದಿಯನ್ನು ಸಿದ್ಧಪಡಿಸಿದೆ. ಅನುಷ್ಠಾನ ಯೋಗ್ಯ ಸಲಹೆಗಳನ್ನು ಸರ್ಕಾರದ ಮುಂದಿಟ್ಟಿದೆ. ಈ ವರದಿ ಕನ್ನಡ ಭಾಷಾ ಶಿಕ್ಷಣದ ಸ್ಥಿತಿಗತಿಯ ವಾಸ್ತವ ಚಿತ್ರಣ ನೀಡುವುದರ ಜತೆಗೆ, ಬೋಧನಾ ಪದ್ಧತಿಯ ಪರಿಷ್ಕರಣೆ, ಪರೀಕ್ಷಾ ವ್ಯವಸ್ಥೆಯ ಸುಧಾರಣೆ, ಶಿಕ್ಷಣದ ತರಬೇತಿ ಮತ್ತು ಗುಣಾತ್ಮಕ ಪಠ್ಯಪುಸ್ತಕ ರಚನಾ ಪ್ರಕ್ರಿಯೆಯ ಮಹತ್ವದ ಮೇಲೆ ಬೆಳಕು ಚೆಲ್ಲಿದೆ’ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ತಿಳಿಸಿದ್ದಾರೆ.

‘ಕನ್ನಡ ಕಲಿಕೆ ಕಡ್ಡಾಯಗೊಳಿಸಿ’

- ಕರ್ನಾಟಕದಲ್ಲಿ ಕನ್ನಡವೇ ರಾಜ್ಯ ಭಾಷೆ. ಅಂಗನವಾಡಿಯಿಂದ ಪದವಿವರೆಗೆ ಯಾವುದೇ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದರೂ ಭಾಷೆಯಾಗಿ ಕನ್ನಡ ಕಲಿಕೆಯನ್ನು ರಾಜ್ಯದಲ್ಲಿ ಕಡ್ಡಾಯಗೊಳಿಸಬೇಕು.
- ಅನಗತ್ಯ ಭಾಷಾ ಕಲಿಕೆಯ ಹೊರೆ ತಗ್ಗಿಸಲು ಈಗಿರುವ ತ್ರಿಭಾಷಾ ಸೂತ್ರವನ್ನು ಕೈಬಿಟ್ಟು, ದ್ವಿಭಾಷಾ ನೀತಿಯನ್ನು ಅಳವಡಿಸಿಕೊಳ್ಳಬೇಕು.
- ಕನ್ನಡದಲ್ಲಿ ಸಾಧನೆಗೈದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ, ಮುಂದಿನ ಹಂತದ ವಿದ್ಯಾಭ್ಯಾಸಕ್ಕೆ ಆಯ್ಕೆಯಲ್ಲಿ ಪ್ರಾಧಾನ್ಯತೆ, ಸರ್ಕಾರಿ ಉದ್ಯೋಗಗಳಲ್ಲಿ ಆದ್ಯತೆ ಮೊದಲಾದ ಉತ್ತೇಜನಗಳನ್ನು ನೀಡಬೇಕು.
- ಮಕ್ಕಳ ಸ್ವಯಂ ಕಲಿಕೆಗೆ, ಅವರಲ್ಲಿನ ಭಾಷಾ ಕೌಶಲಗಳಿಗೆ ಪೂರಕವಾದ ಚಟುವಟಿಕೆಗಳಿರಬೇಕು. ಮೌಲ್ಯಮಾಪನದಲ್ಲಿ ಭಾಷಾ ಕಲಿಕೆಯ ಸಾಮರ್ಥ್ಯಗಳಿಗೆ ಆದ್ಯತೆ ನೀಡಬೇಕೆ ಹೊರತು ವಿಷಯಕ್ಕಲ್ಲ.
- ಪಠ್ಯಪುಸ್ತಕದಲ್ಲಿ ಸರಳ ಕಥೆ, ಕವನ, ಚಟುವಟಿಕೆ, ಸಂಭಾಷಣೆ ಮೊದಲಾದ ಭಾಷಾ ಚಟುವಟಿಕೆಗಳಿಗೆ ಅವಕಾಶ ಇರಬೇಕು. ಪಠ್ಯಪುಸ್ತಕವು ವಿಷಯ ತುರುಕಿಸುವ ಸಾಧನವಾಗಿರದೆ, ಮಕ್ಕಳಲ್ಲಿ ಭಾಷಾ ಕೌಶಲ ಬೆಳೆಸಲು ಪೂರಕವಾಗಿರಬೇಕು.
- ಕನ್ನಡದ ಬಗ್ಗೆ ಒಲವು ಮೂಡಿಸುವ ಕಾರ್ಯವಾಗಬೇಕು. ವೃತ್ತಿಪರ ಅರ್ಹತೆ ಜತೆಗೆ, ಕನ್ನಡ ಕಲಿಕೆಗೆ ನಿಗದಿತ ಅಂಕವನ್ನು ಮೀಸಲಿಡಬೇಕು. ಕನ್ನಡಕ್ಕೆ ಕೃಪಾಂಕ ನೀಡಬೇಕು. ಎಲ್ಲ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿಯೂ ಕನ್ನಡ ಕಡ್ಡಾಯಗೊಳಿಸಬೇಕು.
- ಪ್ರಾಥಮಿಕ ಹಂತದಲ್ಲಿ ಭಾಷಾ ಕೌಶಲಗಳಿಗೆ ಹೆಚ್ಚಿನ ಒತ್ತು ಕೊಟ್ಟು, ಭಾಷಾ ಕಲಿಕೆಗೆ ಪೂರಕವಾದ ವಾತಾವರಣ ನಿರ್ಮಿಸಬೇಕು.
- ಪ್ರೌಢಶಾಲಾ ಹಂತದಲ್ಲಿ 8ನೇ ತರಗತಿಯಿಂದಲೇ ವಿದ್ಯಾರ್ಥಿ ಕನ್ನಡ ಭಾಷೆಯಲ್ಲಿ ಪ್ರಾವೀಣ್ಯ ಪಡೆಯುವಂತೆ ಹಂತ ಹಂತವಾಗಿ ಕ್ರಮಕೈಗೊಳ್ಳಬೇಕು.
- ಶಾಲೆಯಲ್ಲಿ ಹೆಚ್ಚು ಹೆಚ್ಚು ಭಾಷಾ ಚಟುವಟಿಕೆಗಳನ್ನು ನಡೆಸಬೇಕು. ಕಡ್ಡಾಯ ಓದಿಗೆ ಪ್ರತಿದಿನ ಅರ್ಧ ಗಂಟೆಯನ್ನಾದರೂ ಮೀಸಲಿಡಬೇಕು.

‘ಎಸ್‌ಸಿ, ಜನರಲ್’ನಿಂದ ಮಾದಿಗರಿಗೆ ಅನ್ಯಾಯ’

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ‘ರಾಜ್ಯ ಸರ್ಕಾರ ಒಳ ಮೀಸಲಾತಿ ಜಾರಿಗೊಳಿಸಿ ಮಾದಿಗ ಸಮುದಾಯದವರ ಬಹುಕಾಲದ ಬೇಡಿಕೆ ಈಡೇರಿಸಿದೆ. ಆದರೆ, 3ಕ್ಕಿಂತ ಕಡಿಮೆ ಹುದ್ದೆಗಳು ಇದ್ದಾಗ ಎಸ್‌ಸಿ ಜನರಲ್ (ಸಾಮಾನ್ಯ) ಎಂದು ಪರಿಗಣಿಸುವುದಾಗಿ ಹೇಳಿರುವುದು ಅನ್ಯಾಯವಾಗಲಿದೆ. 1 ಅಥವಾ 2 ಹುದ್ದೆಗಳಿದ್ದರೂ ಒಳಮೀಸಲಾತಿ ಅನ್ವಯಿಸಬೇಕು’ ಎಂದು ಮಾಜಿ ಸಚಿವ ಎಚ್.ಆಂಜನೇಯ ಒತ್ತಾಯಿಸಿದರು.

‘ಎಸ್‌ಸಿ ಜನರಲ್’ ಎಂದು ಪರಿಗಣಿಸಿದರೆ ಎಸ್‌ಸಿ ಪಟ್ಟಿಯಲ್ಲಿರುವ ಎಲ್ಲ 101 ಸಮುದಾಯಗಳ ಜನರೂ ಆ ಹುದ್ದೆಗಳಿಗೆ ಸ್ಪರ್ಧಿಸ ಬಹುದು. ಆದರೆ, ಬಹಳ ಹಿಂದಿನಿಂದಲೂ ತೀವ್ರ ಹಿಂದುಳಿದಿರುವ ಮಾದಿಗ ಸಮುದಾಯ ಇತರ ಸಮುದಾಯಗಳ ಸದಸ್ಯರ ಜೊತೆಗೆ ಸ್ಪರ್ಧಿಸಲು ಸಾಧ್ಯವಿಲ್ಲ. ಪೌರಕಾರ್ಮಿಕರಾಗಿಯೇ ಉಳಿದಿರುವ, ಹಮಾಲಿಗಳಾಗಿರುವ ಮಾದಿಗರು ಇತರರ ಜೊತೆ ಸ್ಪರ್ಧಿಸುವ ಅನಿವಾರ್ಯತೆ ಎದುರಾಗುತ್ತದೆ. ಇದರಿಂದ ಒಳ ಮೀಸಲಾತಿಯ ಉದ್ದೇಶವೇ ವ್ಯರ್ಥ ವಾಗಲಿದೆ’ ಎಂದು ಗುರುವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

‘ಒಳಮೀಸಲಾತಿ ಜಾರಿಯಲ್ಲಿ ಈಗಲೂ ಉಳಿದಿರುವ ಗೊಂದಲಗಳ ಬಗ್ಗೆ ಚರ್ಚಿಸಲು ಸಮಾನ ಮನಸ್ಕರು ಹಾಗೂ ತಜ್ಞರ ಸಮಾಲೋಚನಾ ಸಭೆಯನ್ನು ಮೇ 3ರಂದು ಬೆಂಗಳೂರಿನಲ್ಲಿ ಹಮ್ಮಿಕೊಳ್ಳಲಾಗಿದೆ. ಸಭೆಯಲ್ಲಿ ವ್ಯಕ್ತವಾಗುವ ಸಮಸ್ಯೆಗಳನ್ನು ವರದಿ ರೂಪದಲ್ಲಿ ಮುಖ್ಯಮಂತ್ರಿಗೆ ಸಲ್ಲಿಸಲಾಗುವುದು’ ಎಂದರು.

ಆಂಜನೇಯ

‘ಒಳಮೀಸಲಾತಿ ಜಾರಿಯಾಗಿದ್ದರಿಂದ ಸರ್ಕಾರಕ್ಕೆ ಕೃತಜ್ಞತೆ ಸಲ್ಲಿಸಲು ಸಂಭ್ರಮೋತ್ಸವ ಏರ್ಪಡಿಸಲಾಗುವುದು. ಕಾರ್ಯಕ್ರಮಕ್ಕೆ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರನ್ನು ಆಹ್ವಾನಿಸಲಾಗುವುದು. ಸಿ.ಎಂ ಸಿದ್ದರಾಮಯ್ಯ ಸೇರಿದಂತೆ ಸಚಿವ ಸಂಪುಟದ ಎಲ್ಲ ಸದಸ್ಯರನ್ನೂ ಅಭಿನಂದಿಸಲಾಗುವುದು. ಒಳಮೀಸಲಾತಿ ಜಾರಿಯಲ್ಲಿ ಸಹಕರಿಸಿದ ಬಿಜೆಪಿ, ಜೆಡಿಎಸ್ ಪಕ್ಷಗಳನ್ನೂ ಸ್ಮರಿಸಲಾಗುವುದು’ ಎಂದರು.

‘ಇಲ್ಲಿಯವರೆಗೆ ನಮಗೆ ಶೇ 1ರಷ್ಟೂ ಮೀಸಲಾತಿ ಸಿಕ್ಕಿರಲಿಲ್ಲ. ಹೋರಾಟದ ಫಲವಾಗಿ ಶೇ 5.25 ಒಳಮೀಸಲಾತಿ ಸಿಕ್ಕಿದೆ. ಸಮುದಾಯದ ಸದಸ್ಯರು ಇದನ್ನು ಸದುಪಯೋಗ ಮಾಡಿಕೊಳ್ಳಬೇಕು ಎಂದು ಜಾಗೃತಿ ಮೂಡಿಸಲಾಗುವುದು. ಒಟ್ಟು ಮೀಸಲಾತಿ ಶೇ 56ಕ್ಕೆ ಏರಿಕೆಯಾದರೆ ನಮಗೆ ಶೇ 6ರಷ್ಟು ಒಳ ಮೀಸಲಾತಿ ದೊರೆಯಲಿದೆ. ಹೀಗಾಗಿ ಮುಖ್ಯಮಂತ್ರಿಗಳು ಸರ್ವ ಪಕ್ಷ ಸಭೆ ಕರೆದು ಪ್ರಧಾನಿ ಬಳಿಗೆ ನಿಯೋಗ ಕೊಂಡೊಯ್ದು ಅನ್ಯ ರಾಜ್ಯಗಳ ಮಾದರಿಯಲ್ಲಿ ಮೀಸಲಾತಿ ಹೆಚ್ಚಳಕ್ಕೆ ಒತ್ತಾಯ ಮಾಡಬೇಕು’ ಎಂದರು.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ
“ಜ್ಞಾನ ಸಂಗಮ”, ಬೆಳಗಾವಿ – 590018, ಕರ್ನಾಟಕ

ಸಂಖ್ಯೆ:ವಿ.ತಾ.ವಿ./ಬೆ/ಸ್ಥಾ.ಅ./2026–27/ಐ.ಎಫ್.ಟಿ. ನಂ.15/464 ದಿನಾಂಕ: 27–04–2026

ಅಲ್ಪಾವಧಿ ಟೆಂಡರ್ ಪ್ರಕಟಣೆ
(ದ್ವಿ–ಲಕೋಟೆ ಪದ್ಧತಿ) (ಕೆ.ಪಿ.ಪಿ. ಪೋರ್ಟಲ್ ಮೂಲಕ ಮಾತ್ರ)

ಕುಲಸಚಿವರು, ವಿತಾವಿ, ಬೆಳಗಾವಿ ಇವರಿಂದ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ಸ್ ಕೆ.ಡಬ್ಲ್ಯೂ.ರ ಪ್ರಕಾರ ಕೆ.ಪಿ.ಪಿ. ಪೋರ್ಟಲ್ ಮೂಲಕ ಟೆಂಡರ್‌ನ್ನು ಆಮಂತ್ರಿಸಲಾಗಿದೆ. ಕಾಮಗಾರಿ ಹೆಸರು: **ವಿತಾವಿಯ ಯುಬಿಡಿಟಿ, ಇಂಜಿನಿಯರಿಂಗ್ ಕಾಲೇಜ್ ದಾವಣಗೆರೆಯಲ್ಲಿಯ 1000 ಆಸನಗಳ ಸಾಮರ್ಥ್ಯದ ಆಡಿಟೋರಿಯಂ ಕಟ್ಟಡದ ಸಜ್ಜುಗೊಳಿಸುವಿಕೆಯ ಕಾಮಗಾರಿ ಮೊತ್ತ ರೂ. 4,20,94,395/–** (ತೆರಿಗೆ ರಹಿತ). ಇತರೆ ಮಾಹಿತಿಗಳನ್ನು ವೆಬ್‌ಸೈಟ್: **https://kppp.karnataka.gov.in** ಮೂಲಕ ದಿನಾಂಕ: **28–04–2026** ರಿಂದ ಪಡೆದುಕೊಳ್ಳಬಹುದು.

ಸಹಿ/– ಕುಲಸಚಿವರು
ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ.

ವಾಸಾಸಂಇ/ಬೆಳಗಾವಿ/178/ಅಡ್ವರ್ಟೋ/2026–27

ಕರ್ನಾಟಕ ಸರ್ಕಾರ
ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ, ಬೆಂಗಳೂರು
ಕಲ್ಯಾಣ ಸುರಕ್ಷಾ ಭವನ, ಬನ್ನೇರುಘಟ್ಟ ರಸ್ತೆ, ಬೆಂಗಳೂರು–560029
ದೂ.ಸಂ:080–29753354/56, ಇ–ಮೇಲ್ -karbuildworkerswelfare@gmail.com

No.KBOCWWB/NOTIFICATIONS/2026-27 ದಿನಾಂಕ:29.04.2026

ಇ–ಟೆಂಡರ್ ಪ್ರಕಟಣೆ

ಈ ಅಧಿಸೂಚನೆ ಮತ್ತು ಟೆಂಡರ್ ದಾಖಲೆಯಲ್ಲಿ ವಿವರಿಸಿದ ನಿಯಮಗಳ ಪ್ರಕಾರ ಟೆಂಡರನ್ನು ಎರಡು ಬಿಡ್ ವ್ಯವಸ್ಥೆಯಲ್ಲಿ (ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳು) ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಗಾಗಿ ಕಾರ್ಮಿಕ ಸೆಸ್ ಟ್ಯಾಕಿಂಗ್ ಮತ್ತು ಮೇಲ್ವಿಚಾರಣಾ ವ್ಯವಸ್ಥೆಯ ಸಾಫ್ಟ್‌ವೇರ್‌ನ ವಿನ್ಯಾಸ, ಅಭಿವೃದ್ಧಿ, ಅನುಷ್ಠಾನ, ಕಾರ್ಯಾಚರಣೆ ಮತ್ತು ನಿರ್ವಹಣೆಗಾಗಿ ಏಜೆನ್ಸಿಯ ಆಯ್ಕೆಗಾಗಿ ಈ ಮೂಲಕ ಆಹ್ವಾನಿಸಲಾಗಿದೆ.

ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಅರ್ಹ ಏಜೆನ್ಸಿಯವರು ಕೆ.ಪಿ.ಪಿ.ಪೋರ್ಟಲ್ **www.kppp.karnataka.gov.in** ಮೂಲಕ ತಮ್ಮ ಬಿಡ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ಸದರಿ ಇ–ಟೆಂಡರ್‌ಅನ್ನು ಸಲ್ಲಿಸಲು ಕೊನೆಯ ದಿನಾಂಕ ಕೆ.ಪಿ.ಪಿ.ಪೋರ್ಟಲ್‌ನಂತೆ ಇರುತ್ತದೆ. ಹೆಚ್ಚಿನ ವಿವರಗಳು ಬೇಕಾಗಿದ್ದಲ್ಲಿ ಜಂಟಿ ಕಾರ್ಯದರ್ಶಿಗಳು, ಕ.ಕ&ಇ.ನಿ.ಕಾ.ಕ.ಮಂಡಳಿ ಇವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/–
ಜಂಟಿ ಕಾರ್ಯದರ್ಶಿ
ಕ.ಕ&ಇ.ನಿ.ಕಾ.ಕ.ಮಂಡಳಿ

ವಾಸಾಸಂಇ/ವಾಪ್ರ/ಕಿರಿಡಿ ಸಾಯ/446/2026–27

(ಕರ್ನಾಟಕ ಸರ್ಕಾರ)
ಕಾರ್ಯಪಾಲಕ ಇಂಜಿನಿಯರ್‌ರವರ ಕಾರ್ಯಾಲಯ ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಹಾಸನ

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:05/2026–27
ದಿನಾಂಕ:29.04.2026

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ, ಪಂಚಾಯತ್‌ರಾಜ್ ಇಂಜಿನಿಯರಿಂಗ್ ಅರಕಲಗೂಡು, ಹಾಸನ ಉಪ ವಿಭಾಗ ವ್ಯಾಪ್ತಿಯ 2025–26ನೇ ಸಾಲಿನ ಸಾಮಾಜ ಕಲ್ಯಾಣ ಇಲಾಖೆ ಅನುದಾನ(4225–01–796–0–01)ಯೋಜನೆ, 2025–2026 ನೇ ಸಾಲಿನ ಮುಖ್ಯಮಂತ್ರಿಗಳ ಮೂಲ ಸೌಕರ್ಯ ಅಭೀವೃದ್ಧಿ ಯೋಜನೆಯ ಲೆಕ್ಕಶೀರ್ಷಿಕೆಯಡಿಯಲ್ಲಿ ಟೆಂಡರ್ ಕರೆಯಲಾದ ಕೆಳಕಂಡ ಕಾಮಗಾರಿಗೆ ಸ್ಪರ್ಧಾತ್ಮಕ ಟೆಂಡರ್‌ಅನ್ನು ಕೆ.ಪಿ.ಪಿ.ಪಿ ಅಡಿ kw-4ರ ರೀತ್ಯಾ ಅಂತರ್ಜಾಲದಲ್ಲಿ ದಿನಾಂಕ:02.05.2026 ರಿಂದ ದಿ:11.05.2026 ಸಂಜೆ 4.00 ಘಂಟೆಯವರೆಗೆ ಟೆಂಡರ್‌ನ ನಿಗಧಿತ ನಮೂನೆಗಳನ್ನು www.kppp.karnataka.gov.in ನಲ್ಲಿ ಡೌನ್‌ಲೋಡ್ ಮಾಡಿ ಅವಶ್ಯ ಮಾಹಿತಿಗಳೊಂದಿಗೆ ಹಾಗೂ ನಿಗಧಿತ ಇ.ಎಂ.ಡಿ.ಯೊಂದಿಗೆ ದಿನಾಂಕ:11.05.2026ರ ಸಂಜೆ 4.00 ಗಂಟೆಯೊಳಗೆ ಅಪ್‌ಲೋಡ್ ಮಾಡತಕ್ಕದ್ದು. ದಿನಾಂಕ:08.05.2026 ರವರೆಗೆ ಗುತ್ತಿಗೆದಾರರು ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಯಾವುದೇ ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ. ದಿ:12.05.2026 ರಂದು ಸಂಜೆ 4.05 ಗಂಟೆಯ ನಂತರ ತಾಂತ್ರಿಕ ಬಿಡ್ಡನ್ನು ತೆರೆಯಲಾಗುವುದು ಹಾಗೂ ತಾಂತ್ರಿಕ ಬಿಡ್ಡು ಅನುಮೋದನೆ ಆದ ನಂತರ ಹಣಕಾಸು ಬಿಡ್ಡನ್ನು ತೆರೆಯಲಾಗುವುದು. ಒಂದು ವೇಳೆ ಏನಾದರೂ ತಿದ್ದುಪಡಿ ಉಂಟಾದಲ್ಲಿ ಸದರಿ ತಿದ್ದುಪಡಿಯನ್ನು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗುವುದು. ಟೆಂಡರ್‌ನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ. ಕ್ರ.ಸಂ.ಇಂಡೆಂಟ್ ಸಂಖ್ಯೆ.01.INDENT NO:RDPR/2025-26/RD/WORK_INDENT25298/Call-2 ಟೆಂಡರ್‌ಗಿಟ್ಟ ಮೊತ್ತ ರೂ.ಲಕ್ಷಗಳಲ್ಲಿ Rs.208.38 lakhs 02.INDENT NO:RDPR/2025-26/RD/WORK_INDENT25288/Call-2 ಟೆಂಡರ್‌ಗಿಟ್ಟ ಮೊತ್ತ ರೂ.ಲಕ್ಷಗಳಲ್ಲಿRs.200.95 lakhs 03.INDENT NO:RDPR/2025-26/RD/WORK_INDENT25292/Call-2 ಟೆಂಡರ್‌ಗಿಟ್ಟ ಮೊತ್ತ ರೂ.ಲಕ್ಷಗಳಲ್ಲಿRs.207.04 lakhs 04.INDENT NO:RDPR/2025-26/RD/WORK_INDENT25296/Call-2 ಟೆಂಡರ್‌ಗಿಟ್ಟ ಮೊತ್ತ ರೂ.ಲಕ್ಷಗಳಲ್ಲಿRs.191.83 lakhs 05.INDENT NO:RDPR/2025-26/BD/WORK_INDENT 25163/Call-2 ಟೆಂಡರ್‌ಗಿಟ್ಟ ಮೊತ್ತ ರೂ.ಲಕ್ಷಗಳಲ್ಲಿRs.146.82 lakhs 06.INDENT NO:RDPR/2025-26/BD/WORK_INDENT23989/Call-2 ಟೆಂಡರ್‌ಗಿಟ್ಟ

‘ಅರಣ್ಯ ಇಲಾಖೆಯಿಂದ ವೇತನ ಪಾವತಿಸಿ’

ಬಂಡೀಪುರ: ಹಂಗಾಮಿ ನೌಕರರ ಅನಿರ್ದಿಷ್ಟಾವಧಿ ಮುಷ್ಕರ ಆರಂಭ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಅರಣ್ಯ ಇಲಾಖೆಯಲ್ಲಿ ವಿವಿಧೆಡೆ 4 ಸಾವಿರ ಹಂಗಾಮಿ ನೌಕರರು
- ಲಿಖಿತವಾಗಿ ಭರವಸೆ ಸಿಗುವವರೆಗೂ ಮುಷ್ಕರ ಕೈಬಿಡಲ್ಲ
- ಇಲಾಖೆಯ ಹಿರಿಯ ಅಧಿಕಾರಿಗಳಿಂದಲೇ ಅಡ್ಡಗಾಲು

ಹೊರಗುತ್ತಿಗೆ ರದ್ದುಪಡಿಸಿ ಅರಣ್ಯ ಇಲಾಖೆಯಿಂದಲೇ ವೇತನ ಪಾವತಿ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ರಾಜ್ಯ ವನ್ಯಜೀವಿ ಘಟಕಗಳ ದಿನಗೂಲಿ ಹೊರಗುತ್ತಿಗೆ ನೌಕರರ ಸಂಘದವರು ಗುಂಡ್ಲುಪೇಟೆಯ ಬಂಡಿಪುರ ಹುಲಿ ಸಂರಕ್ಷಿತ ಅರಣ್ಯದಲ್ಲಿ ಅನಿರ್ದಿಷ್ಟಾವಧಿ ಮುಷ್ಕರ ಆರಂಭಿಸಿದರು

ಗುಂಡ್ಲುಪೇಟೆ (ಚಾಮರಾಜನಗರ ಜಿಲ್ಲೆ): ಹೊರಗುತ್ತಿಗೆ ರದ್ದುಪಡಿಸಿ ಅರಣ್ಯ ಇಲಾಖೆಯಿಂದಲೇ ವೇತನ ಪಾವತಿಸಬೇಕು ಎಂಬುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ರಾಜ್ಯ ವನ್ಯಜೀವಿ ಘಟಕಗಳ ದಿನಗೂಲಿ ಹೊರಗುತ್ತಿಗೆ ನೌಕರರ ಸಂಘದ ನೇತೃತ್ವದಲ್ಲಿ ವನ್ಯಜೀವಿ ವಿಭಾಗದ ಹಂಗಾಮಿ ನೌಕರರು ಗುರುವಾರ ತಾಲ್ಲೂಕಿನ ಬಂಡೀಪುರ ಹುಲಿ ಸಂರಕ್ಷಿತ ಅರಣ್ಯದ ಮೇಲುಕಾಮನಹಳ್ಳಿಯಲ್ಲಿ ಅನಿರ್ದಿಷ್ಟಾವಧಿ ಮುಷ್ಕರ ಆರಂಭಿಸಿದರು.

‘ರಾಜ್ಯದಲ್ಲಿ ವನ್ಯಜೀವಿ, ಪ್ರಾದೇಶಿಕ ವಿಭಾಗಗಳು ಸೇರಿದಂತೆ ವಿವಿಧ ಕಡೆಗಳಲ್ಲಿ ನಾಲ್ಕು ಸಾವಿರಕ್ಕೂ ಹೆಚ್ಚು ಹಂಗಾಮಿ ನೌಕರರು ಕೆಲಸ ಮಾಡುತ್ತಿದ್ದಾರೆ. ಹಲವು ಬೇಡಿಕೆಗಳ ಈಡೇರಿಕೆಗಾಗಿ ಕಳೆದ ನವೆಂಬರ್‌ನಲ್ಲಿ ಪ್ರತಿಭಟನೆ ನಡೆಸಿದಾಗ, ಈಡೇರಿಸುವ ಭರವಸೆ ನೀಡಿದ್ದ ಸರ್ಕಾರ ಬಳಿಕ ಮಾತು ತಪ್ಪಿದೆ. ಈ ಬಾರಿ ಲಿಖಿತವಾಗಿ ಭರವಸೆ ಸಿಗುವವರೆಗೂ ಮುಷ್ಕರ ಕೈಬಿಡುವುದಿಲ್ಲ’ ಎಂದು ತಿಳಿಸಿದರು.

‘ಅರಣ್ಯ ಸಚಿವರು ಬೇಡಿಕೆ ಈಡೇರಿಸಲು ಸ್ಪಂದಿಸಿದರೂ ಇಲಾಖೆಯ ಹಿರಿಯ ಅಧಿಕಾರಿಗಳು ಅಡ್ಡಗಾಲು ಹಾಕಿದ್ದಾರೆ’ ಎಂದು ಸಂಘದ ಅಧ್ಯಕ್ಷ ಎ.ಎಂ. ನಾಗರಾಜು ದೂರಿದರು.

‘ಮೊದಲು ಕ್ಷೇಮಾಭಿವೃದ್ಧಿ ಅಧಿನಿಯಮದಡಿ ಹಂಗಾಮಿ ನೌಕರರಿಗೆ ವೇತನ ಹಾಗೂ ಸೌಲಭ್ಯ ನೀಡಲಾಗುತ್ತಿತ್ತು. 2017ರಲ್ಲಿ ಬದಲಾಯಿಸಿ ಟೆಂಡರ್ ಕರೆದು ಏಜೆನ್ಸಿಗಳಿಂದ ನೌಕರರಿಗೆ ವೇತನ ನೀಡಲಾಗುತ್ತಿದೆ. ಈ ವ್ಯವಸ್ಥೆಯಿಂದ ನಿಯಮಿತವಾಗಿ ವೇತನ ಸಿಗುತ್ತಿಲ್ಲ, ಸೌಲಭ್ಯ ಪಡೆಯುವುದು ಕಷ್ಟವಾಗಿದೆ’ ಎಂದು ತಿಳಿಸಿದರು.

‘ಹಿಂದೆ ಪ್ರತಿಭಟನೆ ನಡೆಸಿದ ನಂತರ ಬೇಡಿಕೆಗಳ ಈಡೇರಿಕೆಗೆ ಸಮಿತಿ ರಚನೆ ಮಾಡಿದರೂ ಪ್ರಯೋಜನವಾಗಿಲ್ಲ. ಏ.1 ರಿಂದ ಮುಂದಿನ ಒಂದು ವರ್ಷದ ಗುತ್ತಿಗೆ ಕರಾರಿಗೆ ಇಲಾಖೆ ತಯಾರಿ ಮಾಡಿಕೊಳ್ಳಲಾಗುತ್ತಿದ್ದು ಅಷ್ಟರೊಳಗೆ ನೌಕರರ ಬೇಡಿಕೆಗಳು ಈಡೇರಿಸಬೇಕು. ಬೇಸಿಗೆಯ ಸಂದರ್ಭ ಅರಣ್ಯದೊಳಗೆ ಅನಾಹುತಗಳಾದರೆ ಹಿರಿಯ ಅಧಿಕಾರಿಗಳು ನೇರ ಹೊಣೆಗಾರರಾಗಬೇಕಾಗುತ್ತದೆ ಎಂದು ಸಂಘದ ಉಪಾಧ್ಯಕ್ಷ ಎಸ್.ಎಸ್. ಹರೀಶ್ ತಿಳಿಸಿದ್ದಾರೆ.

ಉತ್ತರಕನ್ನಡ, ಬಳ್ಳಾರಿ, ಶಿವಮೊಗ್ಗ, ದಾವಣಗೆರೆ, ವಿಜಯಪುರ, ಚಿಕ್ಕಮಗಳೂರು, ಕೊಡಗು, ಮೈಸೂರು ಜಿಲ್ಲೆಗಳ ವನ್ಯಜೀವಿ ವಿಭಾಗಗಳ ಹಂಗಾಮಿ ನೌಕರರು ಭಾಗವಹಿಸಿದ್ದರು.

ಬಂಜಾರ: ವರದಕ್ಷಿಣೆಗೆ ಕಡಿವಾಣ

ಗಜೇಂದ್ರಗಡ: 17 ತಾಂಡಾಗಳ ಹಿರಿಯರ ನಿರ್ಧಾರ– ಠರಾವು

ಪ್ರಜಾವಾಣಿ ವಾರ್ತೆ

ಗಜೇಂದ್ರಗಡ ಸಮೀಪದ ಕಾಲಕಾಲೇಶ್ವರ ದೇವಸ್ಥಾನದ ಆವರಣದಲ್ಲಿ ನಡೆದ ಸಭೆಯಲ್ಲಿ ವ್ಯಕ್ತಿಯೊಬ್ಬರು ನಿರ್ಣಯಗಳ ಠರಾವು ಓದಿದರು. ತಾಂಡಾಗಳ ಪ್ರಮುಖರು ಹಾಜರಿದ್ದರು

ಗಜೇಂದ್ರಗಡ (ಗದಗ ಜಿಲ್ಲೆ): ತಾಲ್ಲೂಕಿನ 17 ತಾಂಡಾಗಳ ನಾಯಕರು ಇಲ್ಲಿನ ಕಾಲಕಾಲೇಶ್ವರ ದೇವಸ್ಥಾನದ ಆವರಣದಲ್ಲಿ ಬುಧವಾರ ನಡೆದ ಸಭೆಯಲ್ಲಿ ವರದಕ್ಷಿಣೆ ಕೊಡುವುದು, ತೆಗೆದುಕೊಳ್ಳುವುದಕ್ಕೆ ಕಡಿವಾಣ ಹಾಕುವ ನಿರ್ಧಾರ ಕೈಗೊಂಡು ಠರಾವು ಮಾಡಿದರು.

ವರದಕ್ಷಿಣೆಯಿಂದಾಗಿ ಹೆಣ್ಣು ಹೆತ್ತವರು ಶೋಷಣೆಗೆ ಒಳಗಾಗುತ್ತಿದ್ದು, ಅಲ್ಲದೇ ಚಿನ್ನದ ಬೆಲೆಯೂ ಏರಿಕೆಯಾಗಿದೆ. ಸಮುದಾಯದ ಬಡವರು ಮಕ್ಕಳ ಮದುವೆ ಮಾಡುವಲ್ಲಿ ಆರ್ಥಿಕ ಸಂಕಷ್ಟಕ್ಕೆ ಒಳಗಾಗುತ್ತಿದ್ದಾರೆ. ವರದಕ್ಷಿಣೆ ಎಂಬ ಸಾಮಾಜಿಕ ಪಿಡುಗನ್ನು ನಿವಾರಿಸುವ ಉದ್ದೇಶದಿಂದ ಬಂಜಾರ ಸಮಾಜದ ಹಿರಿಯರು ಈ ನಿರ್ಣಯ ಕೈಗೊಂಡರು.

ವರದಕ್ಷಿಣೆ ತೆಗೆದುಕೊಳ್ಳುವಂತಿಲ್ಲ, ಮದುವೆಗೆ ದುಂದು ವೆಚ್ಚ ಮಾಡುವಂತಿಲ್ಲ. ತಾಳಿಗುಂಡು 5 ಗ್ರಾಂ. ಒಳಗಿರಬೇಕು, ಮದ್ಯ ಹಾಗೂ ಡಿಜೆ ನಿಷೇಧ, ಜೀವನೋಪಾಯಕ್ಕೆ ವರದಕ್ಷಿಣೆ ಪದ್ಧತಿ ಇರಲಿಲ್ಲ. ಇತ್ತೀಚಿನ ದಿನಗಳಲ್ಲಿ ಇದು ಪಿಡುಗಾಗಿದೆ. ಈ ಠರಾವಿನಿಂದ ಬಡ ಕುಟುಂಬಗಳಿಗೆ ಹಾಗೂ ಹೆಣ್ಣು ಹೆತ್ತವರಿಗೆ ಅನುಕೂಲವಾಗಲಿದೆ. ಸಾಮರಸ್ಯವೂ ಹೆಚ್ಚಲಿದೆ’ ಎಂದು ಸಮುದಾಯದ ಮುಖಂಡ ತಾರಾಸಿಂಗ್ ರಾಠೋಡ ಹೇಳಿದರು.

ಗಜೇಂದ್ರಗಡ ಹಾಗೂ ಸುತ್ತಮುತ್ತಲಿನ ತಾಂಡಾಗಳಾದ ಜನತಾ ಪ್ಲಾಟ್, ರಾಜೂರ, ದಿಂಡೂರ, ಲಕ್ಕಲಕಟ್ಟಿ, ಭೈರಾಪುರ, ನೆಲ್ಲೂರ, ಸರ್ಜಾಪುರ, ರುದ್ರಾಪುರ, ಅಮರಗಟ್ಟಿ, ಕೊಡಗಾನೂರ, ಬೆಣಚಮಟ್ಟಿ, ಗೌಡಗೇರಿ, ನಾಗರಸಕೊಪ್ಪ ತಾಂಡಾಗಳ ನಾಯಕರು ಸಭೆಯಲ್ಲಿ ಭಾಗವಹಿಸಿದ್ದರು.

ಪಿಡಿಓ ಸಂಘ: ದಿಲೀಪ್ ಕುಮಾರ್ ಅಧ್ಯಕ್ಷ

ಪ್ರಜಾವಾಣಿ ವಾರ್ತೆ

ದಿಲೀಪ್ ಕುಮಾರ್

ಬೆಂಗಳೂರು: ಕರ್ನಾಟಕ ರಾಜ್ಯ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ (ಪಿಡಿಓ) ಕ್ಷೇಮಾಭಿವೃದ್ಧಿ ಸಂಘದ ನೂತನ ಅಧ್ಯಕ್ಷರಾಗಿ ಬಿ.ಎಂ. ದಿಲೀಪ್ ಕುಮಾರ್ ಚುನಾಯಿತರಾಗಿದ್ದಾರೆ.

ಇದೇ ಏಪ್ರಿಲ್ 19ರಂದು ನಡೆದ ಚುನಾವಣೆಯಲ್ಲಿ ಉಪಾಧ್ಯಕ್ಷರಾಗಿ ರಿಯಾಜ್ ಕೆ. ಖಲೇಬ ಮತ್ತು ದೀಪಾ. ಎನ್ ಆಯ್ಕೆಯಾಗಿದ್ದಾರೆ. ಉಪ ವಿಭಾಗವಾರು ಉಪಾಧ್ಯಕ್ಷ ರಾಗಿ ಅಂಜಿನಪ್ಪ ಆರ್. (ಬೆಂಗಳೂರು), ಚೇತನ್ ಎಚ್. ಎಂ. (ಮೈಸೂರು), ಬಸವರಾಜ ಎನ್. (ಕಲಬುರಗಿ), ಸಿದ್ಧಾರ್ಥ ಗೋಕೆ (ಬೆಳಗಾವಿ), ಅನುಪಮಾ ಎಂ. (ಕಲಬುರಗಿ), ಕಾತ್ಯಾಯಿನಿ ಎಂ.ಕೆ. (ಬೆಂಗಳೂರು), ವಸಂತ ಎನ್. (ಮೈಸೂರು) ಮತ್ತು ಶಿವಲೀಲಾ ಅಂಗಡಿ (ಬೆಳಗಾವಿ) ಅವರು ಚುನಾಯಿತರಾಗಿದ್ದಾರೆ.

ನೂತನ ಪದಾಧಿಕಾರಿಗಳು ಮುಂದಿನ ಮೂರು ವರ್ಷಗಳವರೆಗೆ ಕಾರ್ಯನಿರ್ವಹಿಸಲಿದ್ದಾರೆ ಎಂದು ಸಂಘದ ಪ್ರಕಟಣೆ ತಿಳಿಸಿದೆ.

ದಾವಣಗೆರೆ: ಕಾಂಗ್ರೆಸ್‌ನಿಂದ ಮತ್ತೆ ಐವರ ಉಚ್ಚಾಟನೆ

ಪ್ರಜಾವಾಣಿ ವಾರ್ತೆ

ದಾವಣಗೆರೆ: ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಪಕ್ಷ ವಿರೋಧಿ ಚಟುವಟಿಕೆ ನಡೆಸಿದ ಆರೋಪದ ಮೇರೆಗೆ ಇನ್ನೂ ಐವರು ಸ್ಥಳೀಯ ಮುಖಂಡರನ್ನು ಉಚ್ಚಾಟಿಸುವ ನಿರ್ಣಯ ಕೈಗೊಳ್ಳಲಾಗಿದ್ದು, ಇದನ್ನು ಕೆಪಿಸಿಸಿ ಶಿಸ್ತುಪಾಲನಾ ಸಮಿತಿಗೂ ಕಳುಹಿಸಲಾಗಿದೆ ಎಂದು ಕಾಂಗ್ರೆಸ್ ಜಿಲ್ಲಾ ಘಟಕದ ಅಧ್ಯಕ್ಷ ಎಚ್.ಬಿ. ಮಂಜಪ್ಪ ತಿಳಿಸಿದರು.

‘ಕ್ಷೇತ್ರ ವ್ಯಾಪ್ತಿಯ ಕಾಂಗ್ರೆಸ್ ಮುಖಂಡರಾದ ಸಿರಾಜ್ ಅಹ್ಮದ್, ಘನಿ ತಾಹೀರ್, ಕಡತಿ ತಿಪ್ಪೇಶ್, ಮನ್ಸೂರ್ ಅಲಿ ಹಾಗೂ ಇನಾಯತ್ ಉಲ್ಲಾ ಖಾನ್ ಅವರನ್ನು ಪಕ್ಷದಿಂದ 6 ವರ್ಷ ಉಚ್ಚಾಟಿಸಿ ಜಿಲ್ಲಾ ಸಮಿತಿ ತೀರ್ಮಾನ ಕೈಗೊಂಡಿದೆ’ ಎಂದು ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

‘ಪಕ್ಷ ವಿರೋಧಿ ಚಟುವಟಿಕೆ ನಡೆಸಿ ಕಾಂಗ್ರೆಸ್‌ನಿಂದ ಉಚ್ಚಾಟನೆಗೊಂಡಿರುವ ವಿಧಾನಪರಿಷತ್ ಸದಸ್ಯ ಕೆ. ಅಬ್ದುಲ್ ಜಬ್ಬಾರ್ ಅವರನ್ನು ಪಕ್ಷಕ್ಕೆ ಮರಳಿ ಕರೆತರುವ ಹುನ್ನಾರ ನಡೆಯುತ್ತಿದೆ. ಇದಕ್ಕೆ ಹೈಕಮಾಂಡ್ ಅವಕಾಶ ನೀಡಬಾರದು’ ಎಂದು ಮಂಜಪ್ಪ ಒತ್ತಾಯಿಸಿದರು.

ದಕ್ಷಿಣ ಕ್ಷೇತ್ರದ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಯೂಬ್ ಪೈಲ್ವಾನ್ ಮಾತನಾಡಿ, ‘ಅಬ್ದುಲ್ ಜಬ್ಬಾರ್ ಅವರನ್ನು ವಿಧಾನಪರಿಷತ್ ಸದಸ್ಯ ಸ್ಥಾನದಿಂದಲೂ ವಜಾಗೊಳಿಸಬೇಕು. ಅವರು ಪಕ್ಷಕ್ಕೆ ಮರಳಲು ಅವಕಾಶ ಕಲ್ಪಿಸಿದರೆ ಕೆಪಿಸಿಸಿ ಕಚೇರಿ ಎದುರು ಪ್ರತಿಭಟನೆ ನಡೆಸಲಾಗುವುದು’ ಎಂದರು.

ಬುದ್ಧ ಪೂರ್ಣಿಮೆ

ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

ಬುದ್ಧ ಪೂರ್ಣಿಮೆ ಅಂಗವಾಗಿ ಕಲಬುರಗಿ ಹೈಕೋರ್ಟ್ ಪೀಠದ ಬಳಿ ಅಲ್ತಾಫ್ ಆರ್ಟ್ ಸ್ಟುಡಿಯೊದಲ್ಲಿ ಗುರುವಾರ ಬುದ್ಧನ ಪ್ರತಿಮೆಗಳನ್ನು ಕಾರ್ಮಿಕರೊಬ್ಬರು ಸ್ವಚ್ಛಗೊಳಿಸಿದರು

ಕಟ್ಟಡ ಕಾರ್ಮಿಕರ ಮಕ್ಕಳಿಗೆ ಶಾಲಾ ಕಿಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಮಕ್ಕಳಿಗಾಗಿ ಪುಸ್ತಕಗಳು ಮತ್ತು ಲೇಖನ ಸಾಮಗ್ರಿಗಳನ್ನು ಒಳಗೊಂಡಿರುವ ಕಿಟ್ ಒದಗಿಸುವ ₹115.84 ಕೋಟಿ ವೆಚ್ಚದ ಯೋಜನೆಗೆ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

2026-27 ನೇ ಸಾಲಿಗೆ 1 ರಿಂದ 5 ನೇ ತರಗತಿ, 6 ರಿಂದ 8 ನೇ ತರಗತಿ, 9 ರಿಂದ 12 ನೇ ತರಗತಿ ಮಕ್ಕಳಿಗೆ ಈ ಕಿಟ್ ಒದಗಿಸಲಾಗುವುದು. ಎಂಎಸ್ ಐಎಲ್‌ನಿಂದ ಈ ಕಿಟ್‌ಗಳನ್ನು ಖರೀದಿಸಲಾಗುವುದು. ಪ್ರತಿ ಕಿಟ್‌ನ ಮೌಲ್ಯ ₹8625 ಎಂದು ಕಾನೂನು ಸಚಿವ ಎಚ್.ಕೆ.ಪಾಟೀಲ ತಿಳಿಸಿದರು.

ಕೈಬಿಟ್ಟ ಅತಿಥಿಗಳಿಗೆ ‘ಶೈಕ್ಷಣಿಕ ಸಂಯೋಜಕ’ ಹುದ್ದೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು, ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ನಿಗದಿಪಡಿಸಿದ ಅರ್ಹತೆಗಳನ್ನು ಹೊಂದಿಲ್ಲದ ಕಾರಣ ಕೆಲಸ ಕಳೆದುಕೊಂಡಿದ್ದ ಅತಿಥಿ ಉಪನ್ಯಾಸಕರನ್ನು ‘ಶೈಕ್ಷಣಿಕ ಸಂಯೋಜಕ’ ಹುದ್ದೆಗೆ ನೇಮಕ ಮಾಡಿಕೊಳ್ಳಲು ಉನ್ನತ ಶಿಕ್ಷಣ ಇಲಾಖೆ ಆದೇಶ ಹೊರಡಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಉನ್ನತ ಶಿಕ್ಷಣ ಸಚಿವ ಎಂ.ಸಿ. ಸುಧಾಕರ್, ಯುಜಿಸಿ ಅರ್ಹತೆ ಇಲ್ಲದ ಅತಿಥಿ ಉಪನ್ಯಾಸಕರಿಗೆ ಕೆಲಸದ ಭದ್ರತೆ ಒದಗಿಸಲು ಹೊಸ ಹುದ್ದೆಗಳನ್ನು ಸೃಷ್ಟಿಸಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರೊಂದಿಗೆ ಚರ್ಚಿಸಿ ಪರಿಹಾರ ಕಂಡುಕೊಳ್ಳಲಾಗಿದೆ. ಐದು ವರ್ಷ ಪೂರೈಸಿದ ಎಲ್ಲ ಅತಿಥಿ ಉಪನ್ಯಾಸಕರಿಗೂ ನೇಮಕ ಆದೇಶ ನೀಡಲಾಗುವುದು. 3,853 ಅತಿಥಿ ಉಪನ್ಯಾಸಕರಿಗೆ ಪ್ರಯೋಜನವಾಗಲಿದೆ. 2026-27ನೇ ಸಾಲಿನಿಂದಲೇ ಅವರು ಕೆಲಸಕ್ಕೆ ಹಾಜರಾಗುತ್ತಾರೆ ಎಂದರು.

ಶೈಕ್ಷಣಿಕ ಸಂಯೋಜಕರಾಗಿ ನೇಮಕವಾದವರು ಪ್ರಯೋಗಾಲಯ, ಪರೀಕ್ಷಾ ಕಾರ್ಯ, ಗ್ರಂಥಾಲಯ, ಮಾಹಿತಿ ತಂತ್ರಜ್ಞಾನ, ವಿದ್ಯಾರ್ಥಿ ಮಾರ್ಗದರ್ಶನ ಸೇರಿದಂತೆ ವಿವಿಧ ಆಡಳಿತಾತ್ಮಕ ಮತ್ತು ಶೈಕ್ಷಣಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲಿದ್ದಾರೆ. ಅತಿಥಿ ಉಪನ್ಯಾಸಕರಿಗೆ ನೀಡಲಾಗುತ್ತಿದ್ದ ಸೌಲಭ್ಯಗಳನ್ನೇ ಇವರಿಗೂ ವಿಸ್ತರಿಸಲಾಗುತ್ತದೆ. ಮೂರು ವರ್ಷಗಳ ಅವಧಿ ನಿಗದಿ ಮಾಡಲಾಗಿದೆ. ವರ್ಷಕ್ಕೆ ₹95 ಕೋಟಿ ಹೆಚ್ಚುವರಿ ಆರ್ಥಿಕ ಹೊರೆಯಾಗಲಿದೆ. ಒಂದರಿಂದ ಐದು ವರ್ಷದ ಅನುಭವ ಹೊಂದಿರುವವರಿಗೆ ಯುಜಿಸಿ ವಿದ್ಯಾರ್ಹತೆ ಪಡೆಯಲು ಸರ್ಕಾರವೇ ಸಹಾಯ ಒದಗಿಸಲಾಗುತ್ತದೆ ಎಂದು ಅವರು ಮಾಹಿತಿ ನೀಡಿದರು.

ಅನುಭವ	ಗೌರವ ಸಂಭಾವನೆ
5ರಿಂದ 10 ವರ್ಷ	₹28,000
10ರಿಂದ 15 ವರ್ಷ	₹29,000
15 ವರ್ಷಕ್ಕಿಂತ ಹೆಚ್ಚು	₹30,000

ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಬೋಧಕರಾಗಿ ಕೆಲಸ ಮಾಡುವವರು ಸ್ನಾತಕೋತ್ತರ ಪದವಿಯ ಜತೆಗೆ ರಾಷ್ಟ್ರೀಯ ಅರ್ಹತಾ ಪರೀಕ್ಷೆ (ಎನ್‌ಇಟಿ) ಇಲ್ಲವೇ ಕರ್ನಾಟಕ ರಾಜ್ಯ ಅರ್ಹತಾ ಪರೀಕ್ಷೆ (ಕೆ-ಸೆಟ್) ತೇರ್ಗಡೆಯಾಗಿರಬೇಕು, ಪಿಎಚ್.ಡಿ ಪಡೆದಿರಬೇಕು ಎಂದು ಯುಜಿಸಿ ನಿಯಮವನ್ನು ಹೈಕೋರ್ಟ್ ಎತ್ತಿಹಿಡಿದ ನಂತರ 5,068 ಅತಿಥಿ ಉಪನ್ಯಾಸಕರು ಕೆಲಸ ಕಳೆದುಕೊಂಡಿದ್ದರು. ಕೆಲಸ ವಿಷಯಗಳಲ್ಲಿ ಯುಜಿಸಿ ಅರ್ಹತೆ ಇರುವವರು ಲಭ್ಯವಿಲ್ಲದ ಕಾರಣ 1,215 ಅಭ್ಯರ್ಥಿಗಳಿಗೆ ಅವಕಾಶ ಸಿಕ್ಕಿತ್ತು. ಉಳಿದ 3,853 ಅತಿಥಿ ಉಪನ್ಯಾಸರನ್ನು ಹೊಸ ಹುದ್ದೆಗೆ ಪರಿಗಣಿಸಲಾಗುತ್ತಿದೆ.

20 ಜಿಲ್ಲೆಗಳಲ್ಲಿ ಮುಂದಿನ ವಾರ ಮಳೆ ಮುನ್ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಹಲವೆಡೆ ಮುಂದಿನ ಒಂದು ವಾರ ಮಳೆಯಾಗುವ ಸಾಧ್ಯತೆಯ ಬಗ್ಗೆ ಮುನ್ಸೂಚನೆ ನೀಡಿರುವ ಹವಾಮಾನ ಇಲಾಖೆ, ಶುಕ್ರವಾರ ಐದು ಜಿಲ್ಲೆಗಳಿಗೆ ‘ಆರೆಂಜ್ ಅಲರ್ಟ್’ ಹಾಗೂ ಹದಿನೈದು ಜಿಲ್ಲೆಗಳಿಗೆ ‘ಯೆಲ್ಲೊ ಅಲರ್ಟ್’ ಘೋಷಿಸಿದೆ.

ಚಿಕ್ಕಮಗಳೂರು, ಹಾಸನ, ಕೊಡಗು, ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಗೆ ‘ಆರೆಂಜ್ ಅಲರ್ಟ್’ ನೀಡಲಾಗಿದೆ. ಈ ಜಿಲ್ಲೆಗಳ ಕೆಲವೆಡೆ ಬಿರುಗಾಳಿಯೊಂದಿಗೆ ಭಾರಿ ಮಳೆಯಾಗುವ ಸಂಭವವಿದೆ. ಆಲಿಕಲ್ಲು ಬೀಳುವ ಸಾಧ್ಯತೆಯಿದೆ.

ಕಲಬುರಗಿ, ಯಾದಗಿರಿ, ರಾಯಚೂರು, ಬಳ್ಳಾರಿ, ವಿಜಯನಗರ, ದಾವಣಗೆರೆ, ಶಿವಮೊಗ್ಗ, ದಕ್ಷಿಣ ಕನ್ನಡ, ಚಿತ್ರದುರ್ಗ, ತುಮಕೂರು, ಮಂಡ್ಯ, ಬೆಂಗಳೂರು ದಕ್ಷಿಣ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರ ಜಿಲ್ಲೆಗೆ ‘ಯೆಲ್ಲೊ ಅಲರ್ಟ್’ ನೀಡಲಾಗಿದ್ದು, ಈ ಜಿಲ್ಲೆಗಳಲ್ಲಿ ಸಾಧಾರಣ ಮಳೆಯಾಗುವ ಸಂಭವವಿದೆ.

ಮುನ್ಸೂಚನೆ ನೀಡಲಾದ ಜಿಲ್ಲೆಗಳಲ್ಲಿ ಮೇ 7ರವರೆಗೂ ಒಂದು ಅಥವಾ ಎರಡು ಸ್ಥಳಗಳಲ್ಲಿ ಮಳೆಯಾಗುವ ಸಾಧ್ಯತೆಯಿದೆ. ಮೇ 1ರಿಂದ ಐದು ದಿನ ತಾಪಮಾನದಲ್ಲಿ ದೊಡ್ಡ ಬದಲಾವಣೆಯಿಲ್ಲ ಎಂದು ಇಲಾಖೆ ತಿಳಿಸಿದೆ.

ವೇತನ ಸಹಿತ ಮುಟ್ಟಿನ ರಜೆಗೆ ಕಾನೂನು: ಎಜಿ ಶಶಿಕಿರಣ ಶೆಟ್ಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಾರ್ಮಿಕ ಕಾಯ್ದೆಗಳಡಿ ನೋಂದಣಿಯಾಗಿರುವ ಉದ್ದಿಮೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮಹಿಳಾ ನೌಕರರಿಗೆ ಅವರ ಮುಟ್ಟಿನ ಸಮಯದಲ್ಲಿ ತಿಂಗಳಲ್ಲಿ ಒಂದು ದಿನದ ವೇತನ ಸಹಿತ ರಜೆ ನೀಡುವುದಕ್ಕೆ ಸಂಬಂಧಿಸಿದಂತೆ ಕಾನೂನು ಜಾರಿಗೆ ತರಲು ಪರಿಶೀಲಿಸಲಾಗುತ್ತಿದೆ’ ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ತಿಳಿಸಿದೆ.

ಸರ್ಕಾರದ ಅಧಿಸೂಚನೆ ಪ್ರಶ್ನಿಸಿ, ‘ಬೆಂಗಳೂರು ಹೋಟೆಲ್‌ಗಳ ಸಂಘ’ದ ಅಧ್ಯಕ್ಷ ಎಚ್.ಎಸ್.ಸುಬ್ರಹ್ಮಣ್ಯ ಸೇರಿದಂತೆ ಇತರರು ಸಲ್ಲಿಸಿರುವ ಅರ್ಜಿಗಳನ್ನು ನ್ಯಾಯಮೂರ್ತಿ ಅನಂತ ರಾಮನಾಥ ಹೆಗಡೆ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿದರು.

ವಿಚಾರಣೆ ವೇಳೆ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ, ‘ಮುಟ್ಟಿನ ರಜೆ ಸಮಸ್ಯೆಯನ್ನು ಪರಿಹರಿಸಲು ಕಾನೂನು ರೂಪಿಸುವ ಬಗ್ಗೆ ಸರ್ಕಾರ ಗಂಭೀರ ಪರಿಶೀಲನೆ ನಡೆಸುತ್ತಿದೆ. ಆದಾಗ್ಯೂ, ಅರ್ಜಿಯನ್ನು ಬೇಸಿಗೆ ರಜೆಯ ನಂತರ ವಿಚಾರಣೆಗೆ ನಿಗದಿಪಡಿಸಬೇಕು’ ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದರು. ಇದನ್ನು ಪರಿಗಣಿಸಿದ ಪೀಠವು ವಿಚಾರಣೆ ಮುಂದೂಡಿ ಆದೇಶಿಸಿತು.

ಅಬಕಾರಿ ನೀತಿ: ಸಲಹೆ ಆಹ್ವಾನ

ಬೆಂಗಳೂರು: ರಾಜ್ಯ ಸರ್ಕಾರವು ಜಾರಿಗೆ ತರಲು ಮುಂದಾಗಿರುವ ನೂತನ ಅಬಕಾರಿ ನೀತಿ

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75
ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ

ಸುಭಾಷಿತ

ಪಾಪದಿಂದ ಪಾರಾಗಲು ಸಾವಿನ ನೆನಪನ್ನೂ ಸದಾ
ಇಟ್ಟುಕೊಂಡಿರುವುದೇ ಶ್ರೇಷ್ಠ ಉಪಾಯ.

-ವಿನೋಬಾ ಭಾವೆ

ಸಂಪಾದಕೀಯ

ಮಹಾನಗರಕ್ಕೆ ಮಳೆಯೂ ಭಾರ ವ್ಯವಸ್ಥೆ ನಿರ್ಲಕ್ಷ್ಯ, ಶ್ರೀಸಾಮಾನ್ಯ ತತ್ತರ

ಬೆಂಗಳೂರಿನ ಏದುಬ್ಬಸಕ್ಕೆ ಕಾರಣವಾಗುವಂತಿರುವ ನಗರ ಯೋಜನೆಯ ದುರವಸ್ಥೆ ಮತ್ತು ಮೂಲ ಸೌಕರ್ಯಗಳನ್ನು ಸಮರ್ಪಕವಾಗಿ ನಿರ್ವಹಿಸುವಲ್ಲಿನ ಅಧಿಕಾರಿಗಳ ವೈಫಲ್ಯವು ಬುಧವಾರ (ಏಪ್ರಿಲ್ 29) ಸಂಜೆ ಸುರಿದ ಮಳೆಯಿಂದಾಗಿ ಮತ್ತೊಮ್ಮೆ ಬಹಿರಂಗಗೊಂಡಿದೆ. ಬೇಸಿಗೆಯ ತೀವ್ರತೆಯಿಂದ ಕಂಗೆಟ್ಟಿದ್ದ ರಾಜಧಾನಿಯ ನಾಗರಿಕರಿಗೆ ಅನಿರೀಕ್ಷಿತ ಮಳೆ ಸಂತಸ ತಂದಿತಾದರೂ, ಆ ಸಂಭ್ರಮವನ್ನು ಹತ್ತು ನಾಗರಿಕರ ಸಾವಿನ ಸುದ್ದಿಯ ಸಂಕಟ ಹಿಂಬಾಲಿಸಿತು. ಶಿವಾಜಿನಗರ ಬಸ್ ನಿಲ್ದಾಣದ ಮುಂಭಾಗದಲ್ಲಿರುವ ಬೌರಿಂಗ್ ಆಸ್ಪತ್ರೆಯ ಕಾಂಪೌಂಡ್ ಗೋಡೆ ಕುಸಿದು ಏಳು ಜನರು ಜೀವ ಕಳೆದುಕೊಂಡಿದ್ದಾರೆ. ಯಾರಬ್ ನಗರ ಹಾಗೂ ಬನ್ನೇರುಘಟ್ಟ ರಸ್ತೆಯ ವೇಗಾ ಸಿಟಿ ಮಾಲ್ ಬಳಿ ಮಳೆಯ ಸಮಯದಲ್ಲಿ ವಿದ್ಯುತ್ ಆಘಾತಕ್ಕೊಳಗಾಗಿ ಇಬ್ಬರು ಮೃತಪಟ್ಟಿದ್ದಾರೆ. ಚಾಮರಾಜಪೇಟೆಯಲ್ಲಿ ಮತ್ತೊಬ್ಬರು ಮಳೆಯ ಅವಘಡಕ್ಕೆ ಬಲಿಯಾಗಿದ್ದಾರೆ. ಕೆಲವೇ ಸಮಯದ ಮಳೆಗೆ ಜೀವಹಾನಿ ಸಂಭವಿಸುವುದು, ರಸ್ತೆಗಳು ಹೊಳೆಗಳ ಸ್ವರೂಪ ಪಡೆದುಕೊಳ್ಳುವುದು, ಸಂಚಾರ ವ್ಯವಸ್ಥೆ ಅಸ್ತವ್ಯಸ್ತಗೊಳ್ಳುವುದು, ಗೋಡೆಗಳು ಕುಸಿಯುವುದು, ಮನೆ-ಮಳಿಗೆಗಳಿಗೆ ನೀರು ನುಗ್ಗುವುದು ಬೆಂಗಳೂರಿನಲ್ಲಿ ಸಾಮಾನ್ಯ ಎನ್ನುವಂತಾಗಿದೆ. ಈ ಪರಿಸ್ಥಿತಿ ಬಹುತೇಕ ಸಂದರ್ಭಗಳಲ್ಲಿ ಮಳೆಯ ರೌದ್ರರೂಪದ ಪರಿಣಾಮವಾಗಿರದೆ, ಆಡಳಿತದ ಹೊಣೆಗೇಡಿತನದ ಫಲಶ್ರುತಿ ಆಗಿರುವುದೇ ಹೆಚ್ಚು. ಮಳೆಯನ್ನು ಸಂತೋಷದಿಂದ ಅನುಭವಿಸಬೇಕಾದ ನಾಗರಿಕರು, ಮಳೆಯ ಬಗ್ಗೆ ಆತಂಕಪಡುವ ಸ್ಥಿತಿ ಉಂಟಾಗಿರುವುದರ ಹಿಂದೆ ಸರ್ಕಾರದ ಹೊಣೆಗೇಡಿತನ ಹಾಗೂ ಅಧಿಕಾರಿಗಳ ಭ್ರಷ್ಟತೆ, ನಿರ್ಲಕ್ಷ್ಯ ಎದ್ದುಕಾಣುವಂತಿದೆ.

ಮಳೆ ಬಂದಾಗ ಸಂಭ್ರಮಿಸುವ ಬದಲು ಆತಂಕ ಪಡುವ ಸ್ಥಿತಿ ಬೆಂಗಳೂರು ಜನರದ್ದಾಗಿದೆ. ಇಂಥ ಅಸಹಜ ಸ್ಥಿತಿಯನ್ನು ಸರ್ಕಾರ ಹಾಗೂ ಅಧಿಕಾರಿವರ್ಗ ಒಟ್ಟಾಗಿ ನಾಗರಿಕರ ಮೇಲೆ ಹೇರಿವೆ.

ಬೆಂಗಳೂರು ಮಹಾನಗರ ಪಾಲಿಕೆ ಹೆಸರನ್ನು 'ಗ್ರೇಟರ್ ಬೆಂಗಳೂರು ಪ್ರಾಧಿಕಾರ' (ಜಿಬಿಎ) ಎಂದು ಕಳೆದ ವರ್ಷ ಬದಲಿಸಲಾಗಿತ್ತು. 'ಜಿಬಿಎ' ಅಧಿಕೃತವಾಗಿ ಅಸ್ತಿತ್ವಕ್ಕೆ ಬಂದು ವರ್ಷ ತುಂಬುತ್ತಿರುವ ಸಂದರ್ಭದಲ್ಲಿ ನಡೆದಿರುವ ದುರಂತ, ಹೆಸರು ಬದಲಾದ ಮಾತ್ರಕ್ಕೆ ನಗರದ ಸ್ವರೂಪ ಬದಲಾಗದು ಎನ್ನುವುದನ್ನು ಸೂಚಿಸುವಂತಿದೆ. ಜಾಗತಿಕ ಐಟಿ ಕೇಂದ್ರಗಳಲ್ಲೊಂದು ಎಂದು ಬೀಗುವ ನಗರದಲ್ಲಿ ಮಳೆನೀರು ನಿರ್ವಹಣೆ ಸಾಧ್ಯವಾಗುತ್ತಿಲ್ಲ ಎನ್ನುವುದು ನಾಚಿಕೆಗೇಡು ಸಂಗತಿ. ನಗರಾಭಿವೃದ್ಧಿಯ ಫಲಾನುಭವಿಗಳು ಶ್ರೀಮಂತರಾಗಿದ್ದು, ಅಡ್ಡ ಪರಿಣಾಮಗಳಿಗೆ ಜನಸಾಮಾನ್ಯರು ತಲೆ ಕೊಡಬೇಕಾದ ವಿರೋಧಾಭಾಸ ಇಲ್ಲಿಯದು. ಮಳೆಯಿಂದ ಸಂಭವಿಸುವ ಅನಾಹುತಗಳಲ್ಲಿ ಜೀವ ಕಳೆದುಕೊಳ್ಳುವ ನತದೃಷ್ಟರು ಬಹುತೇಕ ಸಂದರ್ಭಗಳಲ್ಲಿ ಬಡವರು, ಕೂಲಿ ಕಾರ್ಮಿಕರು ಆಗಿರುತ್ತಾರೆ ಎನ್ನುವುದಕ್ಕೆ ಆಸ್ಪತ್ರೆಯ ಕಾಂಪೌಂಡ್ ಗೋಡೆ ಕುಸಿತದಿಂದ ಸಂಭವಿಸಿದ ದುರಂತ ಹೊಸ ನಿದರ್ಶನದಂತಿದೆ. ಆಸ್ಪತ್ರೆಯ ಕಾಂಪೌಂಡ್ ಬಿದ್ದು ಸಂಭವಿಸಿರುವ ದುರಂತದ ಹಿನ್ನೆಲೆಯಲ್ಲಿ ಆಸ್ಪತ್ರೆಯ ವೈದ್ಯಾಧಿಕಾರಿ ಹಾಗೂ ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ಅಧಿಕಾರಿಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ತರಾಟೆಗೆ ತೆಗೆದುಕೊಂಡಿದ್ದಾರೆ. ಕಾಂಪೌಂಡ್ ಶಿಥಿಲಗೊಂಡಿದ್ದರೂ ಅದನ್ನು ಏಕೆ ತೆರವುಗೊಳಿಸಿಲ್ಲ ಎಂದು ಪ್ರಶ್ನಿಸಿದ್ದಾರೆ. ದುರಂತ ಸಂಭವಿಸಿದ ಸ್ಥಳಕ್ಕೆ ಭೇಟಿ ಕೊಟ್ಟು ಪರಿಹಾರ ಕಾರ್ಯಗಳಿಗೆ ವೇಗ ಕಲ್ಪಿಸುವ ಮೂಲಕ ಮುಖ್ಯಮಂತ್ರಿ ತಮ್ಮ ಕರ್ತವ್ಯವನ್ನು ನಿರ್ವಹಿಸಿದ್ದಾರೆ. ಆದರೆ, ನಗರದ ನಾಗರಿಕ ಸಮಸ್ಯೆಗಳು ಉಲ್ಬಣಗೊಂಡಿರುವುದರಲ್ಲಿ ಸರ್ಕಾರದ ಪಾತ್ರವೂ ಇದೆ. ಜಿಬಿಎ ವ್ಯಾಪ್ತಿಯ ಪಾಲಿಕೆಗಳಿಗೆ ಚುನಾವಣೆ ನಡೆಸುವುದನ್ನು ಮುಂದಕ್ಕೆ ಹಾಕುತ್ತಲೇ ಬರುವ ಮೂಲಕ, ನಾಗರಿಕರ ತಕ್ಷಣದ ಸಮಸ್ಯೆಗಳಿಗೆ ಸ್ಪಂದಿಸುವ ಸ್ಥಳೀಯ ಜನಪ್ರತಿನಿಧಿಗಳೇ ಇಲ್ಲದಂತಾಗಿದೆ. ಸಂಕಷ್ಟದ ಸಮಯದಲ್ಲಿ ಜನರ ಕೈಗೆಟಕುವಂತೆ ಇರುತ್ತಿದ್ದ ಹಾಗೂ ಬಿಕ್ಕಟ್ಟನ್ನು ನಿರ್ವಹಿಸುವ ಉತ್ತರದಾಯಿತ್ವ ಹೊಂದಿರುತ್ತಿದ್ದ ಕಾರ್ಪೊರೇಟರ್‌ಗಳು ಇಲ್ಲದಿರುವ ವ್ಯವಸ್ಥೆಯನ್ನು ಸೃಷ್ಟಿಸಿರುವ ಸರ್ಕಾರ ಪ್ರಜಾಪ್ರಭುತ್ವ ವ್ಯವಸ್ಥೆಯ ಮೂಲ ಆಶಯಗಳನ್ನು ಗಾಳಿಗೆ ತೂರಿದೆ.

ಜೀವ ಕಳೆದುಕೊಂಡವರಿಗೆ ಹಾಗೂ ಗಾಯಾಳುಗಳಿಗೆ ಸರ್ಕಾರ ಪರಿಹಾರ ಘೋಷಿಸಿದೆ. ಅಲ್ಲಿಗೆ ಸರ್ಕಾರದ ಹೊಣೆಗಾರಿಕೆ ಮುಗಿದುಹೋಗಬಾರದು. ಜೀವಕ್ಕೆ ಸುರಕ್ಷಿತವಾದ ವ್ಯವಸ್ಥೆ ಕಲ್ಪಿಸುವುದೇ ನಿಜವಾದ ಹೊಣೆಗಾರಿಕೆ ಎನ್ನುವುದನ್ನು ಸರ್ಕಾರ ಅರ್ಥ ಮಾಡಿಕೊಳ್ಳಬೇಕು. ಬೆಂಗಳೂರಿನ ಎಲ್ಲ ಹಳೆಯ ಕಟ್ಟಡಗಳ ಸುರಕ್ಷತೆಯ ಪರೀಕ್ಷೆ ನಡೆಯಬೇಕಾಗಿದೆ. ಅವಘಡಗಳು ಸಂಭವಿಸಿದ ಸಂದರ್ಭದಲ್ಲಿ ಆಯಾ ಕಟ್ಟಡಗಳನ್ನು ನಿರ್ವಹಿಸುವ ಮುಖ್ಯಸ್ಥರನ್ನು ಹೊಣೆಯಾಗಿಸಬೇಕಾಗಿದೆ. ಮಳೆಗಾಲದ ಆಗಮನಕ್ಕೆ ಮೊದಲೇ ರಾಜಕಾಲುವೆ ಹಾಗೂ ಚರಂಡಿಗಳನ್ನು ಸ್ವಚ್ಛಗೊಳಿಸುವುದು, ಮಳೆ ನೀರು ಹರಿಯುವ ಮಾರ್ಗಗಳನ್ನು ಮುಕ್ತಗೊಳಿಸುವುದು, ರಸ್ತೆ ದುರಸ್ತಿ ಕಾಮಗಾರಿಗಳನ್ನು ಪೂರ್ಣಗೊಳಿಸುವುದು ಜಿಬಿಎ ಹೊಣೆಗಾರಿಕೆ. ಈ ಜವಾಬ್ದಾರಿ ನಿರ್ವಹಿಸಲು ವಿಫಲರಾದ ಅಧಿಕಾರಿಗಳನ್ನು ಗುರ್ತಿಸಿ, ಕಠಿಣ ಕ್ರಮ ಕೈಗೊಳ್ಳದೆ ಹೋದರೆ, ಮಳೆಯೊಂದಿಗೆ ದುರಂತವೂ ಖಚಿತ ಎನ್ನುವುದನ್ನು ಸರ್ಕಾರವೇ ಅಧಿಕೃತಗೊಳಿಸಿದಂತಾಗುತ್ತದೆ.

ನಡಿಗೆ

ಗೆಲುವಿನ ಕ್ರೆಡಿಟ್!

ಪಶ್ಚಿಮ ಬಂಗಾಳದಲ್ಲಿ ಬಿಜೆಪಿಗೆ ಭರ್ಜರಿ ಬಹುಮತ ಬರಲಿದೆ ಎಂದು ಮತದಾನೋತ್ತರ ಸಮೀಕ್ಷೆಗಳು ಹೇಳುತ್ತಿವೆ. ಹಾಗಾದಲ್ಲಿ ಅದರ ಕ್ರೆಡಿಟ್ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರಿಗೆ ಸಲ್ಲಬೇಕು. ಅವರ ಮೇಲೆ ವಿರೋಧ ಪಕ್ಷಗಳು ಮಾಡಿದ ಆರೋಪ ನಿಜ ಎಂದು ಭಾವಿಸಬಹುದು.

ಮುನೀರ್ ಕಾಟಿಪಳ್ಳ, ಸಾಮಾಜಿಕ ಕಾರ್ಯಕರ್ತ, 'ಫೇಸ್‌ಬುಕ್'ನಿಂದ

ಕಿಡಿನುಡಿ

'ದಲಿತ ಮುಖ್ಯಮಂತ್ರಿ' ಎಂದು ಹೇಳುವುದೇ ದಲಿತರಿಗೆ ಮಾಡುವ ಅವಮಾನ. ದಲಿತ ಸಿ.ಎಂ ಅಲ್ಲ, ಆರೂವರೆ ಕೋಟಿ ಕನ್ನಡಿಗರ ಮುಖ್ಯಮಂತ್ರಿಯಾಗಬೇಕು; ದಲಿತ ಎಂಬ ಕಾರಣಕ್ಕೆ ಭಿಕ್ಷೆ ನೀಡಿದಂತೆ ಸಿ.ಎಂ ಹುದ್ದೆ ನೀಡಬೇಕೆ?

ಗೋವಿಂದ ಕಾರಜೋಳ, ಬಿಜೆಪಿ ಸಂಸದ

25 ವರ್ಷಗಳ ಹಿಂದೆ

ಮಂಗಳವಾರ, 1-5-2001

- **ಆಂಧ್ರದ ವಿರುದ್ಧ ಕ್ರಮ: ಚುನಾವಣಾ ನಂತರ ನಿರ್ಧಾರ**

ಬೆಂಗಳೂರು, ಏ. 30- ಸುಪ್ರೀಂ ಕೋರ್ಟ್‌ನ ಆದೇಶ ಉಲ್ಲಂಘಿಸಿ ಕೃಷ್ಣಾ ಕೊಳ್ಳದ ಐದು ಮಹತ್ವದ ನೀರಾವರಿ ಯೋಜನೆಗಳನ್ನು ಮುಂದುವರಿಸಿರುವ ಆಂಧ್ರದ ವಿರುದ್ಧ ಏನು ಕ್ರಮ ತೆಗೆದುಕೊಳ್ಳಬೇಕು ಎಂಬ ಬಗ್ಗೆ ಸ್ಥಳೀಯ ಸಂಸ್ಥೆ ಚುನಾವಣೆಯ ನಂತರ ಸೇರುವ ಸರ್ವಪಕ್ಷಗಳ ಸಭೆಯಲ್ಲಿ ನಿರ್ಧರಿಸಲಾಗುವುದು ಎಂದು ಮುಖ್ಯ ಮಂತ್ರಿ ಎಸ್.ಎಂ. ಕೃಷ್ಣ ತಿಳಿಸಿದರು.

ವರದಿಗಾರರೊಂದಿಗೆ ಮಾತನಾಡಿದ ಅವರು, ತುಮಕೂರು ಜಿಲ್ಲೆ ಶಿರಾ ತಾಲ್ಲೂಕಿನ ಬಿ. ಬ್ಯಾಡರಹಳ್ಳಿ ಕೆರೆಯಿಂದ ಫೀಡರ್ ಕಾಲುವೆ ನಿರ್ಮಿಸುತ್ತಿರುವ ಆಂಧ್ರ ಪ್ರದೇಶ ಸರ್ಕಾರಕ್ಕೆ ಪ್ರತಿಭಟನೆಯ ಪತ್ರ ಬರೆಯಲಾಗಿದೆ ಎಂದು ಹೇಳಿದರು.

- **ಮತದಾರರ ಆಕ್ರೋಶ: ಸಚಿವರ ಪಲಾಯನ**

ಚಿತ್ತಾಪುರ, ಏ. 30- ಚಿತ್ತಾಪುರ ಪುರಸಭೆಯ ಚುನಾವಣೆಗೆ ಕಾಂಗ್ರೆಸ್ ಅಭ್ಯರ್ಥಿಗಳ ಪರ ಪ್ರಚಾರ ಕೈಗೊಂಡಿದ್ದ ಸ್ಥಳೀಯ ಶಾಸಕ ಹಾಗೂ ಮುಜರಾಯಿ ಸಚಿವ ಬಾಬು ರಾವ್ ಚಿಂಚನಸೂರ ಅವರು ಮತದಾರರ ಆಕ್ರೋಶಕ್ಕೆ ಗುರಿಯಾಗಿ ಪಲಾಯನಗೈದ ಘಟನೆ ಚಿತ್ತಾಪುರ ಪಟ್ಟಣದಲ್ಲಿ ನಡೆದಿದೆ.

75 ವರ್ಷಗಳ ಹಿಂದೆ

ಮಂಗಳವಾರ, 1-5-1951

- **ಸ್ವಾತಂತ್ರ್ಯ ಮಾರಿ ಆಹಾರ ಕೊಳ್ಳುವುದಿಲ್ಲ**

ಬುಲಂದಷಹರ್, ಏ. 30- 'ಆಹಾರವನ್ನು ಆಮದು ಮಾಡಿಕೊಳ್ಳುವುದರಲ್ಲಿ ನಮ್ಮ ಗೌರವಕ್ಕೆ ಕುಂದು ತರುವಂಥ ಯಾವ ವಿದೇಶಿ ಸರ್ಕಾರದ ಷರತ್ತುಗಳನ್ನು ಒಪ್ಪಿಕೊಳ್ಳುವಂಥ ನಿರ್ಭಾಗ್ಯ ಸ್ಥಿತಿಯಲ್ಲಿ ಭಾರತವಿಲ್ಲ' ಎಂದು ಪ್ರಧಾನಿ ನೆಹರೂ ಹೇಳಿದಾಗ ಅಪರಿಮಿತ ಜಯಘೋಷವಾಯಿತು.

'ಇಂಥ ಸಮಯದಲ್ಲಿ ಭಾರತವು ಸಂಪೂರ್ಣ ನಿಸ್ಸಹಾಯಕತೆ ತೋರಿ ಹೊರ ರಾಷ್ಟ್ರದ ಔದಾರ್ಯವನ್ನು ಅವಲಂಬಿಸಿದರೆ ತನ್ನ ಸ್ವಾತಂತ್ರ್ಯ ಕಳೆದುಕೊಳ್ಳುತ್ತದೆ. ಈ ಕ್ಷಾಮದ ಭೂತವನ್ನೆದುರಿಸಲು ನಾವು ರಾಷ್ಟ್ರದಾದ್ಯಂತ ಅದ್ಭುತ ಪ್ರಯತ್ನ ಮಾಡಬೇಕು. ಬಿಹಾರ್ ಮತ್ತು ಮದರಾಸ್‌ಗಳಲ್ಲಿನ ಸೋದರರಿಗೆ ನೆರವಾಗಲು ಉಪವಾಸ ಮಾಡ ಬೇಕಾದರೆ ಹಾಗೆ ಮಾಡಲೂ ಸಿದ್ಧ' ಎಂದು ಘೋಷಿಸಿದರು.

ಯುದ್ಧ ಸಾಕು, ಬುದ್ಧ ಬೇಕು!

ವಿಶ್ಲೇಷಣೆ

ಸರ್ಫ್ರಾಜ್ ಚಂದ್ರಗುತ್ತಿ

ವಿಶ್ವವನ್ನೆಲ್ಲ ಆವರಿಸಿರುವ ಯುದ್ಧದ ಕ್ಷೋಭೆಗೆ ಬುದ್ಧಮಾರ್ಗ ಉತ್ತರದಂತಿದೆ. ಬುದ್ಧ, ವ್ಯಕ್ತಿ ಅಥವಾ ಸಂಕೇತವಷ್ಟೇ ಆಗಿರದೆ, ನಮ್ಮ ಪ್ರತಿದಿನದ ಬದುಕಿನಲ್ಲಿ ಹೊಸಹುಟ್ಟು ಪಡೆಯಬೇಕಾದ ಮಾನವೀಯವಾದ ಜೀವನವಿಧಾನ ಆಗಿದ್ದಾನೆ. ಬುದ್ಧ ಮಾರ್ಗದಲ್ಲಿ ನಡೆಯುವುದೆಂದರೆ, ವಿಶ್ವವನ್ನು ಸೌಹಾರ್ದದ ಪಥದಲ್ಲಿ ಕೊಂಡೊಯ್ಯುವುದಾಗಿದೆ.

ಜಗದ ಕರುಣೆಯೆ ಮೈದಳೆದು ಬಂದವ ಬುದ್ಧ. ರೋಹಿಣಿ ನದಿ ನೀರಿನ ವಿವಾದದ ಹಿನ್ನೆಲೆಯಲ್ಲಿ ಹುಟ್ಟಿದ ಕೋಲಿ ಹಾಗೂ ಶಾಕ್ಯರ ನಡುವಿನ ಯುದ್ಧವನ್ನು ತಡೆಯಲು, ಕಿರೀಟ ಸಿಂಹಾಸನಗಳ ಹಂಗನ್ನು ತೊರೆದು ಕಾಡಿಗೆ ನಡೆದವ. ಪ್ರಸ್ತುತ ಅಧಿಕಾರಕ್ಕಾಗಿ ಯುದ್ಧಗಳನ್ನು ಸೃಷ್ಟಿಸುತ್ತಿರುವ ಪ್ರತಿಷ್ಠೆಯ ಪ್ರಭುಗಳಿಗೆ, 'ಇಂದಿನ ತುರ್ತು – ಯುದ್ಧ ಅಲ್ಲ, ಬುದ್ಧ' ಎಂಬ ಸತ್ಯ ಅರಿವಾಗುತ್ತಿಲ್ಲ. ನಿರಂತರ ಯುದ್ಧಗಳ ಮೂಲಕ ಲಕ್ಷಾಂತರ ಜೀವಗಳನ್ನು ಕೊಂದು 'ಚಂಡಾಶೋಕ' ಎಂದು ಹೆಸರಾಗಿದ್ದ ಅಶೋಕ ಚಕ್ರವರ್ತಿಯು ಕಳಿಂಗ ಯುದ್ಧದ ನಂತರ ಬದಲಾಗಲು ಪ್ರೇರಣೆ ನೀಡಿದ್ದು ಬುದ್ಧನ ಮಹಾಕರುಣೆ. ಅಂಗುಲಿಮಾಲನಂತಹ ಕ್ರೂರಿಯ ಹೃದಯವನ್ನು ಪರಿವರ್ತಿಸಿದ್ದು ಬುದ್ಧನ ಮೈತ್ರೀಭಾವ.

ಈ ಲೋಕದಲ್ಲಿ ಯಾವುದೂ ಬೇರೆ ಬೇರೆ ಅಲ್ಲ. ಎಲ್ಲವೂ ಪರಸ್ಪರ ಅವಲಂಬಿ. ವಿಶ್ವವೇ ಒಂದು ಸರಪಳಿ, ಅದು ಎಂದಿಗೂ ತುಂಡಾಗುವುದಿಲ್ಲ ಎನ್ನುವುದು ಬುದ್ಧ ತೋರಿದ ಅರಿವು. ಜಾತಿಯಿಲ್ಲ, ಅಸಮಾನತೆಯಿಲ್ಲ, ಶ್ರೇಷ್ಠತೆಯಿಲ್ಲ, ಕನಿಷ್ಠತೆಯಿಲ್ಲ, ಎಲ್ಲರೂ ಸಮಾನ ಎಂಬ ಸಾಮಾಜಿಕ ಸಮಾನತೆಯ ದೃಷ್ಟಿಕೋನ ಆತನದು. ತಳ ಸಮುದಾಯದ ಉಪಾಲಿ, ಸುನೀತ, ಸುಪ್ರಿಯ, ಸುಮಂಗಲ-ಯಾರೂ ಆತನಿಗೆ ಅನ್ಯರಲ್ಲ. ಅರಸನ ಆತಿಥ್ಯಕ್ಕಿಂತ ಬಡವ ಚುಂದ, ವೇಶ್ಯೆ ಆಮ್ರಪಾಲಿಯವರಂತಹ ಸಾಮಾನ್ಯರ ಒಡನಾಟದಲ್ಲಿ ಸಂತೃಪ್ತಿ ಕಂಡವ. 'ಬಡತನಕ್ಕಿಂತ ದೊಡ್ಡ ಶಾಪವಿಲ್ಲ, ಹಸಿವಿಗಿಂತ ಹಿರಿದಾದ ರೋಗ ವಿಲ್ಲ' ಎನ್ನುವ ಬುದ್ಧನ ಸಾಮಾಜಿಕ ಮೀಮಾಂಸೆಗೆ ಎಣೆಯುಂಟೆ? ಈ ಲೋಕದ ಕೊನೆಯ ಜೀವಿಗೆ ಮುಕ್ತಿ ದೊರೆಯುವ ತನಕ ನನಗೂ ನಿರ್ವಾಣ ಬೇಡ ಎಂದ ಆತನ ಮಹಾಕರುಣೆಗೆ ಕೊನೆಯೆಲ್ಲಿ?

ಬುದ್ಧ ಜನಸಾಮಾನ್ಯರ, ವೃದ್ಧರ, ರೋಗಿಗಳ ಸೇವೆಯಲ್ಲಿ ಸಾರ್ಥಕತೆ ಕಾಣುತ್ತಿದ್ದ. ಕುಷ್ಠ ರೋಗಿಗಳ ಗಾಯಗಳನ್ನು ಒರೆಸಿ ಶುಚಿಗೊಳಿಸಿದ್ದ. ಕ್ರಿಸ್ತ ಅನುಸರಿಸಿದ್ದೂ ಇದೇ ದಾರಿಯನ್ನು. ಬುದ್ಧನಂತೆ ಯೇಸುವೂ ಎಲ್ಲ ಬಗೆಯ ಹಿಂಸೆಯ ವಿರುದ್ಧವಾಗಿದ್ದ.

ಸತ್ಯಾನ್ವೇಷಣೆಯ ಮೂಲಕ, ತೆರೆದ ಹೃದಯ ದಿಂದ ಮಾತ್ರ ನಿಜವಾದ ಸತ್ಯದ ಗ್ರಹಿಕೆ ಆಗುವು ದನ್ನು ಬುದ್ಧ ಮನಗಂಡ. 'ಸತ್ಯವನ್ನಲ್ಲದೆ ಬೇರೇ ನನ್ನೂ ಒಪ್ಪದಿರು. ಪ್ರಶ್ನಿಸು ಹಾಗೂ ಪರೀಕ್ಷಿಸು. ಯಾವುದನ್ನೂ ಹಾಗೆಯೇ ಕಣ್ಮುಚ್ಚಿ ಒಪ್ಪದಿರು' ಎಂದ ಆತ, ಕಿಸಾಗೌತಮಿಗೆ ಸಾವಿನ ಸತ್ಯವನ್ನು ಪ್ರಾಯೋಗಿಕ ವಾಗಿಯೇ ಅರ್ಥೈಸಿದ ರೀತಿ ವಿಶಿಷ್ಟವಾದುದು.

ಇಂದಿನ ಮತ-ಧರ್ಮಗಳು ವಿಜ್ಞಾನದ ಸತ್ಯಾನ್ವೇಷಣೆಯ ಪ್ರಭೆಗೆ ಹೆದರಿ ಅದನ್ನು ತಮ್ಮ ಪ್ರತಿಸ್ಪರ್ಧಿ ಎಂದು ಭಾವಿಸುತ್ತಿವೆ. ಬೌದ್ಧ, ಜೈನಧರ್ಮ ಗಳು ಆ ಕಾಲಕ್ಕೆ ಪ್ರತಿಪಾದಿಸಿದ್ದ ವಿಕಾಸವಾದವನ್ನು ಇಂದಿಗೂ ಮತ-ಧರ್ಮಗಳು ಒಪ್ಪಿಕೊಳ್ಳಲು ಸಿದ್ಧವಿಲ್ಲ. ಜಗತ್ತನ್ನು ಯಾರೂ ಸೃಷ್ಟಿಸಲಿಲ್ಲ. ಸೃಷ್ಟಿಕರ್ತ ಎಂಬ ಒಂದು ಶಕ್ತಿ ಇಲ್ಲ. ಈ ಜಗತ್ತು ಹಿಂದೆಯೂ ಇತ್ತು, ಇಂದಿಗೂ ಇದೆ, ಮುಂದೆಯೂ ಇರುತ್ತದೆ ಎನ್ನುವ ಬುದ್ಧನ ಮಾತು ಡಾರ್ವಿನ್ನನ ವಿಕಾಸವಾದದ ಮೂಲಕ ವೈಜ್ಞಾನಿಕ ಮಾನ್ಯತೆ ಪಡೆದುಕೊಂಡಿತು. ವಿಚಿತ್ರವೆಂದರೆ, ಈ ಕಾಲಕ್ಕೂ ವಿಕಾಸವಾದದ ಪಠ್ಯವನ್ನು ವಿಜ್ಞಾನ ಪಠ್ಯದಿಂದ ನಿರ್ಬಂಧಿಸಿದ ಮತ-ಧರ್ಮಗಳಿವೆ. ಬಾವಿಯ ಕಪ್ಪೆಯ ನೆನಪಾಗುತ್ತಿದೆಯೆ?

ಬುದ್ಧ ಏಕಕಾಲಕ್ಕೆ ವೈದ್ಯನೂ ಹೌದು, ಸಾಮಾಜಿಕ ಹೋರಾಟಗಾರನೂ ಹೌದು. ಜನಸಾಮಾನ್ಯರ ಭಾವನೆಗಳಿಗೆ ಸ್ಪಂದಿಸಿದ, ಅವರ ನೋವಿಗೆ ಮಿಡಿದ, ಅವರ ಹಕ್ಕುಗಳ ಪರವಾಗಿ ಮೊದಲ ಸಲ ದನಿಯೆತ್ತಿದ ಮಹಾ ಪ್ರಜಾಪ್ರಭುತ್ವವಾದಿಯೂ ಹೌದು. ಬುದ್ಧ ವಿಜ್ಞಾನಕ್ಕೆ ವಿರುದ್ಧವಾದುದನ್ನು ಏನನ್ನೂ ಹೇಳಿಲ್ಲ. ಮಾತ್ರವಲ್ಲ, ಆತನ ಚಿಂತನೆಗಳು ಆಧುನಿಕವೂ ವೈಚಾರಿಕವೂ ಹಾಗೂ ಆಧ್ಯಾತ್ಮಿಕವೂ ಆಗಿರುವುದನ್ನು ಗಮನಿಸಬಹುದು.

ನಿರಂತರ ಬದಲಾಗುತ್ತಿರುವ ಲೋಕಪ್ರವಾಹದಲ್ಲಿ ಧಾರ್ಮಿಕ ನಿಯಮಗಳನ್ನು ಹೇರುವುದು ಕಾಲಕ್ಕೆ ವಿರುದ್ಧವಾದುದು. ನಿಯಮಗಳೇ ನಿರ್ಬಂಧ ಗಳಾಗಿ, ಪ್ರಭುತ್ವದ ಕೈಯಲ್ಲಿ ಅಸ್ತ್ರಗಳಾಗಿ ಬಳಕೆ ಆಗುತ್ತಿರುವ ಈ ಹೊತ್ತು, ಧಾರ್ಮಿಕ ನಿಯಮ ಗಳಿಗಿಂತ ಪ್ರಜಾಪ್ರಭುತ್ವದ ಆಶಯಗಳು ಮುನ್ನೆಲೆಗೆ ಬರಬೇಕಾಗಿದೆ. ಪರಿವರ್ತನೆಯೇ ಜಗದ ನಿಯಮ ವಾಗಿರುವ ಲೋಕದಲ್ಲಿ ಎಲ್ಲವೂ ಬದಲಾಗುತ್ತಲೇ ಇರುತ್ತದೆ.

ಬದಲಾಗುತ್ತಿರುವ ಈ ಲೋಕದಲ್ಲಿ ನಾವೂ ಬದಲಾಗುವುದು, ಕಾಲಗತಿಯೊಂದಿಗೆ ಹೆಜ್ಜೆ ಹಾಕುವುದು ಅನಿವಾರ್ಯ ಎಂಬುದನ್ನು ಬುದ್ಧ ಸೂಚಿಸುತ್ತಾನೆ. ಯಾವುದು ಈ ಕಾಲಕ್ಕೆ ಬೇಡವೋ ಅದನ್ನು ನಿನ್ನ ಧರ್ಮಗ್ರಂಥದಿಂದ ತೆಗೆದುಬಿಡು. ಯಾವುದು ಬೇಕಾಗಬಹುದೋ ಅದನ್ನು ಸೇರಿಸಲು ಹಿಂಜರಿಯದಿರು ಎನ್ನುತ್ತಾನೆ. ಹೀಗಾಗಿ ಬುದ್ಧನ ಧರ್ಮ ಆಗಿಹೋದ ಧರ್ಮವಾಗಿರದೆ, ಅದು ಕಾಲಗತಿಯೊಂದಿಗೆ ನಿರಂತರವಾಗಿ ಚಲಿಸುತ್ತಿರುವ ಧರ್ಮವಾಗಿದೆ. ಎಲ್ಲರ, ಎಲ್ಲ ಕಾಲದ ಧರ್ಮವಾಗಿದೆ. 'ನಾನು ನಿಮಗೆ ಮಾರ್ಗದರ್ಶಿ ಮಾತ್ರ, ನಿಮಗೆ ನೀವೇ ಬುದ್ಧರಾಗಬೇಕು. ನಿಮ್ಮೊಳಗಿನ ಬುದ್ಧತ್ವವನ್ನು ನೀವೇ ಕಂಡುಕೊಳ್ಳಿ' ಎನ್ನುವುದು ಬುದ್ಧನ ಮಾತು.

ಬುದ್ಧ ವ್ಯಕ

ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆಯ ಗ್ರೇಟ್ ನಿಕೋಬಾರ್ ಅಭಿವೃದ್ಧಿ ಯೋಜನೆ ಮತ್ತೆ ಸುದ್ದಿಯಲ್ಲಿದೆ. ಅಂಡಮಾನ್ –ನಿಕೋಬಾರ್ ದ್ವೀಪಕ್ಕೆ ಭೇಟಿ ನೀಡಿರುವ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು, ₹81 ಸಾವಿರ ಕೋಟಿ ವೆಚ್ಚದ ಈ ಯೋಜನೆಯು 'ಅತ್ಯಂತ ದೊಡ್ಡ ಹಗರಣ' ಎಂದಿದ್ದಾರಲ್ಲದೆ, 'ಇದು ಪ್ರಕೃತಿ ಮತ್ತು ಆದಿವಾಸಿಗಳ ವಿರುದ್ಧ ಎಸಗುವ ಅಪರಾಧ' ಎಂದೂ ಟೀಕಿಸಿದ್ದಾರೆ. ಯೋಜನೆಯು ದ್ವೀಪ ಸಮೂಹದ ಅಪರೂಪದ ಜೀವ ವೈವಿಧ್ಯ, ಪರಿಸರಕ್ಕೆ ಹಾನಿಯುಂಟು ಮಾಡಲಿದೆ, ಅಲ್ಲಿನ ಆದಿವಾಸಿಗಳ ಬದುಕಿಗೆ ಕೊಳ್ಳಿ ಇಡಲಿದೆ ಎಂದು ಪರಿಸರವಾದಿಗಳು ಆತಂಕ ವ್ಯಕ್ತಪಡಿಸುತ್ತಿದ್ದಾರೆ. ದೇಶದ ಭದ್ರತೆ, ಆರ್ಥಿಕ ಹಿತಾಸಕ್ತಿಯಿಂದ ಈ ಯೋಜನೆ ಅತ್ಯಂತ ಮಹತ್ವದ್ದು ಎಂದು ಕೇಂದ್ರ ಸರ್ಕಾರ ಆರಂಭದಿಂದಲೂ ಹೇಳುತ್ತಲೇ ಬಂದಿದೆ. ಈ ವರ್ಷದ ಫೆಬ್ರುವರಿಯಲ್ಲಿ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ ಕೂಡ ಯೋಜನೆಗೆ ಹಸಿರು ನಿಶಾನೆ ತೋರಿದೆ

ಗ್ರೇಟ್ ನಿಕೋಬಾರ್ ಯೋಜನೆ

ಅಭಿವೃದ್ಧಿಯೇ, 'ಅಪರಾಧ'ವೇ?

₹81	910	166.1	130.75	84.10	8.50 ಲಕ್ಷದಿಂದ 9.50 ಲಕ್ಷ
ಸಾವಿರ ಕೋಟಿ ಯೋಜನಾ ಒಟ್ಟು ವೆಚ್ಚ	ಚದರ ಕಿ.ಮೀ ಗ್ರೇಟ್ ನಿಕೋಬಾರ್ ದ್ವೀಪದ ವಿಸ್ತೀರ್ಣ	ಚದರ ಕಿ.ಮೀ ಯೋಜನೆ ಅನುಷ್ಠಾನಗೊಳ್ಳಲಿರುವ ಭೂ ಪ್ರದೇಶದ ವಿಸ್ತೀರ್ಣ	ಚದರ ಕಿ.ಮೀ ಯೋಜನೆಗೆ ಅಗತ್ಯವಿರುವ ಒಟ್ಟು ಭೂಭಾಗದಲ್ಲಿ ಅರಣ್ಯ ಪ್ರದೇಶದ ವಿಸ್ತೀರ್ಣ	ಚದರ ಕಿ.ಮೀ ಯೋಜನೆಗೆ ಅಗತ್ಯ ಬೀಳುವ ಬುಡಕಟ್ಟು ಸಂರಕ್ಷಿತ ಪ್ರದೇಶದ ವಿಸ್ತೀರ್ಣ	ಯೋಜನಾ ಪ್ರದೇಶದಲ್ಲಿ ನಾಶವಾಗಲಿರುವ ಮರಗಳ ಸಂಖ್ಯೆ

ಪ್ರಜಾವಾಣಿ ವಾರ್ತೆ

ಅಂಡಮಾನ್ ಮತ್ತು ನಿಕೋಬಾರ್, ಬಂಗಾಳ ಕೊಲ್ಲಿಯ ಪೂರ್ವಕ್ಕೆ ಮತ್ತು ಅಂಡಮಾನ್ ಸಮುದ್ರದ ಪಶ್ಚಿಮಕ್ಕೆ ಚದುರಿದಂತೆ ಇರುವ ದ್ವೀಪಗಳ ಗುಚ್ಛ. ಇಲ್ಲಿ ದ್ವೀಪಗಳ ಎರಡು ಗುಂಪುಗಳಿವೆ. ಅಂಡಮಾನ್ ದ್ವೀಪಗಳು ಮತ್ತು ನಿಕೋಬಾರ್ ದ್ವೀಪಗಳು. ಅಂಡಮಾನ್ ಉತ್ತರದಲ್ಲಿದ್ದರೆ, ನಿಕೋಬಾರ್ ದಕ್ಷಿಣದಲ್ಲಿದೆ. ನಿಕೋಬಾರ್ ದ್ವೀಪಗಳಲ್ಲಿ, ಗ್ರೇಟ್ ನಿಕೋಬಾರ್ ಒಂದು. ಭಾರತದ ದಕ್ಷಿಣದ ತುತ್ತತುದಿ ಇಂದಿರಾ ಪಾಯಿಂಟ್ ಇರುವುದು ಗ್ರೇಟ್ ನಿಕೋಬಾರ್ ದ್ವೀಪದಲ್ಲಿ. ಇದು 910 ಚದರ ಕಿ.ಮೀನಷ್ಟು ವಿಸ್ತೀರ್ಣವಿದೆ. ಅಪರೂಪದ ಪರಿಸರ, ಜೀವವೈವಿಧ್ಯಕ್ಕೆ ಹೆಸರಾದ ಇದು ಶೋಂಪೆನ್ ಮತ್ತು ನಿಕೋಬಾರೀ ಬುಡಕಟ್ಟು ಸಮುದಾಯಗಳು ನೆಲಸಿರುವ ಸ್ಥಳವೂ ಹೌದು.

ಕೇಂದ್ರ ಸರ್ಕಾರವು ನಿಕೋಬಾರ್ ದ್ವೀಪಗಳ ದಕ್ಷಿಣದ ತುತ್ತತುದಿಯನ್ನು ಕೇಂದ್ರವಾಗಿಟ್ಟುಕೊಂಡು ಬೃಹತ್ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯನ್ನು ಕೈಗೆತ್ತಿಕೊಂಡಿದೆ. ಅದೇ ಗ್ರೇಟ್ ನಿಕೋಬಾರ್ ಅಭಿವೃದ್ಧಿ ಯೋಜನೆ. ಇದರ ಅನುಷ್ಠಾನಕ್ಕೆ ₹81 ಸಾವಿರ ಕೋಟಿ ವೆಚ್ಚವಾಗಬಹುದು ಎಂದು ಅಂದಾಜಿಸಲಾಗಿದೆ. ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳ ಸಮಗ್ರ ಅಭಿವೃದ್ಧಿ ನಿಗಮ ನಿಯಮಿತವು (ಎಎನ್ಐಐಡಿಸಿಒ) ಈ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದೆ. ನೀತಿ ಆಯೋಗವು ಈ ಯೋಜನೆಯ ರೂಪುರೇಷೆಯನ್ನು ಸಿದ್ಧಪಡಿಸಿದೆ.

ಏನಿದು ಯೋಜನೆ?: ನಿಕೋಬಾರ್ ದ್ವೀಪದ ದಕ್ಷಿಣ ಭಾಗದಲ್ಲಿ ಅಂತರರಾಷ್ಟ್ರೀಯ ಕಂಟೇನರ್ ಮರುಹಂಚಿಕೆ (ಟ್ರಾನ್ಸ್‌ಶಿಪ್‌ಮೆಂಟ್) ಟರ್ಮಿನಲ್ (ಐಸಿಟಿಟಿ), ಹೊಸ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ, 450 ಮೆಗಾ ವಾಟ್ ಸಾಮರ್ಥ್ಯದ ವಿದ್ಯುತ್ ಸ್ಥಾವರ ಮತ್ತು ಒಂದು ಟೌನ್‌ಶಿಪ್ ನಿರ್ಮಾಣ ಮಾಡುವುದು ಯೋಜನೆಯ ತಿರುಳು.

ಗಲಾಥಿಯಾ ಕೊಲ್ಲಿಯಲ್ಲಿ ಅತ್ಯಾಧುನಿಕ ಸೌಲಭ್ಯಗಳನ್ನು ಹೊಂದಿರುವ ಬಂದರು (ಐಸಿಸಿಟಿ) ನಿರ್ಮಾಣ ಮಾಡುವುದು ಯೋಜನೆಯ ಪ್ರಮುಖ ಉದ್ದೇಶ. 2028ರ ಹೊತ್ತಿಗೆ ಬಂದರಿನ ಮೊದಲ ಹಂತದ ಕೆಲಸ ಪೂರ್ಣಗೊಂಡು ಕಾರ್ಯಾರಂಭ ಆಗುವಂತೆ ಮಾಡುವುದು ಕೇಂದ್ರದ ಯೋಚನೆ. ಬಂದರು ಪೂರ್ಣ ಪ್ರಮಾಣದಲ್ಲಿ ಕಾರ್ಯಾಚರಣೆ ಆರಂಭಿಸಿದ ನಂತರ ವಾರ್ಷಿಕವಾಗಿ 1.6 ಕೋಟಿ ಕಂಟೇನರ್‌ಗಳನ್ನು ನಿರ್ವಹಿಸುವ ಸಾಮರ್ಥ್ಯ ಹೊಂದಲಿದೆ. ಮೊದಲ ಹಂತದ ಕಾಮಗಾರಿ ಮುಕ್ತಾಯವಾದಾಗ ವಾರ್ಷಿಕವಾಗಿ 40 ಲಕ್ಷ ಕಂಟೇನರ್‌ಗಳನ್ನು ನಿರ್ವಹಿಸಲಿದೆ ಎಂದು ಹೇಳಲಾಗುತ್ತಿದೆ.

ಗಲಾಥಿಯಾ ಕೊಲ್ಲಿಯಿಂದ ಈಶಾನ್ಯಕ್ಕೆ ಅಂದಾಜು 4,000 ಪ್ರಯಾಣಿಕರನ್ನು ನಿರ್ವಹಿಸುವ ಸಾಮರ್ಥ್ಯವನ್ನು ಹೊಂದಿರುವ ವಿಮಾನ ನಿಲ್ದಾಣ (ನಾಗರಿಕ ಮತ್ತು ಸೇನೆ ಉದ್ದೇಶದ) ನಿರ್ಮಾಣ ಮಾಡುವುದು ಈ ಯೋಜನೆಯಲ್ಲಿನ ಮತ್ತೊಂದು ಅಂಶ. ಕ್ಯಾಂಪ್‌ಬೆಲ್ ಕೊಲ್ಲಿಗೆ ಹೊಂದಿಕೊಂಡಂತೆ ಎಲ್ಲ ಮೂಲಸೌಕರ್ಯಗಳನ್ನೊಳಗೊಂಡ ಟೌನ್‌ಶಿಪ್ ಅನ್ನು ಅಭಿವೃದ್ಧಿಪಡಿಸುವುದು ಮತ್ತೊಂದು ಉದ್ದೇಶವಾದರೆ, ಈ ಮೂಲಸೌಕರ್ಯಗಳಿಗೆ ವಿದ್ಯುತ್ ಸರಬರಾಜು ಮಾಡುವುದಕ್ಕಾಗಿ 450 ಮೆಗಾವಾಟ್ ಸಾಮರ್ಥ್ಯದ ವಿದ್ಯುತ್ ಸ್ಥಾವರದ (ಅನಿಲ ಮತ್ತು ಸೌರ) ಅಭಿವೃದ್ಧಿ ಯೋಜನೆಯ ಇನ್ನೊಂದು ಭಾಗ.

ಆಧಾರ: ಯೋಜನೆಗೆ ಸಂಬಂಧಿಸಿದ ನೀತಿ ಆಯೋಗದ ಪೂರ್ವ ಕಾರ್ಯಸಾಧ್ಯತಾ ವರದಿ, ಪಿಟಿಐ, ಟೈಮ್, ಮಾಧ್ಯಮ ವರದಿಗಳು, ಸಂಸತ್ತಿನಲ್ಲಿ ಸಚಿವರ ಉತ್ತರ



ಕೇಂದ್ರ ಸರ್ಕಾರ ಹೇಳುವುದೇನು?

- ದೇಶದ ಆರ್ಥಿಕ ಮತ್ತು ಭದ್ರತಾ ಹಿತದೃಷ್ಟಿಯಿಂದ ಮಹತ್ವದ ಯೋಜನೆ
- ಪರಿಸರ, ಸಾಮಾಜಿಕ ವಿಚಾರಗಳನ್ನು ಗಮನದಲ್ಲಿಟ್ಟುಕೊಳ್ಳಲಾಗಿದೆ
- ಅಂಡಮಾನ್ ಸಮುದ್ರ ಮತ್ತು ಆಗ್ನೇಯ ಏಷ್ಯಾದಲ್ಲಿ ಭಾರತದ ಉಪಸ್ಥಿತಿ ಹೆಚ್ಚಲಿದೆ
- ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು ಆರ್ಥಿಕ ಕೇಂದ್ರಗಳಾಗಿ ಬದಲಾಗಲಿವೆ. ಜಾಗತಿಕ ಪ್ರಮುಖ ಸರಕು ನಿರ್ವಹಣೆ ಕೇಂದ್ರವಾಗಲಿದೆ. ಜಾಗತಿಕ ಪ್ರವಾಸಿ ತಾಣವಾಗಿ ಪರಿವರ್ತನೆಯಾಗಲಿದೆ
- ಅಂಡಮಾನ್ ಮತ್ತು ನಿಕೋಬಾರ್‌ನ ಜೀವ ವೈವಿಧ್ಯ ಮತ್ತು ಸ್ಥಳೀಯ ಬುಡಕಟ್ಟು ಸಮುದಾಯಗಳಿಗೆ ತೊಂದರೆಯಾಗದು

ಗೃಹ ಸಚಿವಾಲಯದ ಉಸ್ತುವಾರಿ

ಈ ಯೋಜನೆಯನ್ನು ಗೃಹ ಸಚಿವಾಲಯದ ಅಡಿಯಲ್ಲಿ ಜಾರಿ ಮಾಡಲಾಗುತ್ತಿದೆ. ಇದರಿಂದ ಯೋಜನೆ ಬಗ್ಗೆ ಮಾಹಿತಿ ಪಡೆಯುವುದು, ದ್ವೀಪ ಸಮೂಹಕ್ಕೆ ಭೇಟಿ ನೀಡುವುದು ಕಷ್ಟಕರವಾಗಿದೆ. ಇದೊಂದು ವಾಣಿಜ್ಯ ಯೋಜನೆಯಾಗಿದೆ. ಆದರೆ, ದೇಶದ ಭದ್ರತೆಯ ನೆಪವನ್ನು ಮುಂದು ಮಾಡಲಾಗುತ್ತಿದೆ. ಇಲ್ಲಿ ರಕ್ಷಣೆಯ ಉದ್ದೇಶಕ್ಕೆ ಬಳಕೆಯಾಗುವುದು ವಿಮಾನ ನಿಲ್ದಾಣ ಮಾತ್ರವೇ. ಅದಕ್ಕೆ ಒಟ್ಟು ಯೋಜನಾ ಪ್ರದೇಶದಲ್ಲಿ ಶೇ 5ರಷ್ಟು ಭೂಪ್ರದೇಶವಷ್ಟೇ ಬಳಕೆಯಾಗುತ್ತಿದೆ ಎನ್ನುವುದು ಪರಿಸರವಾದಿಗಳ ವಾದ.

ಪರಿಸರ, ಜೀವವೈವಿಧ್ಯಕ್ಕೆ ಧಕ್ಕೆಯ ಆತಂಕ

ಯೋಜನೆ ಘೋಷಣೆ ಆದಾಗಿನಿಂದಲೂ ಅನೇಕ ಪರಿಸರವಾದಿಗಳು, ಸಾಮಾಜಿಕ ಕಾರ್ಯಕರ್ತರು, ಬುಡಕಟ್ಟು ಮುಖಂಡರು ಯೋಜನೆಯನ್ನು ವಿರೋಧಿಸುತ್ತಲೇ ಬರುತ್ತಿದ್ದಾರೆ. ಯೋಜನೆಗಾಗಿ 130 ಚದರ ಕಿ.ಮೀ. ದೂರದ ದಟ್ಟ ಕಾಡಿನಲ್ಲಿ ಸುಮಾರು 10 ಲಕ್ಷ ಮರಗಳ ಹನನವಾಗಲಿದೆ. ಇದು ದೇಶದ ಪರಿಸರ ವ್ಯವಸ್ಥೆಯ ಮೇಲೆ ಗಂಭೀರ ಪರಿಣಾಮ ಬೀರಲಿದೆ ಎನ್ನುವುದು ಯೋಜನೆಯನ್ನು ವಿರೋಧಿಸುವವರ ಪ್ರಮುಖ ಆಕ್ಷೇಪಣೆಯಾಗಿದೆ.

ಅವರ ಪ್ರಕಾರ, ಇದು ಅತ್ಯಂತ ಸಮೃದ್ಧವಾದ, ಅಪರೂಪದ ಸಸ್ಯ ಮತ್ತು ಜೀವಸಂಪತ್ತು ನೆಲೆಗೊಂಡಿರುವ ತಾಣ. ಸಮುದ್ರ ಆಮೆಯ ವಿಶೇಷ ಪ್ರಭೇದಕ್ಕೆ ದ್ವೀಪವು ಪ್ರಖ್ಯಾತಿ ಪಡೆದಿದೆ. ಪಕ್ಷಿಗಳು, ಪ್ರಾಣಿಗಳು, ಹಲ್ಲಿಗಳು, ಚಿಟ್ಟೆಗಳು ಸೇರಿದಂತೆ 2500 ಜೀವಿಗಳು ಇಲ್ಲಿದ್ದು, ಈ ಪೈಕಿ 400 ಇಲ್ಲಿ ಮಾತ್ರವೇ ಕಂಡುಬರುವಂಥವು. ಇಂಥ ಅನೇಕ ವಿಶಿಷ್ಟ ಜಲಚರಗಳು, ಗಿಡಮರಗಳು ಇಲ್ಲಿವೆ. ಹವಳದ ದಿಬ್ಬಗಳೂ ಇವೆ. ಯೋಜನೆಯಿಂದ ಅವುಗಳ ಅಸ್ತಿತ್ವಕ್ಕೆ ಧಕ್ಕೆಯಾಗಲಿದೆ.

ಪ್ರಸ್ತುತ ದ್ವೀಪದಲ್ಲಿ 8 ಸಾವಿರ ಜನಸಂಖ್ಯೆ ಇದ್ದು, ಯೋಜನೆ ಜಾರಿಯಾದ ನಂತರ ಈ ಸಂಖ್ಯೆಯು 3.5 ಲಕ್ಷಕ್ಕೆ ಏರಲಿದೆ. ವಾಣಿಜ್ಯ ಚಟುವಟಿಕೆಗಳು ಹೆಚ್ಚಾಗಲಿವೆ. ಇದರಿಂದ ದ್ವೀಪದ ಸೂಕ್ಷ್ಮ ಪರಿಸರ ವ್ಯವಸ್ಥೆ ಮತ್ತು ಜೀವಿ ವ್ಯವಸ್ಥೆಗೆ ಹಾನಿ ಉಂಟಾಗಲಿದೆ. 2004ರಲ್ಲಿ ಇಲ್ಲಿ ಭೂಕಂಪ ಮತ್ತು ಸುನಾಮಿ ಸಂಭವಿಸಿ, 4 ಮೀಟರ್‌ಗೂ ಹೆಚ್ಚಿನ ಭೂಪ್ರದೇಶ ಕೊಚ್ಚಿಕೊಂಡು ಹೋಗಿತ್ತು.

ಭಾರತದಲ್ಲಿ ನಾಶದ ಹಾದಿಯಲ್ಲಿರುವ ಉಷ್ಣವಲಯದ ಮಳೆಕಾಡುಗಳಲ್ಲಿ ನಿಕೋಬಾರ್ ದ್ವೀಪವೂ ಒಂದಾಗಿದೆ. ಅಪರೂಪದ ಜೀವವೈವಿಧ್ಯ ಮಾತ್ರವಲ್ಲದೇ, ಶೋಂಪೆನ್ ಮತ್ತು ನಿಕೋಬಾರೀ ಎಂಬ ಎರಡು ಸೂಕ್ಷ್ಮ ಮತ್ತು ಆದಿನಿಕತೆಗೆ ಒಡ್ಡಿಕೊಳ್ಳದ ಬುಡಕಟ್ಟು ಸಮುದಾಯಗಳು ಇಲ್ಲಿವೆ. ಅಲೆಮಾರಿಗಳಾದ ಶೋಂಪೆನ್ ಬುಡಕಟ್ಟಿನಲ್ಲಿ ಕೇವಲ 237 ಜನರಿದ್ದರೆ, ಒಂದೆಡೆ ನೆಲಸಿರುವ ನಿಕೋಬಾರೀ ಬುಡಕಟ್ಟಿನಲ್ಲಿ 1,094 ಮಂದಿ ಅಷ್ಟೇ ಇದ್ದಾರೆ. ಈ ಅತಿ ಸೂಕ್ಷ್ಮ ಬುಡಕಟ್ಟುಗಳ ಅಸ್ತಿತ್ವಕ್ಕೆ ಯೋಜನೆಯು ಮಾರಕವಾಗುತ್ತದೆ.

ಯೋಜನೆಗೆ ಅನುಮತಿ ಪಡೆಯುವ ವಿಚಾರದಲ್ಲಿ ಭಾರತದ ವನ್ಯಜೀವಿ ಸಂಘ (ಡಬ್ಲ್ಯುಐಐ) ಮತ್ತು ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್‌ಜಿಟಿ) ನಿಯಮಗಳನ್ನು ಉಲ್ಲಂಘಿಸಿವೆ ಎನ್ನುವುದು ಬಾಂಬೆ ಐಐಟಿಯ ಪ್ರಾಧ್ಯಾಪಕ ಮತ್ತು ನಿಕೋಬಾರ್ ದ್ವೀಪದ ಬಗ್ಗೆ 30 ವರ್ಷ ಅಧ್ಯಯನ ಮಾಡಿರುವ ಪಂಕಜ್ ಶಿಖ್ಸಾರಿಯಾ ಅವರ ಆರೋಪ.

ಲೇಖಕರು, ಸಾಮಾಜಿಕ ಕಾರ್ಯಕರ್ತರು ಸೇರಿದಂತೆ 70ಕ್ಕೂ ಅಧಿಕ ಮಂದಿ ಯೋಜನೆ ವಿರೋಧಿಸಿ ಪರಿಸರ ಸಚಿವಾಲಯಕ್ಕೆ ಪತ್ರ ಬರೆದಿದ್ದರು. 'ಯೋಜನೆ ಜಾರಿ ವಿಚಾರದಲ್ಲಿ ಪಾರದರ್ಶಕತೆ ಮತ್ತು ಉತ್ತರದಾಯಿತ್ವ ಇಲ್ಲ. ಯೋಜನೆಯಿಂದ ತೊಂದರೆಗೊಳಗಾಗುವ ಜನರ ಜತೆ ಚರ್ಚೆ ನಡೆಸಿಲ್ಲ. ಅವರ ಅನುಮತಿ ಪಡೆದಿಲ್ಲ. ಯೋಜನೆಯಿಂದ ಸರ್ವನಾಶವೇ ಘಟಿಸಲಿದೆ' ಎನ್ನುವುದು ಅವರ ಆರೋಪ.

ಗ್ರೇಟ್ ನಿಕೋಬಾರ್ ಯೋಜನೆಗಾಗಿ ದ್ವೀಪದ ಶೇ 15ರಷ್ಟು ಅರಣ್ಯಪ್ರದೇಶವನ್ನು ಬಳಸಿಕೊಳ್ಳಲಾಗುತ್ತಿದೆ. ಅಲ್ಲಿನ ಲಕ್ಷಾಂತರ ಮರಗಳನ್ನು ಕಡಿಯಲಾಗುತ್ತಿದೆ. ಆದರೆ, ಸರ್ಕಾರ ಕೇವಲ ಶೇ 1.82ರಷ್ಟು ಅರಣ್ಯ ಪ್ರದೇಶ ಎಂದು ಪ್ರತಿಪಾದಿಸುತ್ತಾ, ತಪ್ಪುದಾರಿಗೆಳೆಯುತ್ತಿದೆ ಎಂದು ಪತ್ರದಲ್ಲಿ ಉಲ್ಲೇಖಿಸಿದ್ದರು.

ಯೋಜನೆಯು ಶೋಂಪೆನ್ ಬುಡಕಟ್ಟಿಗೆ ವಿಧಿಸಲಾಗುತ್ತಿರುವ ಮರಣದಂಡನೆಯಾಗಿದ್ದು, ಇದು ಜನಾಂಗೀಯ ಹತ್ಯೆಯಂಥ ಅಂತರರಾಷ್ಟ್ರೀಯ ಅಪರಾಧಕ್ಕೆ ಸಮನಾಗಿದೆ ಎಂದು ಸರ್ವೈವಲ್ ಇಂಟರ್‌ನ್ಯಾಷನಲ್ ಸಂಸ್ಥೆಯು ವಿಶ್ವಸಂಸ್ಥೆಗೆ ಸಲ್ಲಿಸಿರುವ ಯೋಜನೆ ಕುರಿತ ಅಧ್ಯಯನ ವರದಿಯಲ್ಲಿ ಉಲ್ಲೇಖಿಸಿದೆ.

ಕಾರ್ಯತಂತ್ರ ದೃಷ್ಟಿಯಿಂದ ಮುಖ್ಯ?

ಯೋಜನೆಯು ಸೇನೆ ಮತ್ತು ಕಡಲಿಗೆ ಸಂಬಂಧಿಸಿದ ಕಾರ್ಯತಂತ್ರದ ದೃಷ್ಟಿಯಿಂದ ತುಂಬಾ ಮಹತ್ವದ್ದು. ನಿರ್ಮಾಣವಾಗಲಿರುವ ವಿಮಾನ ನಿಲ್ದಾಣವು ಸೇನಾ ಕಾರ್ಯಾಚರಣೆಗೆ ಅನುಕೂಲಕರವಾಗಲಿದೆ ಎಂಬುದು ತಜ್ಞರ ಅಭಿಪ್ರಾಯ.

ಪ್ರಮುಖ ಜಲಮಾರ್ಗವಾದ ಮಲಕ್ಕಾ ಜಲಸಂಧಿಯು, ಯೋಜನೆಗೆ ಗುರುತಿಸಿರುವ ಸ್ಥಳದಿಂದ ಕೇವಲ 74 ಕಿ.ಮೀನಷ್ಟು ದೂರದಲ್ಲಿದೆ. ಈ ಜಲಸಂಧಿಯು ಜಾಗತಿಕ ಸರಕು ಸಾಗಣೆಯ ಪ್ರಮುಖ ಮಾರ್ಗವಾಗಿದ್ದು, ಚೀನಾದ ಶೇ 80ರಷ್ಟು ತೈಲ ಹಾಗೂ ಇತರ ಸರಕುಗಳು ಇದರ ಮೂಲಕವೇ ಸಾಗುತ್ತವೆ. ಚೀನಾವು ಹಿಂದೂ ಮಹಾ ಸಾಗರದಲ್ಲಿ 'ಮುತ್ತಿನ ಹಾರ' ಯೋಜನೆಯ ಮೂಲಕ ವಿವಿಧ ದೇಶಗಳಲ್ಲಿ ಬಂದರು ನಿರ್ಮಿಸಿ, ತನ್ನ ಉಪಸ್ಥಿತಿಯನ್ನು ಭದ್ರಪಡಿಸುತ್ತಿದೆ. ಗ್ರೇಟ್ ನಿಕೋಬಾರ್ ಯೋಜನೆ ಅನುಷ್ಠಾನಗೊಂಡರೆ ಹಿಂದೂ ಮಹಾಸಾಗರದಲ್ಲಿ ಭಾರತದ ಉಪಸ್ಥಿತಿಯೂ ಹೆಚ್ಚಲಿದೆ.

ಕಂಟೇನರ್ ಮರುಹಂಚಿಕೆಯ ಬಂದರು ನಿರ್ಮಾಣವಾಗುವುದರಿಂದ ಈ ಭಾಗದಲ್ಲಿ ಸಾಗುವ ಸರಕು ಸಾಗಣೆ ಮಾರ್ಗದಲ್ಲಿ ಭಾರತದ ಪಾಲ್ಗೊಳ್ಳುವಿಕೆಯೂ ಹೆಚ್ಚಲಿದೆ. ಸದ್ಯ ಈ ಭಾಗದಲ್ಲಿ ಇಂತಹ ಸೌಲಭ್ಯವುಳ್ಳ ಬಂದರು ಕೊಚ್ಚಿ ಮತ್ತು ತಿರುವನಂತಪುರದಲ್ಲಿ ಮಾತ್ರ ಇದೆ. ಭಾರತಕ್ಕೆ ಸರಕು ಸಾಗಣೆ ಮಾಡುವ ಕಂಪನಿಗಳು ಕಂಟೇನರ್‌ಗಳ ಮರುಹಂಚಿಕೆಗೆ ಬೇರೆ ದೇಶಗಳ ಬಂದರುಗಳನ್ನು ಅವಲಂಬಿಸಬೇಕಾಗಿದೆ. ಇದಕ್ಕೆ ಹೆಚ್ಚು ಹಣ ವ್ಯಯಿಸಬೇಕಾಗುತ್ತದೆ. ನಮ್ಮಲ್ಲಿಯೇ ಅಂತಹ ಸೌಲಭ್ಯ ಇದ್ದರೆ ಭಾರತದ ಆರ್ಥಿಕತೆಗೆ ಅನುಕೂಲವಾಗಲಿದೆ. ವಿದೇಶಿ ವಿನಿಮಯ ಮೀಸಲು ಹೆಚ್ಚಲಿದೆ ಎಂಬ ವಾದವೂ ಇದೆ.

ರಾಷ್ಟ್ರೀಯ

ಯುಜಿಸಿ-ನೆಟ್ 2026: ನೋಂದಣಿ ಆರಂಭ, ಮೇ 24 ಕೊನೇ ದಿನ

ನವದೆಹಲಿ (ಪಿಟಿಐ): ಜೂನ್‌ನಲ್ಲಿ ನಡೆಯಲಿರುವ ಯುಜಿಸಿ (ವಿಶ್ವವಿದ್ಯಾಲಯ ಅನುದಾನ ಆಯೋಗ)-ನೆಟ್ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ಪೋರ್ಟಲ್ ತೆರೆದಿದೆ.

ಜೂನ್ 22ರಿಂದ 30ರವರೆಗೆ 85 ವಿಷಯಗಳಿಗೆ ಕಂಪ್ಯೂಟರ್ ಆಧಾರಿತ ಪರೀಕ್ಷೆಯನ್ನು (ಸಿಬಿಟಿ) ನಡೆಸಲು ಎನ್‌ಟಿಎ ಮುಂದಾಗಿದೆ.

ಕಿರಿಯ ಸಂಶೋಧಕ ಫೆಲೋಶಿಪ್‌ಗೆ ಅರ್ಹತೆ, ಸಹಾಯಕ ಪ್ರಾಧ್ಯಾಪಕರ ನೇಮಕಾತಿ, ಭಾರತದ ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳಲ್ಲಿ ಪಿಎಚ್‌ಡಿ ದಾಖಲಾತಿಗೆ ಅರ್ಹತೆ ಪಡೆಯಲು ಪರೀಕ್ಷೆ ಬರೆಯಲಾಗುತ್ತದೆ.

ಏಪ್ರಿಲ್ 29ರಿಂದ ಅರ್ಜಿ ಸಲ್ಲಿಕೆ ಆರಂಭವಾಗಿದ್ದು, ಮೇ 24ರವರೆಗೂ ಲಭ್ಯ ಇರಲಿದೆ. ಜೂನ್ 10ರೊಳಗೆ ಪರೀಕ್ಷಾ ಕೇಂದ್ರಗಳನ್ನು ಪ್ರಕಟಿಸಲಾಗುತ್ತದೆ. ಜೂನ್ 15ರಿಂದ ಪ್ರವೇಶ ಪತ್ರ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಾಮಾನ್ಯ ವರ್ಗಕ್ಕೆ ₹1,150, ಹಿಂದುಳಿದ ಮತ್ತು ಇತರೆ ಹಿಂದುಳಿದ ವರ್ಗಕ್ಕೆ ₹600 ಮತ್ತು ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ₹325 ಅರ್ಜಿ ಶುಲ್ಕ ನಿಗದಿಪಡಿಸಲಾಗಿದೆ.

ಅಭ್ಯರ್ಥಿಗಳು https://ugcnet.nta.nic.in/ and www.nta.ac.in. ನಲ್ಲಿ ಅರ್ಜಿ ಸಲ್ಲಿಸಬಹುದು.

ರಾಷ್ಟ್ರೀಯ ಭದ್ರತೆ ಕಾರಣಕ್ಕೆ ಅನ್ಸಾರಿ ಅರ್ಜಿ ವಜಾ: ಹೈಕೋರ್ಟ್

ಮುಂಬೈ (ಪಿಟಿಐ): 26/11 ಮುಂಬೈ ಭಯೋತ್ಪಾದಕ ದಾಳಿ ಪ್ರಕರಣದಲ್ಲಿ ಖುಲಾಸೆಗೊಂಡಿರುವ ಫಹೀಂ ಅನ್ಸಾರಿಗೆ ಪೊಲೀಸ್ ಪರಿಶೀಲನಾ ಪ್ರಮಾಣಪತ್ರ (ಪಿಸಿಸಿ) ನೀಡದಿರಲು ರಾಷ್ಟ್ರೀಯ ಭದ್ರತೆ ಮತ್ತು ಸಾರ್ವಜನಿಕರ ಹಿತಾಸಕ್ತಿ ಕಾರಣ ಎಂದು ಬಾಂಬೆ ಹೈಕೋರ್ಟ್ ತಿಳಿಸಿದೆ.

ಜೀವನೋಪಾಯಕ್ಕಾಗಿ ತಾನು ಆಟೊ ಚಾಲನೆ ಮಾಡಲು ಬಯಸಿದ್ದು, ಇದಕ್ಕೆ ಅಗತ್ಯವಾಗಿರುವ ಪೊಲೀಸ್ ಪಿಸಿಸಿ ನೀಡಲು ಆಡಳಿತವು ತಿರಸ್ಕರಿಸಿ

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು
ಜಾಹೀರಾತುಗಳು

Log on to : https://homages.deccanherald.com
or
Scan QR code to access booking form



15ನೇ ವರ್ಷದ ಚಿರಸ್ಮರಣೆ

ಶ್ರೀ ಕೆ. ರಾಮಯ್ಯ ಅವರು

ಜನನ: 02.04.1933 ಮರಣ: 01.05.2011

ಮಾಜಿ ನಗರಸಭಾ ಸದಸ್ಯರು,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಸ್ಥಾಪಕರು:
ಶ್ರೀ ಲಕ್ಷ್ಮಿವೆಂಕಟೇಶ್ವರ ದೇವಸ್ಥಾನ,
ಚಿಕ್ಕಅಡುಗೋಡಿ, ಬೆಂಗಳೂರು

ನೀವು ನಮ್ಮನ್ನಗಲಿದರೂ ನಿಮ್ಮ ಸರಳತೆ, ಪ್ರೀತಿ ಮತ್ತು ಆದರ್ಶಗಳೇ ನಮಗೆ ದಾರಿದೀಪ. ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿ ನೀಡಲೆಂದು ಪ್ರಾರ್ಥಿಸುತ್ತಾ ಸದಾ ನಿಮ್ಮ ನೆನಪಿನಲ್ಲಿರುವ....

ಮಕ್ಕಳು, ಸೊಸೆಯಂದಿರು, ಅಳಿಯಂದಿರು,
ಮೊಮ್ಮಕ್ಕಳು ಹಾಗೂ ಮರಿಮಕ್ಕಳು.

ಎಸ್.ಆರ್. ಕುಟುಂಬದವರು

ಹನ್ನೆರಡನೇ ವರ್ಷದ ಚಿರಸ್ಮರಣೆ

ಶ್ರೀಯುತ ಎಸ್.ಎನ್. ಬಚ್ಚಣ್ಣನವರು
(ಸಂಪಿಗೇಹಳ್ಳಿ)

ಜನನ: 18-01-1944 – ನಿಧನ: 01-05-2014

ನೀವು ನಮ್ಮನ್ನಗಲಿ ಇಂದಿಗೆ ಹನ್ನೆರಡು ವರ್ಷವಾಗಿದೆ,
ನಿಮ್ಮ ಸವಿ ನೆನಪು ನಮ್ಮ ಮನದಂಗಳದಲ್ಲಿ ಸದಾ ಹಚ್ಚ ಹಸಿರಾಗಿದೆ.
ನಿಮ್ಮ ದಿವ್ಯ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ನೀಡಲಿ ಎಂದು ಪ್ರಾರ್ಥಿಸುವ.

ಶ್ರೀಮತಿ ರಾಧಮ್ಮ ಮತ್ತು ಮಕ್ಕಳು,
ಅಳಿಯ, ಸೊಸೆಯಂದಿರು ಮತ್ತು ಮೊಮ್ಮಕ್ಕಳು
ಶ್ರೀಮತಿ/ ಶ್ರೀ. ಎಸ್.ಎನ್.ಆನಂದಮೂರ್ತಿ & ಮಕ್ಕಳು

25ನೇ ವರ್ಷದ ಪುಣ್ಯಸ್ಮರಣೆ

ನಿಮ್ಮ ಪ್ರೀತಿ, ವಾತ್ಸಲ್ಯ ಮತ್ತು ಮಾರ್ಗದರ್ಶನವನ್ನು
ಅತ್ಯಂತ ಗೌರವಾದರಗಳಿಂದ ಸ್ಮರಿಸುತ್ತೇವೆ

ಶ್ರೀ ಸಿ. ನಾರಾಯಣ ರೆಡ್ಡಿ ವಿಧಾನ ಪರಿಷತ್ ಸದಸ್ಯರಾಗಿದ್ದವರು

ಸಂಸ್ಥಾಪಕರು: ಶ್ರೀ ಮೀನಾಕ್ಷಿ ಸುಂದರೇಶ್ವರ ದೇವಾಲಯ,
ಬನ್ನೇರುಘಟ್ಟ ರಸ್ತೆ, ಬೆಂಗಳೂರು.

ಇವರು ಸ್ವರ್ಗಸ್ಥರಾಗಿ ತಾ॥ 01.05.2026ಕ್ಕೆ 25 ವರ್ಷಗಳಾದವು

"ಕರ್ಮಫಲದಲ್ಲಿ ಆಸಕ್ತಿ ಇಲ್ಲದೆ, ಕರ್ತವ್ಯವೆಂದು ಕರ್ಮವನ್ನು ಮಾಡಬೇಕು. ಅನಾಸಕ್ತ ಕರ್ಮದಿಂದ ಮನುಷ್ಯನು ಪರಮ ಪ್ರಭುವನ್ನು ಹೊಂದಬಹುದು.."
– ಅಧ್ಯಾಯ–3, ಶ್ಲೋಕ–19, ಶ್ರೀಮತ್ ಭಗವದ್ಗೀತೆ

ತಮ್ಮನ್ನು ಸದಾ ಸ್ಮರಿಸುವ :
ಶ್ರೀಮತಿ ವನಿತಾ ಮತ್ತು ಶ್ರೀ ಎನ್. ಸ್ವರೂಪ್ ಕುಮಾರ್,
ಶ್ರೀಮತಿ ಪ್ರಿಯಾಂಕ ಮತ್ತು ಶ್ರೀ ಎನ್. ಶಶಾಂಕ್ ಕುಮಾರ್,
ನಾರಾಯಣ್ ಸ್ವರೂಪ್, ನವರತನ್ ಸ್ವರೂಪ್,
ಆಯನ ಶಶಾಂಕ್, ಅರ್ಹ ವಿಹಾನ ಶಶಾಂಕ್,
ಬಂಧುಗಳು ಹಾಗೂ ಆಪ್ತರು

ಚಿರಸ್ಮರಣೆ

ಶ್ರೀಮತಿ. ಸರೋಜಿನಿ ಕಾರ್ಲೆ

ನಿಧನ: 01–05–2019

ನಿಮ್ಮ ಆದರ್ಶ ಜೀವನ ನಮಗೆ
ಎಂದೆಂದೂ ಮಾರ್ಗದರ್ಶಕ, ನಿಮ್ಮ ನೆನಪು
ನಮಗೆ ಸದಾ ಹಸಿರು ಮತ್ತು ಸ್ಫೂರ್ತಿದಾಯಕ.

ಸದಾ ಸ್ಮರಿಸುವ
ಕುಟುಂಬ ವರ್ಗದವರು

ಸೆನ್ಸೆಕ್ಸ್ ಇಳಿಕೆ

ಮುಂಬೈ/ ನವದೆಹಲಿ (ಪಿಟಿಐ): ಕಚ್ಚಾ ತೈಲ ಬೆಲೆ ಏರಿಕೆ ಮತ್ತು ವಿದೇಶಿ ಬಂಡವಾಳದ ಹೊರಹರಿವಿನಿಂದ ದೇಶದ ಷೇರುಪೇಟೆ ಸೂಚ್ಯಂಕಗಳು ಗುರುವಾರದ ವಹಿವಾಟಿನಲ್ಲಿ ಇಳಿಕೆ ಕಂಡಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 582 ಅಂಶ ಇಳಿಕೆಯಾಗಿ, 76,913ಕ್ಕೆ ವಹಿವಾಟು ಕೊನೆಗೊಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 180 ಅಂಶ ಕಡಿಮೆಯಾಗಿ, 23,997ಕ್ಕೆ ಅಂತ್ಯಗೊಂಡಿದೆ.

ಚಿನ್ನದ ದರ ಏರಿಕೆ, ಬೆಳ್ಳಿ ಇಳಿಕೆ: ದೆಹಲಿಯ ಚಿನಿವಾರ ಪೇಟೆಯಲ್ಲಿ ಗುರುವಾರದ ವಹಿವಾಟಿನಲ್ಲಿ ಚಿನ್ನದ ದರವು ಏರಿಕೆಯಾಗಿದೆ, ಬೆಳ್ಳಿ ಬೆಲೆಯು ಇಳಿದಿದೆ. 10 ಗ್ರಾಂ ಚಿನ್ನದ (ಶೇ 99.9ರಷ್ಟು ಪರಿಶುದ್ಧತೆ) ದರವು ₹2 ಸಾವಿರ ಹೆಚ್ಚಳವಾಗಿ, ₹1,54,800ರಂತೆ ಮಾರಾಟವಾಗಿದೆ. ಬೆಳ್ಳಿ ಬೆಲೆಯು ಕೆ.ಜಿಗೆ ₹1,800 ಕಡಿಮೆಯಾಗಿ, ₹2,42,700ಕ್ಕೆ ಇಳಿದಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ರೂಪಾಯಿ ಮೌಲ್ಯ ಏರಿಕೆ: ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಡಾಲರ್ ಎದುರು ರೂಪಾಯಿ ಮೌಲ್ಯವು 4 ಪೈಸೆ ಏರಿಕೆಯಾಗಿ, ವಹಿವಾಟಿನ ಅಂತ್ಯದ ವೇಳೆಗೆ 94.84 ಆಗಿದೆ. ವಹಿವಾಟಿನ ಒಂದು ಸಂದರ್ಭದಲ್ಲಿ ರೂಪಾಯಿ ಮೌಲ್ಯವು 95.34 ಕ್ಕೆ ಇಳಿದಿತ್ತು. ಇದು ಸಾರ್ವಕಾಲಿಕ ಕನಿಷ್ಠ ಮಟ್ಟವಾಗಿತ್ತು.

15ನೇ ವರ್ಷದ ಪುಣ್ಯಸ್ಮರಣೆ

ಶ್ರೀ ಎಲ್. ನಾರಾಯಣಸ್ವಾಮಿಯವರು
(ಮಾಜಿ ಛೇರ್ಮನ್, ರಾಜೇನಹಳ್ಳಿ, ಬೆಂಗಳೂರು–77)

ನೀವು ನಮ್ಮನ್ನಗಲಿ ಇಂದಿಗೆ 15 ವರ್ಷಗಳು ಕಳೆದವು (01.05.2011)

ನಿಮ್ಮ ಮಾರ್ಗದರ್ಶನವೇ ನಮಗೆ ದಾರಿದೀಪವಾಗಿದೆ. ನಿಮ್ಮ ಸವಿನೆನಪುಗಳು ನಮ್ಮ ಹೃದಯಗಳಲ್ಲಿ ಸದಾ ಅಚ್ಚಳಿಯದೇ ಉಳಿದಿದೆ.

ಇಂತಿ ಸದಾ ನಿಮ್ಮ ನೆನಪಿನಲ್ಲಿ
–:: ಧರ್ಮಪತ್ನಿ ::–
ಶ್ರೀಮತಿ ಜಿ.ಎನ್. ನಾಗರತ್ನಮ್ಮ
ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು
ಹಾಗೂ ಕುಟುಂಬದವರು



ಷೇರುಪೇಟೆ ವಹಿವಾಟು

ಎನ್ಎಸ್ಇ ನಿಫ್ಟಿ
ಹಿಂದಿನ ಅಂತ್ಯ: 24,177
ಇಂದಿನ ಅಂತ್ಯ: 23,997
ದಿನದ ಕನಿಷ್ಠ: 23,796
180

ಮೊಟ್ಟೆ ಧಾರಣೆ (ಎನ್ಇಸಿಸಿ)
ಬೆಂಗಳೂರು
100 ಕ್ಕೆ ₹580
12 ಕ್ಕೆ ₹78
ಮೈಸೂರು: 100 ಕ್ಕೆ ₹585

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)
ಆರ್ಎಸ್ಎಸ್-4 ₹244
ಆರ್ಎಸ್ಎಸ್-5 ₹239
ಗುಡ್ ಲಾಟ್ ₹211

ರಾಮನಗರ ರೇಷ್ಮೆಗೂಡು
ಮಿಶ್ರತಳಿ(ಸಿ.ಬಿ) ₹300-620
ದ್ವಿತಳಿ (ಬಿ.ವಿ) ₹350-751

ಮುದ್ರಮನೆ ಕಾಫಿ (50 ಕೆಜಿಗೆ)
ಎಪಿ ₹23900
ಎಸಿ ₹14050
ಆರ್ಪಿ ₹18200
ಆರ್ಸಿ ₹9830

3 ಕಡೆ ಸುಸ್ಥಿರ ದತ್ತಾಂಶ ಪಾರ್ಕ್ ಸ್ಥಾಪನೆ

ಅಧಿಕಾರಿಗಳ ಸಭೆ ನಡೆಸಿದ ಕೆ.ಜೆ. ಜಾರ್ಜ್, ಎಂ.ಬಿ. ಪಾಟೀಲ, ಪ್ರಿಯಾಂಕ್ ಖರ್ಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೈಗಾರಿಕಾ ಬೆಳವಣಿಗೆಗೆ ಸುಸ್ಥಿರ ದತ್ತಾಂಶ ಕೇಂದ್ರಗಳು ಅಗತ್ಯವಿದ್ದು, ಬೆಂಗಳೂರು, ಮೈಸೂರು ಮತ್ತು ಮಂಗಳೂರಿನಲ್ಲಿ 'ದತ್ತಾಂಶ' ಪಾರ್ಕ್ ಸ್ಥಾಪಿಸಲು ಸಚಿವರ ಸಭೆ ತೀರ್ಮಾನಿಸಿದೆ.

ಗುರುವಾರ ನಡೆದ ಪ್ರಾಥಮಿಕ ಸಭೆಯಲ್ಲಿ ಇಂಧನ ಸಚಿವ ಕೆ.ಜೆ. ಜಾರ್ಜ್, ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಮತ್ತು ಐ.ಟಿ-ಬಿ.ಟಿ ಸಚಿವ ಪ್ರಿಯಾಂಕ್ ಖರ್ಗೆ ಭಾಗವಹಿಸಿದ್ದರು.

ಬೆಂಗಳೂರಿನಲ್ಲಿ ಹೊಸಕೋಟೆಯ ಸಮೀಪ 500 ಮೆಗಾವಾಟ್ ಸಾಮರ್ಥ್ಯದ ಸುಸ್ಥಿರ ದತ್ತಾಂಶ ಪಾರ್ಕ್ ಸ್ಥಾಪಿಸಲಾಗುವುದು. ಅಲ್ಲಿಗೆ ಪಾವಗಡದಿಂದ ಸೌರ ವಿದ್ಯುತ್ ನೇರವಾಗಿ ಪೂರೈಕೆಯಾಗಲಿದೆ. ಜೊತೆಗೆ, ಬೆಂಗಳೂರು ಜಲ ಮಂಡಳಿಯು ಎರಡು ಹಂತಗಳಲ್ಲಿ ಸಂಸ್ಕರಿಸಿದ 60 ಎಂಎಲ್‌ಡಿ ನೀರು ಪೂರೈಸಲಿದ್ದು, ಈ ನೀರಿನ ಮೂರನೇ ಹಂತದ ಶುದ್ಧೀಕರಣವನ್ನು ಉದ್ಯಮಗಳೇ ಮಾಡಿಕೊಳ್ಳುತ್ತವೆ. ಈ ಮೂರೂ ಪಾರ್ಕ್‌ಗಳ ಸಾಮರ್ಥ್ಯ 1,000 ಮೆಗಾವಾಟ್ ಇರಲಿದೆ ಎಂದು ಮೂವರು ಸಚಿವರ ಜಂಟಿ ಹೇಳಿಕೆ ತಿಳಿಸಿದೆ.

ಮಂಗಳೂರಿನಲ್ಲಿ ಕೂಡ ದತ್ತಾಂಶ ಪಾರ್ಕ್ ಸ್ಥಾಪನೆಗೆ ಭೂಮಿಯು ಲಭ್ಯವಿದೆ. ಅಲ್ಲಿನ ಬೈಕಂಪಾಡಿ ಕೈಗಾರಿಕಾ ಪ್ರದೇಶದಲ್ಲಿ ಕೆಐಎಡಿಬಿಗೆ ಸೇರಿದ 350 ಎಕರೆ ಇದೆ. ಮೈಸೂರಿನಲ್ಲಿ ಈ ಉದ್ದೇಶಕ್ಕೆ ಸೂಕ್ತ ಜಾಗ ಗುರುತಿಸಲಾಗುವುದು ಎಂದು ವಿವರಿಸಿದೆ.

ಈ ಪಾರ್ಕ್‌ಗಳಲ್ಲಿ ಯಾರೇ ಬಂದು ದತ್ತಾಂಶ ಕೇಂದ್ರ ಸ್ಥಾಪನೆಗೆ ಹೂಡಿಕೆ ಮಾಡಿದರೆ, ವಿದ್ಯುತ್ ಮತ್ತು ನೀರು ನೀಡಲಾಗುವುದು. ಅದಕ್ಕೆ ಪೂರಕವಾದ ಸಿದ್ಧತೆ ಮಾಡಿಕೊಳ್ಳಲು ಹಾಗೂ ಹೂಡಿಕೆದಾರರ ಜತೆಗೂ ಸಭೆ ನಡೆಸಲು ಮೂವರು ಸಚಿವರು ಅಧಿಕಾರಿಗಳಿಗೆ ಸೂಚಿಸಿದರು.

ಜಲಸಂಪನ್ಮೂಲ ಖಾತೆ ಹೊಂದಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರೂ ಇರುವ ಸಚಿವರ ತಂಡ ಮತ್ತು ಉನ್ನತ ಅಧಿಕಾರಿಗಳ ತಂಡವನ್ನು ಮುಂದಿನ ಹಂತದಲ್ಲಿ ರಚಿಸಲು ಸಭೆ ನಿರ್ಧರಿಸಿದೆ.

ಸಭೆಯಲ್ಲಿ ಇಂಧನ ಮತ್ತು ಜಲ ಸಂಪನ್ಮೂಲ ಇಲಾಖೆ ಕಾರ್ಯದರ್ಶಿ ಗೌರವ್ ಗುಪ್ತ, ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್, ಐಟಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ಮಂಜುಳಾ, ಕೆಎಸ್ಐಐಡಿಸಿ ವ್ಯವಸ್ಥಾಪಕ ನಿರ್ದೇಶಕಿ ಖುಷ್ಬು ಗೋಯಲ್, ಕೆಐಎಡಿಬಿ ವ್ಯವಸ್ಥಾಪಕ ನಿರ್ದೇಶಕ ಡಾ. ಮಹೇಶ್, ಬೆಂಗಳೂರು ಜಲ ಮಂಡಳಿಯ ಅಧ್ಯಕ್ಷ ರಾಮ ಪ್ರಸಾತ್ ಮನೋಹರ್, ಐಟಿ ನಿರ್ದೇಶಕ ರಾಹುಲ್ ಸಂಕನೂರು ಇದ್ದರು.

ಕಚ್ಚಾ ತೈಲದ ಬೆಲೆ 4 ವರ್ಷದ ಗರಿಷ್ಠ

ಲಂಡನ್/ ನವದೆಹಲಿ (ಪಿಟಿಐ/ ಎಎಫ್‌ಪಿ): ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಯು ಗುರುವಾರ ನಾಲ್ಕು ವರ್ಷಗಳ ಗರಿಷ್ಠ ಮಟ್ಟವನ್ನು ತಲುಪಿತು. ಪಶ್ಚಿಮ ಏಷ್ಯಾದಲ್ಲಿನ ಬಿಕ್ಕಟ್ಟು ಮತ್ತೆ ತೀವ್ರಗೊಳ್ಳಬಹುದು ಎಂಬ ಆಂತಕದ ಕಾರಣದಿಂದಾಗಿ ಕಚ್ಚಾ ತೈಲದ ಬೆಲೆಯು ಜಿಗಿದಿದೆ ಎಂದು ತಜ್ಞರು ಹೇಳಿದ್ದಾರೆ.

ಬ್ರೆಂಟ್ ಕಚ್ಚಾ ತೈಲದ ಬೆಲೆಯು ಗುರುವಾರದ ವಹಿವಾಟಿನಲ್ಲಿ ಬ್ಯಾರಲ್ ಒಂದಕ್ಕೆ 126 ಡಾಲರ್ ಮಟ್ಟವನ್ನು ತಲುಪಿತ್ತು. ನಂತರ ಅದು ತುಸು ಕಡಿಮೆ ಆಯಿತು. ಬ್ರೆಂಟ್ ಕಚ್ಚಾ ತೈಲದ ಬೆಲೆಯು ಈ ಮಟ್ಟವನ್ನು ಕಡೆಯ ಬಾರಿ ತಲುಪಿದ್ದು 2022ರ ಮಾರ್ಚ್ 8ರಂದು.

ಇರಾನ್‌ನ ಬಂದರುಗಳ ಮೇಲಿನ ದಿಗ್ಬಂಧನವು ತಿಂಗಳುಗಳವರೆಗೆ ಮುಂದುವರಿಯಬಹುದು ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಕೆ ನೀಡಿರುವುದು ವಿವಿಧೆಡೆ ಮಾರುಕಟ್ಟೆಗಳ ಮೇಲೆ ಪರಿಣಾಮ ಬೀರಿದೆ. ಇರಾನ್ ಗುರಿಯಾಗಿಸಿ ಹೊಸದಾಗಿ ಮಿಲಿಟರಿ ಕಾರ್ಯಾಚರಣೆ ನಡೆಸುವ ಬಗ್ಗೆ ಟ್ರಂಪ್ ಅವರಿಗೆ ಮಾಹಿತಿ ಒದಗಿಸಲಾಗುತ್ತದೆ ಎಂಬ ವರದಿಗಳೂ ಇವೆ.

'ಶಾಂತಿ ಸ್ಥಾಪನೆ ಉದ್ದೇಶದ ಮಾತುಕತೆಗಳು ನಡೆಯುವ ಯಾವುದೇ ಸೂಚನೆ ಕಾಣುತ್ತಿಲ್ಲ, ಸಂಘರ್ಷವು ತೀವ್ರ ಆಗಬಹುದು ಎಂಬ ಭೀತಿ ಹೆಚ್ಚಾಗಿದೆ. ಹೀಗಾಗಿ ಕಚ್ಚಾ ತೈಲದ ಬೆಲೆಯು ಹೆಚ್ಚಳ ಕಂಡಿದೆ' ಎಂದು ಡಾಯಿಚ್ ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಜಿಮ್ ರೀಡ್ ಹೇಳಿದ್ದಾರೆ.

ಯುಎಇ ದೇಶವು ಪೆಟ್ರೋಲಿಯಂ ರಫ್ತುದಾರ ದೇಶಗಳ ಸಂಘಟನೆ 'ಒಪೆಕ್'ನಿಂದ ಹೊರಬರುವ ತೀರ್ಮಾನ ತೆಗೆದುಕೊಂಡಿರುವುದು ಕೂಡ ತೈಲ ಬೆಲೆ ಏರಿಕೆಗೆ ಒಂದು ಕಾರಣ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಕೇಂದ್ರದಿಂದ ಎಲ್‌ಪಿಜಿ, ಪಿಎನ್‌ಜಿ ಸಂಪರ್ಕ ಪರಿಶೀಲನೆ

ನವದೆಹಲಿ (ಪಿಟಿಐ): ಎಲ್‌ಪಿಜಿ ಹಾಗೂ ಪಿಎನ್‌ಜಿ ಸಂಪರ್ಕಗಳೆರಡನ್ನೂ ಹೊಂದಿರುವ ಕುಟುಂಬಗಳನ್ನು ಗುರುತಿಸುವ ಕೆಲಸವನ್ನು ಕೇಂದ್ರ ಸರ್ಕಾರ ಮಾಡುತ್ತಿದೆ.

ಈ ಎರಡೂ ಸಂಪರ್ಕ ಹೊಂದಿರುವ ಕುಟುಂಬಗಳನ್ನು ಗುರುತಿಸಿ, ಪಿಎನ್‌ಜಿ ಸಂಪರ್ಕ ಇರುವವರಿಗೆ ಎಲ್‌ಪಿಜಿ ಸಂಪರ್ಕ ರದ್ದುಪಡಿಸುವ ಉದ್ದೇಶ ಸರ್ಕಾರದ್ದಾಗಿದೆ. ಇದಕ್ಕೆ ಸಂಬಂಧಿಸಿದ ಆದೇಶವನ್ನು ಈಗಾಗಲೇ ಹೊರಡಿಸಿದೆ.

ಪಿಎನ್‌ಜಿ ಸಂಪರ್ಕ ಇರುವ ಗ್ರಾಹಕರು ತಮ್ಮ ಮನೆಬಳಕೆ ಎಲ್‌ಪಿಜಿ ಸಂಪರ್ಕ ರದ್ದುಪಡಿಸುವುದು ಕಡ್ಡಾಯ ಎಂದು ಸರ್ಕಾರವು ಮಾರ್ಚ್ 14ರಂದು ಆದೇಶಿಸಿದೆ.

ಪಿಎನ್‌ಜಿ ಬಳಕೆಯನ್ನು ಹೆಚ್ಚು ಮಾಡಿ, ಎಲ್‌ಪಿಜಿ ಪೂರೈಕೆ ಮೇಲಿನ ಒತ್ತಡವನ್ನು ಕಡಿಮೆ ಮಾಡುವುದು ಸರ್ಕಾರದ ಉದ್ದೇಶ. ಈಗಾಗಲೇ ಪಿಎನ್‌ಜಿ ಸಂಪರ್ಕ ಹೊಂದಿರುವವರಿಗೆ ಹೊಸದಾಗಿ ಎಲ್‌ಪಿಜಿ ಸಂಪರ್ಕ ನೀಡಬಾರದು, ಎಲ್‌ಪಿಜಿ ಸಿಲಿಂಡರ್ ಭರ್ತಿ ಮಾಡಿಕೊಡಬಾರದು ಎಂದು ಕೂಡ ಕೇಂದ್ರ ಸರ್ಕಾರವು ತನ್ನ ಮಾಲೀಕತ್ವದ ತೈಲೋತ್ಪನ್ನ ಮಾರಾಟ ಕಂಪನಿಗಳಿಗೆ ಸೂಚಿಸಿದೆ.

'ಎಷ್ಟು ಜನರ ಬಳಿ ಪಿಎನ್‌ಜಿ ಹಾಗೂ ಎಲ್‌ಪಿಜಿ ಸಂಪರ್ಕ ಇವೆ ಎಂಬುದನ್ನು ಪರಿಶೀಲಿಸಲಾಗುತ್ತಿದೆ' ಎಂದು ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯದ ಜಂಟಿ ಕಾರ್ಯದರ್ಶಿ ಸುಜಾತಾ ಶರ್ಮಾ ತಿಳಿಸಿದ್ದಾರೆ.

ಇದುವರೆಗೆ, ಪಿಎನ್‌ಜಿ ಸಂಪರ್ಕವನ್ನು ಕೂಡ ಹೊಂದಿರುವ 43 ಸಾವಿರಕ್ಕಿಂತ ಹೆಚ್ಚು ಮಂದಿ ಎಲ್‌ಪಿಜಿ ಬಳಕೆದಾರರು ತಮ್ಮ ಎಲ್‌ಪಿಜಿ ಸಂಪರ್ಕ ಮರಳಿಸಿದ್ದಾರೆ. 'ಈ ಸಂಖ್ಯೆ ಇನ್ನಷ್ಟು ಹೆಚ್ಚುತ್ತದೆ ಎಂಬುದು ನಮ್ಮ ನಿರೀಕ್ಷೆ' ಎಂದು ಸುಜಾತಾ ಹೇಳಿದ್ದಾರೆ.

'ಇನ್ಫಿ'ಗೆ ನಿತಿನ್ ಪರಾಂಜಪೆ ನೇಮಕ

ನವದೆಹಲಿ (ಪಿಟಿಐ): ಐ.ಟಿ. ಸೇವಾ ಕಂಪನಿ ಇನ್ಫೊಸಿಸ್, ನಿತಿನ್ ಪರಾಂಜಪೆ ಅವರನ್ನು ತನ್ನ ಆಡಳಿತ ಮಂಡಳಿಯ ಕಾರ್ಯನಿರ್ವಾಹಕೇತರ ಉಪಾಧ್ಯಕ್ಷ ಸ್ಥಾನಕ್ಕೆ ತಕ್ಷಣದಿಂದ ಜಾರಿಗೆ ಬರುವಂತೆ ನೇಮಕ ಮಾಡಿದೆ.

ಪರಾಂಜಪೆ ಅವರು ಹಿಂದುಸ್ತಾನ್ ಯೂನಿಲಿವರ್ ಲಿಮಿಟೆಡ್‌ನ (ಎಚ್‌ಯುಎಲ್) ಕಾರ್ಯನಿರ್ವಾಹಕೇತರ ಅಧ್ಯಕ್ಷ ಸ್ಥಾನವನ್ನೂ ಹೊಂದಿದ್ದಾರೆ.

'ನಾನು ಆಡಳಿತ ಮಂಡಳಿಯ ಅಧ್ಯಕ್ಷ ಸ್ಥಾನದಲ್ಲಿ ಎಲ್ಲಿಯವರೆಗೆ ಅಗತ್ಯವಿದೆಯೋ ಅಲ್ಲಿಯವರೆಗೆ ಮುಂದುವರಿಯುತ್ತೇನೆ. ಅಧ್ಯಕ್ಷ ಸ್ಥಾನದಲ್ಲಿ ಬದಲಾವಣೆಯ ಆಲೋಚನೆ ಇಲ್ಲ' ಎಂದು ಇನ್ಫೊಸಿಸ್ ಅಧ್ಯಕ್ಷ ನಂದನ್ ನಿಲೇಕಣಿ ತಿಳಿಸಿದ್ದಾರೆ.

ಇನ್ಫಿಗೆ ಮೊದಲ ಸ್ಥಾನ: ವ್ಯತ್ತಿಯಲ್ಲಿ ಬೆಳವಣಿಗೆ ಕಲ್ಪಿಸುವ ಕಂಪನಿಗಳ ಪಟ್ಟಿಯಲ್ಲಿ ಇನ್ಫೊಸಿಸ್ ದೇಶದಲ್ಲಿ ಮೊದಲ ಸ್ಥಾನದಲ್ಲಿದೆ. ಇನ್ಫೊಸಿಸ್ ನಂತರದ ಸ್ಥಾನಗಳಲ್ಲಿ ಆಕ್ಸೆಂಚರ್ ಮತ್ತು ಅಮೆಜಾನ್ ಇವೆ ಎಂದು ಲಿಂಕ್ಡ್‌ಇನ್ ಸಿದ್ಧಪಡಿಸಿರುವ '2026 ಟಾಪ್ ಕಂಪನಿಗಳು' ವರದಿ ಹೇಳಿದೆ. ಪ್ರಮುಖ ಕಂಪನಿಗಳಿಗೆ ಬೆಂಗಳೂರು ಪ್ರತಿಭೆಗಳನ್ನು ಸೆಳೆಯುವ ಮುಖ್ಯ ಕೇಂದ್ರವಾಗಿ ಮುಂದುವರಿದಿದೆ.

ಪೈಪೋಟಿಲಿ TMC-BJP ನಡುವೆ ಸಮಬಲ ಕಂಡು ಬಂದಿರುವ ಪಶ್ಚಿಮ ಬಂಗಾಳ ಚುನಾವಣೆಯಲ್ಲಿ ಮತಗಟ್ಟೆ ಸಮೀಕ್ಷೆಗಳು ನಿಜವಾಗಲಿವೆಯೇ?

● ಹೌದು ● ಇಲ್ಲ

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹35000-35000
ತಿಪಟೂರು	₹31800-35000
ತುರುವೇಕೆರೆ	₹17000-17000

ಅಡಿಕೆ ಧಾರಣೆ

ಕುಮಟಾ	
ಚಿಪ್ಪು	25109-43499
ಕೋಕ	20001-34501
ಹಳೆಚಾಲಿ	36499-48798
ಹೊಸಚಾಲಿ	41299-46899
ಪುತ್ತೂರು	
ಕೋಕ	20000-34500
ಹೊಸತು	30000-47500
ಸಾಗರ	
ಬಿಳಿಗೋಟು	14799-34900
ಚಾಲಿ	32999-43619
ಕೋಕ	13666-35699
ಕೆಂಪುಗೋಟು	27119-41829
ರಾಶಿ	37699-55829
ಸಿಪ್ಪೆಗೋಟು	9299-22899
ಶಿವಮೊಗ್ಗ	
ಸರಕು	54859-93696
ಬೆಟ್ಟೆ	51900-64589
ರಾಶಿ	46009-55559
ಗೊರಬಲು	19009-42899
ಸಿದ್ದಾಪುರ	
ಬಿಳಿಗೋಟು	27919-35219
ಚಾಲಿ	41000-46599
ಕೋಕ	22699-33789
ಕೆಂಪುಗೋಟು	34000-34600
ರಾಶಿ	44919-53099
ತಟ್ಟಿಬೆಟ್ಟೆ	39099-41000
ಯಲ್ಲಾಪುರ	
ಆಪಿ	56821-56821
ಬಿಳಿಗೋಟು	22012-38299
ಚಾಲಿ	38300-49001
ಕೋಕ	15000-36112
ಕೆಂಪುಗೋಟು	18829-37411
ರಾಶಿ	50189-56699
ತಟ್ಟಿಬೆಟ್ಟೆ	37169-49899

ಅನಿಲ್ ಅಂಬಾನಿ ಬ್ಯಾಂಕ್ ಸಾಲ ವಂಚನೆ ಆರೋಪ: ಮೇ 8ಕ್ಕೆ ಪಿಐಎಲ್ ವಿಚ

ಮರು ಮತದಾನಕ್ಕೆ ಅರ್ಜಿ: ಪರಿಶೀಲನೆ

ಪಶ್ಚಿಮ ಬಂಗಾಳದ ದಕ್ಷಿಣ 24 ಪರಗಣ ಜಿಲ್ಲೆಯ ನಾಲ್ಕು ಕ್ಷೇತ್ರಗಳ 77 ಮತಗಟ್ಟೆಗಳಲ್ಲಿ ಮರು ಮತದಾನಕ್ಕೆ ಆಗ್ರಹ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದ ವಿಧಾನಸಭೆಗೆ ಏ.29 ರಂದು ನಡೆದ ಎರಡನೇ ಹಂತದ ಚುನಾವಣೆಯಲ್ಲಿ ದಕ್ಷಿಣ 24 ಪರಗಣ ಜಿಲ್ಲೆಯ ನಾಲ್ಕು ವಿಧಾನಸಭಾ ಕ್ಷೇತ್ರಗಳ 77 ಮತಗಟ್ಟೆಗಳಲ್ಲಿ ಮರು ಮತದಾನಕ್ಕೆ ಆಗ್ರಹಿಸಿ ಬಂದಿರುವ ಅರ್ಜಿಗಳನ್ನು ಚುನಾವಣಾ ಆಯೋಗ ಸಕ್ರಿಯವಾಗಿ ಪರಿಶೀಲಿಸುತ್ತಿದೆ ಎಂದು ಅಧಿಕಾರಿಯೊಬ್ಬರು ಗುರುವಾರ ತಿಳಿಸಿದ್ದಾರೆ.

ಫಾಲ್ಟಾ ಕ್ಷೇತ್ರದಿಂದ ಮರು ಮತದಾನಕ್ಕೆ ಆಗ್ರಹಿಸಿ 32 ದೂರುಗಳು ಸಲ್ಲಿಕೆಯಾಗಿವೆ. ಇದೇ ಅಲ್ಲದೆ ಡೈಮಂಡ್ ಹಾರ್ಬರ್‌ನಿಂದ 29, ಮಗ್ರಹತ್‌ನಿಂದ 13 ಮತ್ತು ಬಜ್ ಬಜ್ ಕ್ಷೇತ್ರದಿಂದ ಮೂರು ದೂರುಗಳು ಸಲ್ಲಿಕೆಯಾಗಿವೆ ಎಂದು ಅವರು ಮಾಹಿತಿ ನೀಡಿದರು.

ವಿದ್ಯುನ್ಮಾನ ಮತಯಂತ್ರಗಳ (ಇವಿಎಂ) ಅಸಮರ್ಪಕ ಕಾರ್ಯ, ಇವಿಎಂ ವಶ, ಮತಗಟ್ಟೆ ವ್ಯಾಪ್ತಿಯಲ್ಲಿ ಬೆದರಿಕೆ, ಮತದಾನದ ಗೋಪ್ಯತೆ ಉಲ್ಲಂಘನೆಯಂತಹ ಅಕ್ರಮಗಳನ್ನು ಉಲ್ಲೇಖಿಸಿ ರಾಜಕೀಯ ಪಕ್ಷಗಳು, ಅಭ್ಯರ್ಥಿಗಳು, ಮತಗಟ್ಟೆ ಏಜೆಂಟ್‌ಗಳು ಅಥವಾ ಚುನಾವಣಾ ವೀಕ್ಷಕರು ಮರು ಮತದಾನಕ್ಕೆ ಬೇಡಿಕೆಗಳನ್ನು ಸಲ್ಲಿಸಬಹುದು.

ಪಶ್ಚಿಮ ಬಂಗಾಳದಲ್ಲಿ ಎರಡನೇ ಹಂತದ ಮತದಾನ ಮುಗಿದ ಕೂಡಲೇ ಕೆಲವೆಡೆ ಇವಿಎಂ ತಿರುಚಿದ, ಇವಿಎಂ ದುರ್ಬಳಕೆ ಮಾಡಿದ, ಕಣ್ಗಾವಲು ಕ್ಯಾಮೆರಾಗಳಿಗೆ ಅಡ್ಡಿ ಮಾಡಿದ ದೂರುಗಳು ಬಂದಿದ್ದವು. ಈ ದೂರುಗಳನ್ನು ಗಂಭೀರವಾಗಿ ಪರಿಗಣಿಸಿದ ಚುನಾವಣಾ ಆಯೋಗ ಅವುಗಳನ್ನು ಪರಿಶೀಲಿಸಿ ವರದಿ ನೀಡುವಂತೆ ವಿಶೇಷ ವೀಕ್ಷಕ ಸುಬ್ರತಾ ಗುಪ್ತಾ ಅವರಿಗೆ ನಿರ್ದೇಶಿಸಿದೆ.

ಮತಗಟ್ಟೆ ಮಟ್ಟದಲ್ಲಿ ತಪಾಸಣೆ ನಡೆಸುತ್ತಿರುವ ಗುಪ್ತಾ ಅವರು ಇತರ ವೀಕ್ಷಕರ ಜತೆ ಸಮಾಲೋಚನೆಯಲ್ಲೂ ತೊಡಗಿದ್ದಾರೆ. ಗುಪ್ತಾ ಅವರಿಂದ ವರದಿ ಸಲ್ಲಿಕೆಯಾದ ಬಳಿಕ ಆಯೋಗವು ಮರು ಮತದಾನದ ಬಗ್ಗೆ ಅಂತಿಮ ನಿರ್ಧಾರ ತೆಗೆದುಕೊಳ್ಳುತ್ತದೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಪ್ರಜಾಮತ ಜನತಂತ್ರದ ಹಬ್ಬ
ವಿಧಾನಸಭಾ ಚುನಾವಣೆ - 2026

'ಬಂಗಾಳ, ಅಸ್ಸಾಂನಲ್ಲಿ ಬಿಜೆಪಿ ಸರ್ಕಾರ'

ಪ್ರಜಾವಾಣಿ ವಾರ್ತೆ

ಧರ್ಮೇಂದ್ರ ಪ್ರಧಾನ್

ಬೆಂಗಳೂರು: ಪಶ್ಚಿಮ ಬಂಗಾಳ ಮತ್ತು ಅಸ್ಸಾಂನಲ್ಲಿ ಬಿಜೆಪಿ ಸರ್ಕಾರ ರಚನೆ ಆಗುವುದು ಖಚಿತ ಎಂದು ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್ ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಸುದ್ದಿಗಾರರ ಜತೆ ಮಾತನಾಡಿದ ಅವರು, ಪಶ್ಚಿಮ ಬಂಗಾಳದ ಜನತೆ ಪ್ರಧಾನಿ ಮೋದಿಯವರ ಮೇಲೆ ವಿಶ್ವಾಸವಿಟ್ಟಿದ್ದಾರೆ. ಅಸ್ಸಾಂನಲ್ಲಿ ಜನರು ಮೂರನೇ ಬಾರಿಗೆ ಸೇವೆ ಮಾಡುವ ಅವಕಾಶ ನೀಡಲಿದ್ದಾರೆ ಎಂದು ತಿಳಿಸಿದರು.

ಬಂಗಾಳದಲ್ಲಿ ಈ ಬಾರಿ ರಾಷ್ಟ್ರವಾದಿಗಳ ಸರ್ಕಾರ ರಚನೆ ಆಗಲಿದೆ. ಪುದುಚೆರಿಯಲ್ಲಿ ಎನ್‌ಡಿಎ ಸರ್ಕಾರ ಅಧಿಕಾರ ಹಿಡಿಯುತ್ತದೆ. ತಮಿಳುನಾಡಿನಲ್ಲಿ ಒಳ್ಳೆಯದೇ ಆಗಲಿದೆ. ಕೇರಳದಲ್ಲಿ ಬಿಜೆಪಿ ಪ್ರಮುಖ ಶಕ್ತಿಯಾಗಿ ಹೊರಹೊಮ್ಮುತ್ತದೆ ಎಂದರು.

ಎಣಿಕೆ ಕೇಂದ್ರ ಪ್ರವೇಶಕ್ಕೆ ಕ್ಯೂಆರ್ ಕೋಡ್ ಐ.ಡಿ

ಕೋಲ್ಕತ್ತ (ಪಿಟಿಐ): ನಾಲ್ಕು ರಾಜ್ಯಗಳು ಮತ್ತು ಒಂದು ಕೇಂದ್ರಾಡಳಿತ ಪ್ರದೇಶದ ವಿಧಾನಸಭಾ ಚುನಾವಣೆಯ ಮತ ಎಣಿಕೆ ಕೇಂದ್ರಗಳ ಪ್ರವೇಶಕ್ಕೆ ಕ್ಯೂಆರ್ ಕೋಡ್ ಆಧಾರಿತ ಗುರುತಿನ ಚೀಟಿಗಳನ್ನು ಚುನಾವಣಾ ಆಯೋಗ ಪರಿಚಯಿಸಿದೆ.

ಎಣಿಕೆ ಸಮಯದಲ್ಲಿ ಅನಧಿಕೃತ ಪ್ರವೇಶಗಳನ್ನು ತಡೆಯಲು ಆಯೋಗ ಈ ಕ್ರಮ ತೆಗೆದುಕೊಂಡಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ಗುರುವಾರ ಮಾಹಿತಿ ನೀಡಿದರು.

ಈ ವ್ಯವಸ್ಥೆಯನ್ನು ಪಶ್ಚಿಮ ಬಂಗಾಳ, ಅಸ್ಸಾಂ, ಕೇರಳ, ತಮಿಳುನಾಡು ಮತ್ತು ಪುದುಚೆರಿ ವಿಧಾನಸಭಾ ಚುನಾವಣೆಯ ಮತ ಎಣಿಕೆ ಕೇಂದ್ರಗಳಲ್ಲಿ ಮತ್ತು ಐದು ರಾಜ್ಯಗಳಲ್ಲಿನ ಏಳು ಉಪ ಚುನಾವಣೆಗಳ ಮತ ಎಣಿಕೆ ಕೇಂದ್ರಗಳಲ್ಲಿ ಜಾರಿಗೆ ತರಲಾಗುವುದು. ನಂತರ ಇದನ್ನು ಎಲ್ಲ ಲೋಕಸಭಾ ಮತ್ತು ವಿಧಾನಸಭಾ ಚುನಾವಣೆಗಳಿಗೆ ವಿಸ್ತರಿಸಲಾಗುವುದು ಎಂದರು.

ಎಣಿಕೆ ಕೇಂದ್ರಗಳಲ್ಲಿ ಮೂರು ಹಂತದ ಭದ್ರತಾ ವ್ಯವಸ್ಥೆ ಜಾರಿಗೆ ತರಲಾಗಿದೆ. ಅದರಲ್ಲಿ ಮೊದಲ ಎರಡು ಭದ್ರತಾ ಚೆಕ್‌ಪಾಯಿಂಟ್‌ಗಳಲ್ಲಿ ಗುರುತಿನ ಚೀಟಿಗಳನ್ನು ಪರಿಶೀಲಾಗುತ್ತದೆ. ಎಣಿಕೆ ಕೊಠಡಿಯ ಬಳಿಯ ಒಳಗಿನ ಭದ್ರತಾ ಚೆಕ್‌ಪಾಯಿಂಟ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನಿಂಗ್ ಯಶಸ್ವಿಯಾದ ನಂತರವೇ, ಒಳಗೆ ಪ್ರವೇಶಿಸಲು ಅನುಮತಿಸಲಾಗುವುದು ಎಂದು ಅವರು ತಿಳಿಸಿದರು.

ರಿಟರ್ನಿಂಗ್, ಸಹಾಯಕ ರಿಟರ್ನಿಂಗ್ ಅಧಿಕಾರಿಗಳು, ಎಣಿಕೆ ಸಿಬ್ಬಂದಿ, ತಾಂತ್ರಿಕ ಸಿಬ್ಬಂದಿ, ಅಭ್ಯರ್ಥಿಗಳು, ಚುನಾವಣಾ ಏಜೆಂಟ್‌ಗಳು ಮತ್ತು ಎಣಿಕೆ ಏಜೆಂಟ್‌ಗಳಿಗೆ ಎಣಿಕೆ ಕೇಂದ್ರ ಪ್ರವೇಶಿಸಲು ಕ್ಯೂಆರ್ ಕೋಡ್ ಸಕ್ರಿಯಗೊಳಿಸಿದ ಕಾರ್ಡ್‌ಗಳನ್ನು ನೀಡಲಾಗುತ್ತದೆ ಎಂದು ಅವರು ಮಾಹಿತಿ ನೀಡಿದರು.

ಎಣಿಕೆ ಕಾರ್ಯದಲ್ಲಿ ಪಾರದರ್ಶಕತೆ, ಭದ್ರತೆ ಮತ್ತು ದಕ್ಷಣೆಯ ಮನದಂಡಗಳನ್ನು ಖಚಿತಪಡಿಸಿಕೊಳ್ಳುವ ಗುರಿಯನ್ನು ಇದು ಹೊಂದಿದೆ ಎಂದು ವಿವರಿಸಿದರು.

ಕೇರಳ, ತಮಿಳುನಾಡಿನಲ್ಲಿ ನಮಗೆ ಮೇಲುಗೈ: ಖರ್ಗೆ

ಪ್ರಜಾವಾಣಿ ವಾರ್ತೆ

ಕಲಬುರಗಿ: 'ತಮಿಳುನಾಡು, ಕೇರಳದಲ್ಲಿ ನಮ್ಮ ಮೈತ್ರಿಕೂಟ ಗೆಲ್ಲುತ್ತದೆ. ಅಸ್ಸಾಂನಲ್ಲಿ ನಮಗೆ ಕಡಿಮೆ ಸೀಟು ಬರುತ್ತೆ ಅಂತ ಮತದಾನೋತ್ತರ ಸಮೀಕ್ಷೆಗಳು ಹೇಳಿವೆ. ಆದರೆ, ಅವು ಹೇಳುವುದಕ್ಕಿಂತಲೂ ಹೆಚ್ಚು ಸ್ಥಾನ ಗೆಲ್ಲುತ್ತೇವೆ' ಎಂದು ಮಲ್ಲಿಕಾರ್ಜುನ ಖರ್ಗೆ ವಿಶ್ವಾಸ ವ್ಯಕ್ತಪಡಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಪಶ್ಚಿಮ ಬಂಗಾಳದಲ್ಲಿ ಟಿಎಂಸಿ ಮುನ್ನಡೆ ಸಾಧಿಸುತ್ತೆ ಎನ್ನುವ ಮಾಹಿತಿ ಸಿಕ್ಕಿದೆ. ಬಿಜೆಪಿ ಹಾಗೂ ಎನ್‌ಡಿಎ ಮೈತ್ರಿಕೂಟದವರು ದಬ್ಬಾಳಿಕೆ ಮಾಡಿ, ಹೆದರಿಸಿ ಟಿಎಂಸಿಗೆ ಟಕ್ಕರ್ ಕೊಡುವ ಕೆಲಸ ಮಾಡುತ್ತಿದ್ದಾರೆ. ಪಕ್ಷದ ಬೆಳವಣಿಗೆಯ ಹಿತದೃಷ್ಟಿಯಿಂದ ಇದೇ ಮೊದಲ ಸಲ ಕಾಂಗ್ರೆಸ್ ಪಶ್ಚಿಮ ಬಂಗಾಳದಲ್ಲಿ ಸ್ವತಂತ್ರವಾಗಿ ಸ್ಪರ್ಧಿಸಿದ್ದು, ಫಲಿತಾಂಶವು ಪಕ್ಷಕ್ಕೆ ಪೂರಕವಾಗಿ ಬರುವ ವಿಶ್ವಾಸವಿದೆ. ಪಶ್ಚಿಮ ಬಂಗಾಳದಲ್ಲಿ ಅತಂತ್ರ ವಿಧಾನಸಭೆ ನಿರ್ಮಾಣವಾದರೆ, ಟಿಎಂಸಿಗೆ ಕಾಂಗ್ರೆಸ್ ಬೆಂಬಲ ನೀಡಲಿದೆಯೇ' ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಮಲ್ಲಿಕಾರ್ಜುನ ಖರ್ಗೆ, 'ಇನ್ನೆರಡು ದಿನ ಕಾದರೆ ಫಲಿತಾಂಶದ ಸ್ಪಷ್ಟ ಚಿತ್ರಣ ಸಿಗಲಿದ್ದು, ಅಲ್ಲಿಯವರೆಗೂ ಕಾಯೋಣ. ಬಳಿಕ ಯೋಚಿಸೋಣ' ಎಂದರು.

ಚಾಣಕ್ಯ: ಪ.ಬಂ ಬಿಜೆಪಿ; ಕೇರಳ ಅತಂತ್ರ

ನವದೆಹಲಿ (ಪಿಟಿಐ): ನಾಲ್ಕು ರಾಜ್ಯಗಳ ವಿಧಾನಸಭಾ ಚುನಾವಣೆಯ ಮತದಾನೋತ್ತರ ಸಮೀಕ್ಷೆಯನ್ನು ಗುರುವಾರ ಪ್ರಕಟಿಸಿರುವ 'ಟುಡೇಸ್ ಚಾಣಕ್ಯ', ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಸರ್ಕಾರ ರಚಿಸಲಿದೆ ಎಂದಿದ್ದರೆ, ಕೇರಳದಲ್ಲಿ ತೀವ್ರ ಪೈಪೋಟಿ ಇದ್ದು, ಅತಂತ್ರ ಸ್ಥಿತಿ ನಿರ್ಮಾಣವಾಗಬಹುದು ಎಂದು ಭವಿಷ್ಯ ನುಡಿದಿದೆ. ಅಸ್ಸಾಂನಲ್ಲಿ ಬಿಜೆಪಿ ಮತ್ತು ತಮಿಳುನಾಡಿನಲ್ಲಿ ಡಿಎಂಕೆ ಮತ್ತೆ ಸರ್ಕಾರ ರಚಿಸಲಿವೆ ಎಂದು ಸಮೀಕ್ಷೆ ಹೇಳಿದೆ.

ಪ.ಬಂಗಾಳ (148)	
ಪಕ್ಷ	ಕ್ಷೇತ್ರ
ಟಿಎಂಸಿ	100
ಬಿಜೆಪಿ	192

ಅಸ್ಸಾಂ (64)	
ಪಕ್ಷ	ಕ್ಷೇತ್ರ
ಬಿಜೆಪಿ	102
ಕಾಂಗ್ರೆಸ್	23

ತಮಿಳುನಾಡು (118)	
ಪಕ್ಷ	ಕ್ಷೇತ್ರ
ಡಿಎಂಕೆ+	125
ಎಐಡಿಎಂಕೆ+	45
ಟಿವಿಕೆ	63

ಕೇರಳ (71)	
ಪಕ್ಷ	ಕ್ಷೇತ್ರ
ಎಲ್‌ಡಿಎಫ್	64
ಯುಡಿಎಫ್	69
ಬಿಜೆಪಿ	7

(ಆವರಣದಲ್ಲಿರುವುದು ಸರಳ ಬಹುಮತ)

"ಮತದಾನೋತ್ತರ ಸಮೀಕ್ಷೆಗಳು ಬಿಜೆಪಿ ಕಚೇರಿಯ ಸೂಚನೆಗಳ ಪಾಲನೆಯಾಗಿದ್ದು, ದೊಡ್ಡ ಪಿತೂರಿಯ ಭಾಗವಾಗಿವೆ. ಪಶ್ಚಿಮ ಬಂಗಾಳದಲ್ಲಿ ಟಿಎಂಸಿ 226 ಸ್ಥಾನಗಳಲ್ಲಿ ಗೆದ್ದು ಮತ್ತೆ ಸರ್ಕಾರ ರಚಿಸಲಿದೆ"
ಮಮತಾ ಬ್ಯಾನರ್ಜಿ, ಮುಖ್ಯಮಂತ್ರಿ, ಪಶ್ಚಿಮ ಬಂಗಾಳ

ಎಣಿಕೆ ಕಾರ್ಯ: ಕೇಂದ್ರದ ನೌಕರರ ನಿಯೋಜನೆ ಪ್ರಶ್ನಿಸಿ ಅರ್ಜಿ

ಕೋಲ್ಕತ್ತ (ಪಿಟಿಐ): ಚುನಾವಣಾ ಆಯೋಗವು ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯಲ್ಲಿ ಮತ ಎಣಿಕೆಗಾಗಿ ಕೇಂದ್ರ ಸರ್ಕಾರದ ನೌಕರರನ್ನು ಮಾತ್ರವೇ ಮೇಲ್ವಿಚಾರಕರನ್ನಾಗಿ ನಿಯೋಜಿಸಿರುವುದನ್ನು ಆಕ್ಷೇಪಿಸಿ ಕಲ್ಕತ್ತ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಲಾಗಿದೆ.

ವಿಧಾನಸಭಾ ಚುನಾವಣೆಗಳು ನಡೆದ ಇತರ ರಾಜ್ಯಗಳಲ್ಲಿ ಈ ರೀತಿಯ ನೇಮಕಾತಿಗಳನ್ನು ಆಯೋಗ ಮಾಡಿಲ್ಲ ಎಂದು ಅರ್ಜಿದಾರ ವಕೀಲ ಕಲ್ಯಾಣ್ ಬ್ಯಾನರ್ಜಿ ಹೇಳಿದ್ದಾರೆ. ಅಲ್ಲದೆ ಹೀಗೆ ಮಾಡಲು ಮುಖ್ಯ ಚುನಾವಣಾ ಅಧಿಕಾರಿ (ಸಿಇಒ) ಯಾವುದೇ ಅಧಿಕಾರ ವ್ಯಾಪ್ತಿಯನ್ನು ಹೊಂದಿಲ್ಲ ಎಂದು ಅರ್ಜಿಯಲ್ಲಿ ಉಲ್ಲೇಖಿಸಿದ್ದಾರೆ.

ಟಿಎಂಸಿ ಸಂಸದರೂ ಆಗಿರುವ ಬ್ಯಾನರ್ಜಿ ಅವರು, ಮಂಗಳವಾರ ಸಿಇಒ ಹೊರಡಿಸಿರುವ ಆದೇಶದ ಪ್ರಕಾರ, ಮತ ಎಣಿಕೆ ಮೇಲ್ವಿಚಾರಣಾ ಕಾರ್ಯದಿಂದ ರಾಜ್ಯ ಸರ್ಕಾರಿ ನೌಕರರನ್ನು ಹೊರಗಿಡಲಾಗಿದೆ ಎಂದು ಹೇಳಿದರು.

ಕೇಂದ್ರ ಸರ್ಕಾರವು ಎಣಿಕೆ ಕಾರ್ಯಕ್ಕೆ ಕೇಂದ್ರ ಸರ್ಕಾರಿ ನೌಕರರನ್ನು ನಿಯೋಜಿಸುವುದು ಕಾನೂನಿಗೆ ವಿರುದ್ಧವಾದ ಕ್ರಮವೇನೂ ಅಲ್ಲ ಎಂದು ಮುಖ್ಯ ಚುನಾವಣಾ ಆಯುಕ್ತರ ಪರ ವಕೀಲ ಜಿಷ್ಣು ಚೌಧರಿ ಪ್ರತಿಪಾದಿಸಿದರು. ಎರಡೂ ಕಡೆಯ ವಾದ, ಪ್ರತಿವಾದ ಆಲಿಸಿದ ನ್ಯಾಯಮೂರ್ತಿ ಕೃಷ್ಣರಾವ್ ಅವರು ಆದೇಶ ಕಾಯ್ದಿರಿಸಿದರು.

ಚಿಟಿಕೆ ಸುದ್ದಿ

'ಮತದಾನದ ಹಕ್ಕನ್ನು ಮೂಲಭೂತ ಹಕ್ಕನ್ನಾಗಿಸಿ'

ನವದೆಹಲಿ: 'ಮತದಾನದ ಹಕ್ಕನ್ನು ಮೂಲಭೂತ ಹಕ್ಕನ್ನಾಗಿಸಬೇಕು. ಯಾಕೆಂದರೆ, ಎಸ್‌ಐಆರ್ ಮೂಲಕ ನಿಜವಾದ ಮತದಾರರು ಮತದಾನ ಮಾಡದಂತೆ ತಡೆಯಲಾಗುತ್ತಿದೆ' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಗುರುವಾರ ಅಭಿಪ್ರಾಯಪಟ್ಟರು. ಪತ್ರಕರ್ತರೊಂದಿಗೆ ಮಾತನಾಡಿ, 'ಜ್ಞಾನೇಶ್ ಕುಮಾರ್ ಅವರಿಗೂ ಹಿಂದಿನ ಕೆಲವು ಮುಖ್ಯ ಚುನಾವಣಾ ಆಯುಕ್ತರ ಕಾಲದಿಂದಲೇ ಆಯೋಗವು ಕೊಳೆಯಲು ಆರಂಭಿಸಿತ್ತು. ಈ ಮನುಷ್ಯ ವಸ್ತುನಿಷ್ಠವಾಗಿಲ್ಲ. ಆದ್ದರಿಂದ ಮತದಾನದ ಹಕ್ಕಿಗೆ ಕುತ್ತು ಬಂದಿದೆ. ಮತದಾನ ಈಗ ಶಾಸನಬದ್ಧ ಹಕ್ಕು ಮಾತ್ರ. ಇದನ್ನು ಸಂವಿಧಾನಬದ್ಧ ಮೂಲಭೂತ ಹಕ್ಕನ್ನಾಗಿಸಲು ಇದು ಸೂಕ್ತ ಕಾಲ ಎಂದೆನಿಸುತ್ತದೆ' ಎಂದರು.

ಪಿಎಸಿ ಅಧ್ಯಕ್ಷರಾಗಿ ವೇಣುಗೋಪಾಲ್ ಮರು ನೇಮಕ

ಕೆ.ಸಿ.ವೇಣುಗೋಪಾಲ್

ನವದೆಹಲಿ (ಪಿಟಿಐ): ಕಾಂಗ್ರೆಸ್ ನಾಯಕ ಕೆ.ಸಿ.ವೇಣುಗೋಪಾಲ್ ಅವರನ್ನು 2026-27ರ ಸಾಲಿಗೆ ಸಂಸತ್ತಿನ ಸಾರ್ವಜನಿಕ ಲೆಕ್ಕಪತ್ರ ಸಮಿತಿಯ (ಪಿಎಸಿ) ಅಧ್ಯಕ್ಷರನ್ನಾಗಿ ಮರು ನೇಮಕ ಮಾಡಲಾಗಿದೆ. ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರು ಬಿಜೆಪಿ ನಾಯಕ ಬೈಜಯಂತ್ ಪಾಂಡಾ ಅವರನ್ನು ಸಾರ್ವಜನಿಕ ಉದ್ಯಮಗಳ ಸಮಿತಿಗೆ ಅಧ್ಯಕ್ಷರನ್ನಾಗಿ ನೇಮಕ ಮಾಡಿದ್ದಾರೆ. ಬಿಜೆಪಿಯ ಫಗ್ಗನ್ ಸಿಂಗ್ ಕುಲಸ್ತೆ ಅವರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಮಿತಿ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುವರು. ಅಧ್ಯಕ್ಷರ ಅಧಿಕಾರದ ಅವಧಿ 2026ರ ಮೇ 1ರಿಂದ 2027ರ ಏ.30ರ ವರೆಗೆ ಇರಲಿದೆ ಎಂದು ಅಧಿಸೂಚನೆ ತಿಳಿಸಿದೆ. ಡಿಎಂಕೆಯ ಟಿ.ಆರ್.ಬಾಲು, ಟಿಎಂಸಿಯ ಕಲ್ಯಾಣ್ ಬ್ಯಾನರ್ಜಿ, ಬಿಜೆಪಿಯ ರವಿಶಂಕರ್ ಪ್ರಸಾದ್, ತೇಜಸ್ವಿ ಸೂರ್ಯ, ಅನುರಾಗ್ ಠಾಕೂರ್, ಅಪರಾಜಿತಾ ಸಾರಂಗಿ ಸೇರಿ ಲೋಕಸಭೆಯ 15 ಸದಸ್ಯರು ಸಾರ್ವಜನಿಕ ಲೆಕ್ಕಪತ್ರ ಸಮಿತಿಯಲ್ಲಿದ್ದಾರೆ.

ಘೋಷಣೆಯಾಗಿ ಒಂದು ವರ್ಷವಾದರೂ ಆರಂಭವಾಗದ ಪ್ರಕ್ರಿಯೆ

ಜಾತಿಗಣತಿ ವಿಳಂಬಕ್ಕೆ ಮೋದಿ ಕಾರಣ: ಕಾಂಗ್ರೆಸ್

ನವದೆಹಲಿ (ಪಿಟಿಐ): ಜಾತಿಗಣತಿ ಹೇಗೆ ನಡೆಸಲಾಗುತ್ತದೆ ಎಂಬುದರ ಬಗ್ಗೆ ಕೇಂದ್ರ ಸರ್ಕಾರ ಇನ್ನೂ ಯಾವುದೇ ವಿವರಗಳನ್ನು ಬಿಡುಗಡೆ ಮಾಡಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿರುವ ಕಾಂಗ್ರೆಸ್, 'ಪ್ರಧಾನಿ ನರೇಂದ್ರ ಮೋದಿ ಅವರಿಗೆ ಈ ಪ್ರಕ್ರಿಯೆಯನ್ನು ವಿಳಂಬ ಮಾಡುವ ಉದ್ದೇಶವಿದೆ' ಎಂದು ಗುರುವಾರ ಆರೋಪಿಸಿದೆ.

ಈ ಕುರಿತು ಹೇಳಿಕೆ ನೀಡಿರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, 'ಇಂದಿಗೆ ಸರಿಯಾಗಿ ಒಂದು ವರ್ಷದ ಹಿಂದೆ, 'ಮುಂಬರುವ ಜನಗಣತಿಯಲ್ಲಿ ಜಾತಿಗಣತಿ ಕೂಡ ನಡೆಸಲಾಗುವುದು' ಎಂದು ಮೋದಿ ಸರ್ಕಾರ ಘೋಷಿಸಿತ್ತು. ಆದರೆ, ಅದರ ಬಗ್ಗೆ ವಿಪಕ್ಷಗಳು, ರಾಜ್ಯ ಸರ್ಕಾರಗಳು ಮತ್ತು ವಿಷಯ ತಜ್ಞರ ಜೊತೆ ಯಾವುದೇ ಮಾತುಕತೆ ನಡೆದಿಲ್ಲ' ಎಂದಿದ್ದಾರೆ.

'ಇದರ ಕುರಿತು 2025ರ ಮೇ 5ರಂದು ಕಾಂಗ್ರೆಸ್ ಅಧ್ಯಕ್ಷರು ಪ್ರಧಾನಿಗೆ ಪತ್ರ ಬರೆದಿದ್ದು, ಆ ಪತ್ರವನ್ನು ಅಂಗೀಕರಿಸಲಾಗಿಲ್ಲ. ಪತ್ರದಲ್ಲಿ ಎತ್ತಲಾದ ಎಲ್ಲಾ ಪ್ರಶ್ನೆಗಳು ಇಂದಿಗೂ ಪ್ರಸ್ತುತವಾಗಿವೆ. ಇತ್ತೀಚೆಗೆ ಮುಕ್ತಾಯವಾದ ಸಂಸತ್ತಿನ ವಿಶೇಷ ಅಧಿವೇಶನದ ನಂತರವಂತೂ ಅವು ಇನ್ನೂ ಹೆಚ್ಚು ಮಹತ್ವ ಪಡೆದುಕೊಂಡಿವೆ. ಅಲ್ಲಿ ಜಾತಿಗಣತಿ ವಿಳಂಬಗೊಳಿಸುವ ಉದ್ದೇಶ ಪ್ರಧಾನಿಯವರಿಗಿದೆ ಎಂಬುದು ಸ್ಪಷ್ಟವಾಯಿತು' ಎಂದು ಹೇಳಿದ್ದಾರೆ.

ಸಮಾಜದ ಹಿಂದುಳಿದವರು, ತುಳಿತಕ್ಕೊಳಗಾದವರು ಮತ್ತು ತಳ ವರ್ಗಗಳಿಗೆ ಅವರ ಹಕ್ಕುಗಳನ್ನು ನೀಡುವ ಜಾತಿಗಣತಿಯಂತಹ ಕಾರ್ಯ ನಡೆಸುವುದನ್ನು ವಿಭಜನೆ ಎಂದು ಪರಿಗಣಿಸಬಾರದು ಎಂದು ವಿನಂತಿಸಿ ಮಲ್ಲಿಕಾರ್ಜುನ ಖರ್ಗೆ ಅವರು 2025ರ ಮೇ 5ರಂದು ಪ್ರಧಾನಿಗೆ ಬರೆದ ಪತ್ರವನ್ನು ಜೈರಾಮ್ ಅವರು 'ಎಕ್ಸ್'ನಲ್ಲಿ ಹಂಚಿಕೊಂಡಿದ್ದಾರೆ.

ಮುಖ್ಯಾಂಶಗಳು

- ಜಾತಿಗಣತಿ ಪ್ರಕ್ರಿಯೆ: ಇನ್ನೂ ಬಿಡುಗಡೆಯಾಗದ ವಿವರಗಳು
- ವಿಪಕ್ಷಗಳು, ರಾಜ್ಯ ಸರ್ಕಾರಗಳ ಜೊತೆ ನಡೆಯದ ಮಾತುಕತೆ
- ಕಾಂಗ್ರೆಸ್ ಅಧ್ಯಕ್ಷರ ಪತ್ರಕ್ಕೂ ಉತ್ತರವಿಲ್ಲ

'ಪ್ರಧಾನಿಯ ಯೂಟರ್ನ್ ಕ್ರೊನಾಲಜಿ'

ಜಾತಿಗಣತಿ ಕುರಿತು ಪ್ರಧಾನ ಮಂತ್ರಿಯ ನಿಲುವು ನಾಟಕೀಯವಾಗಿ ಹೇಗೆಲ್ಲಾ ಬದಲಾಗಿದೆ ಎಂಬುದರ ಕಾಲಾನುಕ್ರಮವನ್ನು ಜೈರಾಮ್ ಅವರು ಕೆಳಗಿನಂತೆ 'ಎಕ್ಸ್'ನಲ್ಲಿ ನೆನಪಿಸಿಕೊಂಡಿದ್ದಾರೆ.

- 2021ರ ಜುಲೈ 21ರಂದು ಬಿಜೆಪಿ ಸಂಸದೆ ರಕ್ಷಾ ನಿಖಿಲ್ ಖಾಡ್ಸೆ (ಈಗ ಅವರು ಸಚಿವರು) ಕೇಳಿದ್ದ ಪ್ರಶ್ನೆಗೆ ಲೋಕಸಭೆಯಲ್ಲಿ ಉತ್ತರಿಸಿದ್ದ ಗೃಹ ಸಚಿವರು, 'ಜಾತಿಗಣತಿ ನಡೆಸದಿರುವುದು ಭಾರತ ಸರ್ಕಾರದ ನೀತಿ' ಎಂದು ತಿಳಿಸಿದ್ದರು
- 2021ರ ಸೆಪ್ಟೆಂಬರ್‌ನಲ್ಲಿ ಮೋದಿ ಸರ್ಕಾರವು ಸುಪ್ರೀಂ ಕೋರ್ಟ್‌ನಲ್ಲಿ ಅಫಿಡವಿಟ್ ಸಲ್ಲಿಸಿ, ಜಾತಿಗಣತಿ ನಡೆಸಲು ಕೋರ್ಟ್ ನೀಡುವ ಯಾವುದೇ ಆದೇಶವು ಸರ್ಕಾರದ ನೀತಿ ನಿರ್ಧಾರದಲ್ಲಿ

ಥಾಮಸ್ ಕಪ್ ಬ್ಯಾಡ್ಮಿಂಟನ್ ಕ್ವಾರ್ಟರ್‌ಫೈನಲ್ ಇಂದು

ಭಾರತಕ್ಕೆ ಚೀನಾ ತೈಪೆ ಎದುರಾಳಿ

ಹಾರ್ಸೆನ್ಸ್ (ಡೆನ್ಮಾರ್ಕ್), (ಪಿಟಿಐ): ಪ್ರತಿಷ್ಠಿತ ಥಾಮಸ್ ಕಪ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಎರಡನೇ ಸಲ ಪ್ರಶಸ್ತಿ ಗೆಲ್ಲುವ ಪ್ರಯತ್ನದಲ್ಲಿರುವ ಭಾರತ ತಂಡವು ಶುಕ್ರವಾರ ನಡೆಯಲಿರುವ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಚೀನಾ ತೈಪೆ ತಂಡವನ್ನು ಎದುರಿಸಲಿದೆ.

ಪುರುಷರ ವಿಭಾಗದ ಪ್ರಬಲ ತಂಡವನ್ನು ನಿರ್ಧರಿಸುವ ಈ ಟೂರ್ನಿಯಲ್ಲಿ ಭಾರತ 2022ರಲ್ಲಿ ಮೊದಲ ಬಾರಿ ಚಾಂಪಿಯನ್ ಆಗಿ ಗಮನ ಸೆಳೆದಿತ್ತು. ಈ ಸಲ ಭಾರತ 'ಎ' ಗುಂಪಿನಲ್ಲಿ ಎರಡನೇ ಸ್ಥಾನ ಗಳಿಸಿದೆ. ಚೀನಾ ತೈಪೆ ಇದುವರೆಗೆ ಚಾಂಪಿಯನ್ ಆಗಿಲ್ಲ.

ಭಾರತ ಗುಂಪು ಹಂತದಲ್ಲಿ ಕೆನಡಾ ತಂಡವನ್ನು 4-1 ರಿಂದ, ಆಸ್ಟ್ರೇಲಿಯಾ ತಂಡವನ್ನು 5-0 ಯಿಂದ ಸೋಲಿಸಿ ಅಮೋಘ ಆರಂಭ ಮಾಡಿತ್ತು. ಬುಧವಾರ ಕೊನೆಯ ಲೀಗ್ ಪಂದ್ಯದಲ್ಲಿ 2-3 ರಿಂದ ಚೀನಾ ಎದುರು ಸೋಲಿನ ಅನುಭವಿಸಿತ್ತು.

ವಿಶ್ವ ಕ್ರಮಾಂಕದಲ್ಲಿ ಆರನೇ ಸ್ಥಾನದಲ್ಲಿರುವ ಚೌ ಟಿಯೆನ್ ಚೆನ್ ನೇತೃತ್ವದ ಚೀನಾ ತೈಪೆ ತಂಡವೂ ಪ್ರಬಲವಾಗಿದೆ. ಚೌ ಜೊತೆಗೆ ಹಾಲಿ ಆಲ್ ಇಂಗ್ಲೆಂಡ್

ಭಾರತದ ಎಚ್.ಎಸ್. ಪ್ರಣಯ್

ಚಾಂಪಿಯನ್ ಲಿನ್ ಚುನ್-ಯಿ ಮತ್ತು ವಿಶ್ವದ 21ನೇ ಕ್ರಮಾಂಕದ ಆಟಗಾರ ಚಿ ಯು ಜೆನ್ ಅವರು ಸಿಂಗಲ್ಸ್‌ಗೆ ಬಲ ನೀಡಲಿದ್ದಾರೆ. ಚಿಯು ಸಿಯಾಗ್ ಚಿಯ ಮತ್ತು ವಾಂಗ್ ಚಿನ್ ಲಿನ್ ಜೋಡಿ ಡಬಲ್ಸ್ ವಿಶ್ವ ಕ್ರಮಾಂಕದಲ್ಲಿ 14ನೇ ಸ್ಥಾನದಲ್ಲಿದ್ದರೆ, ಲೀ ಜೇ ಹುಯಿ- ಯಾಂಗ್ ಪೊ ಸುವಾನ್ ಜೋಡಿ 16ನೇ ಸ್ಥಾನದಲ್ಲಿದೆ.

ಭಾರತ ತಂಡವೂ ಸ್ಫೂರ್ತಿಯುತವಾಗಿ ಆಡುತ್ತಿದೆ. ಸಿಂಗಲ್ಸ್ ಮತ್ತು ಡಬಲ್ಸ್‌ನಲ್ಲಿ ತಂಡ ಸಂಯೋಜನೆ ಉತ್ತಮವಾಗಿದೆ. ಇತ್ತೀಚೆಗೆ ಬ್ಯಾಡ್ಮಿಂಟನ್ ಏಷ್ಯಾ ಚಾಂಪಿಯನ್‌ಷಿಪ್‌ನಲ್ಲಿ ರನ್ನರ್ ಅಪ್ ಆಗಿದ್ದ ಯುವ ಆಟಗಾರ ಆಯುಷ್ ಶೆಟ್ಟಿ ಉತ್ತಮ ಲಯದಲ್ಲಿದ್ದಾರೆ. ಅನುಭವಿಗಳಾದ ಎಚ್.ಎಸ್.ಪ್ರಣಯ್ ಅವರು ಚೀನಾದ ಲು ಗುವಾಂಗ್ ಝು ವಿರುದ್ಧ ಬುಧವಾರ ನಡೆದ ಪಂದ್ಯದಲ್ಲಿ ಹಿನ್ನಡೆಯಿಂದ ಚೇತರಿಸಿ ಜಯಗಳಿಸಿದ್ದರು.

2022ರಲ್ಲಿ ಭಾರತ ಮೊದಲ ಬಾರಿ ಚಾಂಪಿಯನ್ ಆಗುವಲ್ಲಿ ಪ್ರಣಯ್ ಅವರ ಪಾತ್ರ ಪ್ರಮುಖವಾಗಿತ್ತು.

ಸಾತ್ವಿಕ್‌ಸಾಯಿರಾಜ್ ಮತ್ತು ಚಿರಾಗ್ ಶೆಟ್ಟಿ ಈ ಟೂರ್ನಿಯ ಮೊದಲ ಎರಡು ಪಂದ್ಯಗಳಲ್ಲಿ ಜಯಗಳಿಸಿದ್ದು, ಚೀನಾದ ಜೋಡಿಗೆ ಸೋಲುವ ಮೊದಲು ಪ್ರಬಲ ಪ್ರತಿರೋಧ ಒಡ್ಡಿದ್ದರು. ಐದು ಬಾರಿ 'ಮ್ಯಾಚ್ ಪಾಯಿಂಟ್' ರಕ್ಷಿಸಿಕೊಂಡಿದ್ದರು.

ಎರಡನೇ ಡಬಲ್ಸ್ ಜೋಡಿಯಾದ ಹರಿಹರನ್ ಅಮ್ಸಕರುಣ್- ಎಂ.ಆರ್. ಅರ್ಜುನ್ ಜೋಡಿ ಈ ಬಾರಿಯ ಲೀಗ್‌ನಲ್ಲಿ ಎರಡು ಪಂದ್ಯಗಳನ್ನು ಗೆದ್ದಿದೆ. ತಂಡವು ಸೆಮಿಫೈನಲ್ ತಲುಪಲು ನೆರವಾಗುವುದಕ್ಕೆ ಅವರೂ ಕಾತರರಾಗಿದ್ದಾರೆ.

ಕುಲ್ಲೇಟಿರ, ಚೆಪ್ಪುಡಿರ ಫೈನಲ್‌ಗೆ

ನಾಪೋಕ್ಲು (ಕೊಡಗು ಜಿಲ್ಲೆ): ಕುಲ್ಲೇಟಿರ ಮತ್ತು ಚೆಪ್ಪುಡಿರ ತಂಡಗಳು ಇಲ್ಲಿನ ಜನರಲ್ ಕೆ.ಎಸ್.ತಿಮ್ಮಯ್ಯ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಚೇನಂಡ ಕೊಡವ ಕೌಟುಂಬಿಕ ಹಾಕಿ ಟೂರ್ನಿಯಲ್ಲಿ ಫೈನಲ್ ಪ್ರವೇಶಿಸಿವೆ. ಫೈನಲ್ ಪಂದ್ಯ ಶನಿವಾರ ನಡೆಯಲಿದೆ.

ಗುರುವಾರ ನಡೆದ ಸೆಮಿಫೈನಲ್ಸ್ ಪಂದ್ಯಗಳಲ್ಲಿ ಚೆಪ್ಪುಡಿರ ತಂಡವು 4-3ರ ಅಂತರದಿಂದ ಪರದಂಡ ತಂಡವನ್ನು ಮಣಿಸಿತು. ಮತ್ತೊಂದು ಸೆಮಿಫೈನಲ್ಸ್ ಪಂದ್ಯವು ಪಳಂಗಡ-ಕುಲ್ಲೇಟಿರ ನಡುವೆ ರೋಚಕವಾಗಿ ನಡೆಯಿತು. ಈ ತಂಡಗಳು ತಲಾ 2 ಗೋಲು ಗಳಿಸಿ ಸಮಬಲ ಸಾಧಿಸಿದವು. ಅಂತಿಮವಾಗಿ ಟೈಬ್ರೇಕರ್‌ನಲ್ಲಿ 2-1ರಿಂದ ಕುಲ್ಲೇಟಿರ ಗೆದ್ದು ಫೈನಲ್ ಕದ ತಟ್ಟಿತು.

ಮಹಿಳಾ 5ಎ ಹಾಕಿ; ಕೇಚೆಟ್ಟಿರ ಚಾಂಪಿಯನ್: ಕಂಬೀರಂಡ- ಕೇಚೆಟ್ಟಿರ ತಂಡಗಳ ನಡುವೆ ನಡೆದ ಮಹಿಳಾ 5ಎ ಹಾಕಿ ಟೂರ್ನಿಯ ಫೈನಲ್ ಪಂದ್ಯವೂ ರೋಚಕವಾಗಿತ್ತು. ಟೈಬ್ರೇಕರ್‌ನಲ್ಲಿ ಕೇಚೆಟ್ಟಿರ 2-1ರಿಂದ ಗೆಲುವು ಸಾಧಿಸಿ ಚಾಂಪಿಯನ್ ಆಗಿ ಹೊರಹೊಮ್ಮಿತು.

ಇನ್ನಷ್ಟು ಕ್ರೀಡಾ ಸುದ್ದಿ 4D

ಟಿ.ಟಿ: ಸ್ಲೊವಾಕಿಯಾಕ್ಕೆ ಸೋಲುಣಿಸಿದ ಭಾರತ

ಲಂಡನ್ (ಪಿಟಿಐ): ಹಿನ್ನಡೆಯಿಂದ ಚೇತರಿಸಿಕೊಂಡ ಭಾರತ ಪುರುಷರ ತಂಡ ಐಟಿಟಿಎಫ್ ವಿಶ್ವ ಟೀಮ್ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್ಸ್‌ನ ಏಳನೇ ಗುಂಪಿನಲ್ಲಿ ಬುಧವಾರ ಸ್ಲೊವಾಕಿಯಾ ತಂಡವನ್ನು 3-2 ರಿಂದ ಸೋಲಿಸಿತು.

ಈ ಗೆಲುವಿನೊಂದಿಗೆ ಭಾರತ ಗುಂಪಿನಲ್ಲಿ ಅಗ್ರಸ್ಥಾನವನ್ನು ಬಲಪಡಿಸಿಕೊಂಡಿತು. ಭಾರತ ತನ್ನ ಮುಂದಿನ ಗುಂಪು ಪಂದ್ಯವನ್ನು ಗ್ವಾಟೆಮಾಲಾ ವಿರುದ್ಧ ಆಡಲಿದೆ.

ವಿಶ್ವ ಕ್ರಮಾಂಕದಲ್ಲಿ 149ನೇ ಸ್ಥಾನದಲ್ಲಿರುವ ಲುಬೊಮಿರ್ ಪಿಸ್ಟೆಜ್ ಅವರು 51ನೇ ಸ್ಥಾನದಲ್ಲಿರುವ ಮಾನುಷ್ ಶಾ ಅವರನ್ನು ಸೋಲಿಸಿದರು. ಐದು ಗೇಮ್‌ಗಳ ಪಂದ್ಯವನ್ನು ಲುಬೊಮಿರ್ 11-8, 5-11, 8-11, 11-5, 11-6 ರಲ್ಲಿ ಗೆದ್ದು ಸ್ಲೊವಾಕಿಯಾಕ್ಕೆ ಮುನ್ನಡೆ ಒದಗಿಸಿದರು.

ಆದರೆ, ಭಾರತದ ಅಗ್ರ ಆಟಗಾರ, 42ನೇ ಕ್ರಮಾಂಕದ ಮಾನವ್ ಠಕ್ಕರ್ ಎರಡನೇ ಸಿಂಗಲ್ಸ್ ಪಂದ್ಯದಲ್ಲಿ ಜಾಕೊಬ್ ಝೆಲಿಂಕಾ ಅವರನ್ನು 11-6, 11-8, 11-6 ರಿಂದ ಸೋಲಿಸಿದ್ದರಿಂದ ಸ್ಕೋರ್ 1-1ರಲ್ಲಿ ಸಮನಾಯಿತು.

ಆದರೆ ಸ್ಲೊವಾಕಿಯಾ ಮತ್ತೆ ಮುನ್ನಡೆಯಿತು. ವಾಂಗ್ ಯಾಂಗ್ ಕರಾರುವಾಕ್ ಆಟವಾಡಿ 16-14, 11-5, 11-9 ರಿಂದ ಹಮ್ಮೀತ್ ದೇಸಾಯಿ ಅವರನ್ನು ಮಣಿಸಿದರು. ಮಾನವ್ ಠಕ್ಕರ್ ಮರು ಸಿಂಗಲ್ಸ್‌ನಲ್ಲಿ 11-3, 11-3, 11-3 ರಿಂದ ಲುಬೊಮಿರ್ ಅವರನ್ನು ಸೋಲಿಸಿದರು. ಸ್ಕೋರ್ 2-2 ಸಮವಾಯಿತು.

ಮಾನುಷ್ ಅವರು 11-8, 11-8, 11-7 ರಿಂದ ಜಾಕೊಬ್ ಅವರನ್ನು ಸೋಲಿಸಿ ಭಾರತದ 3-2 ಗೆಲುವಿಗೆ ಕಾರಣರಾದರು.

ಮಹಿಳಾ ತಂಡ ಮುನ್ನಡೆ: ಭಾರತ ಮಹಿಳಾ ತಂಡ 3-2 ರಿಂದ ಉಕ್ರೇನ್ ತಂಡವನ್ನು ಸೋಲಿಸಿ ಆರನೇ ಗುಂಪಿನಲ್ಲಿ ತನ್ನ ಸ್ಥಾನವನ್ನು ಬಲಪಡಿಸಿಕೊಂಡಿತು.

ರಾಷ್ಟ್ರೀಯ ಕುಸ್ತಿ: ರಾಜ್ಯದ ಹನುಮಂತಗೆ ಚಿನ್ನ



ಸಂಭಾಜಿನಗರ (ಮಹಾರಾಷ್ಟ್ರ), (ಪಿಟಿಐ): ಕರ್ನಾಟಕದ ಹನುಮಂತ ವಿಠ್ಠಲ ಕೆಂಪಣ್ಣನವರ್ ಅವರು ಇಲ್ಲಿ ಗುರುವಾರ ಮುಕ್ತಾಯಗೊಂಡ ರಾಷ್ಟ್ರೀಯ 17 ವರ್ಷದೊಳಗಿನವರ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಗೆದ್ದರು.

ಬಾಗಲಕೋಟೆಯ ಹನುಮಂತ 92 ಕೆ.ಜಿ. ಗ್ರೀಕೊ ರೋಮನ್ ವಿಭಾಗದಲ್ಲಿ ಚಾಂಪಿಯನ್ ಆಗಿದ್ದಾರೆ.

ದಾವಣಗೆರೆಯ ಕ್ರೀಡಾ ಹಾಸ್ಟೆಲ್‌ನಲ್ಲಿ ವಿನೋದ್ ಕುಮಾರ್ ಅವರಿಂದ ತರಬೇತಿ ಪಡೆಯುತ್ತಿದ್ದಾರೆ. ತಂದೆ ವಿಠ್ಠಲ ಕೆಂಪಣ್ಣನವರ್ ಸಹ ಕುಸ್ತಿಪಟುವಾಗಿದ್ದು, ಕರ್ನಾಟಕ ಕೇಸರಿ ಪ್ರಶಸ್ತಿ ಪಡೆದಿದ್ದರು.

ಬ್ಯಾಡ್ಮಿಂಟನ್: ವೈಭವ್‌ಗೆ ಪ್ರಶಸ್ತಿ 'ಡಬಲ್'

ಬೆಂಗಳೂರು: ಬೆಂಗಳೂರು ನಗರ ಜಿಲ್ಲೆಯ ವೈಭವ್ ರಾವ್ ಎನ್. ಹಾಗೂ ಶ್ರೀಯಾ ಎ. ರಾವ್ ಅವರು ಗುರುವಾರ ಮುಕ್ತಾಯವಾದ 11 ಮತ್ತು 13 ವರ್ಷದೊಳಗಿನವರ ರಾಜ್ಯ ರ‍್ಯಾಂಕಿಂಗ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಕ್ರಮವಾಗಿ 13 ವರ್ಷದೊಳಗಿನ ಬಾಲಕ ಮತ್ತು ಬಾಲಕಿಯರ ಸಿಂಗಲ್ಸ್ ಪ್ರಶಸ್ತಿ ಗೆದ್ದುಕೊಂಡರು.

ಅಗ್ರ ಶ್ರೇಯಾಂಕದ ಆಟಗಾರ ವೈಭವ್, ನಗರದ ಸ್ಪಾರ್ಕ್ ಸೆವೆನ್ ಸ್ಪೋರ್ಟ್ಸ್ ಅರೆನಾದಲ್ಲಿ ನಡೆದ ಬಾಲಕರ ಫೈನಲ್‌ನಲ್ಲಿ 21-12, 21-11 ರಿಂದ ನೇರ ಆಟಗಳಲ್ಲಿ ಜ್ವಾನ್ ರಿಷಿಕ್ ಬಿ. ವಿರುದ್ಧ ಗೆದ್ದರು. ನಂತರ ನಡೆದ ಡಬಲ್ಸ್‌ನಲ್ಲಿ ಮನ್ವಿತ್ ಎಂ. ಆದೇಶ್ ಜೊತೆಗೆ ಪ್ರಶಸ್ತಿ ಮುಡಿಗೇರಿಸಿಕೊಂಡರು. ಈ ಜೋಡಿ, ಪ್ರಶಸ್ತಿ ಸುತ್ತಿನಲ್ಲಿ 21-7, 21-15 ರಿಂದ ಗುಣ ಆದಿತ್ಯ ಪಿ.- ಪ್ರಥಮ್ ಸಂದೀಪ್ ಬಿ. ಅವರನ್ನು ಮಣಿಸಿತು.

ಶ್ರೀಯಾ ಅವರು 13 ವರ್ಷದೊಳಗಿನ ಬಾಲಕಿಯರ ಸಿಂಗಲ್ಸ್ ಫೈನಲ್‌ನಲ್ಲಿ 17-21, 21-16, 21-7 ರಿಂದ ಅಗ್ರ ಶ್ರೇಯಾಂಕದ ಆಟಗಾರ್ತಿ, ಹಾಸನದ ಸಿಹಿ ಆದರ್ಶ್ ಅವರಿಗೆ ಆಘಾತ ನೀಡಿದರು. ಡಬಲ್ಸ್‌ನಲ್ಲಿ ದಕ್ಷಿಣ ಕನ್ನಡದ ಶಾನ್ವಿ ಪಿ.ಎನ್.- ಶಾಂಭವಿ ಶರ್ಮಾ ಜೋಡಿ ಚಾಂಪಿಯನ್ ಆಯಿತು. ಈ ಜೋಡಿ ಫೈನಲ್ ಹಣಾಹಣಿಯಲ್ಲಿ 21-11, 21-18 ರಿಂದ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹನ್ವಿತಾ ಕೆ.ಎ. ಹಾಗೂ ಸ್ತುತಿ ಎಸ್. ಶೆಟ್ಟಿ ಅವರನ್ನು ಸೋಲಿಸಿತು.

ರೆಯಾನ್ಸ್‌ಗೆ ಪ್ರಶಸ್ತಿ: 11 ವರ್ಷದೊಳಗಿನ ಬಾಲಕರ ಸಿಂಗಲ್ಸ್‌ನಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ರೆಯಾನ್ಸ್ ರಿಷಿಕ್ ಎಸ್.ವೈ. ಚಾಂಪಿಯನ್ ಆದರು. ಅವರು ಪ್ರಶಸ್ತಿ ಸುತ್ತಿನಲ್ಲಿ 21-11, 21-15 ರಿಂದ ತಮ್ಮ ಜಿಲ್ಲೆಯವರೇ ಆದ ಅಥರ್ವ ಸಾಹೂ ವಿರುದ್ಧ ನಿರಾಯಾಸವಾಗಿ ಗೆಲುವು ಸಾಧಿಸಿದರು.

ಇವರಿಬ್ಬರು ಡಬಲ್ಸ್‌ನಲ್ಲಿ ಜೊತೆಗೂಡಿ ಕಿರೀಟ ತಮ್ಮದಾಗಿಸಿಕೊಂಡರು. ಫೈನಲ್‌ನಲ್ಲಿ 21-15, 21-12 ರಿಂದ ನಿಹಾನ್ ಮಂದಣ್ಣ ಹಾಗೂ ಸಾತ್ವಿಕ್ ಶ್ರೀಧರ್ ರೆಡ್ಡಿ ಅವರನ್ನು ಸೋಲಿಸಿದರು.

11 ವರ್ಷದೊಳಗಿನ ಬಾಲಕಿಯರ ಸಿಂಗಲ್ಸ್‌ನಲ್ಲಿ ಅಗ್ರ ಶ್ರೇಯಾಂಕದ ಆಟಗಾರ್ತಿ ಜ್ಯೋತ್ಸ್ನಾ ವಿನೋದ್ ಟ್ರೋಫಿ ಜಯಿಸಿದರು. ಅವರು ಪ್ರಶಸ್ತಿ ಸುತ್ತಿನಲ್ಲಿ 21-7, 21-7 ರಿಂದ ಕೃಪಸ್ಯಾ ಅಮಿತ ರೆಡ್ಡಿ ವಿರುದ್ಧ ಸುಲಭವಾಗಿ ಗೆದ್ದರು. ಡಬಲ್ಸ್‌ನಲ್ಲಿ ಕೊಡಗಿನ ಶನಾಯ ವಿ.ಎಸ್.- ಯುವಿಕಾ ಟಿ. ಜೋಡಿ ಪ್ರಶಸ್ತಿ ಗೆಲ್ಲಲು ಹರಸಾಹಸ ಪಡಬೇಕಾಯಿತು. ಫೈನಲ್‌ನಲ್ಲಿ ಈ ಜೋಡಿ 21-19, 16-21, 22-20 ರಿಂದ ಜ್ಯೋತ್ಸ್ನಾ- ಕ್ರಿಪಾ ಸಿಂಘದೇವ್ ವಿರುದ್ಧ ರೋಚಕ ಜಯ ಸಾಧಿಸಿತು.

TITAN EYE+
A TATA Enterprise
ಒಂದು ಖರೀದಿಸಿ
ಪಡೆಯಿರಿ ಇನ್ನೊಂದು ಉಚಿತ
ಟೈಟಾನ್ ಮತ್ತು ಫಾಸ್ಟ್ರ್ಯಾಕ್ ಕನ್ನಡಕಗಳಲ್ಲಿ.
#frameover ಪಡೆಯಲು ಅದ್ಭುತ ಕಾರಣ
*T&C apply
ಹತ್ತಿರದ ಸ್ಟೋರ್ ಎಲ್ಲಿದೆ ನೋಡಿ
ಉಚಿತ ನಿಖರ ಕಣ್ಣಿನ ಪರೀಕ್ಷೆ
www.titaneyeplus.com ಮತ್ತು ಭಾರತದಾದ್ಯಂತ 900+ ಸ್ಟೋರ್‌ಗಳಲ್ಲಿ ಶಾಪಿಂಗ್ ಮಾಡಿ

Reliance Growth is Life
digital PERSONALISING TECHNOLOGY
ಚಿಲ್ ಫೆಸ್ಟ್
₹30000 ವರೆಗೆ ಕ್ಯಾಶ್‌ಬ್ಯಾಕ್* ಪೇಪರ್ ಫೈನಾನ್ಸ್ ಮೇಲೆ*
₹20000 ವರೆಗೆ ತ್ವರಿತ ರಿಯಾಯಿತಿ* ಪ್ರಮುಖ ಬ್ಯಾಂಕ್ ಕಾರ್ಡ್ ಗಳ ಮೇಲೆ
ಉಚಿತ ಡೆಲಿವರಿ & ತ್ವರಿತ ಇನ್ಸ್ಟಾಲೇಷನ್* AC @ ₹1*
www.reliancedigital.in
NOW OPEN AT BOMMASANDRA, HOSUR ROAD
LOWEST-EVER AC PRICES*
1T INVERTER ACs — STARTING FROM ₹17990* — EMI OF ₹49* PER DAY
1.5T INVERTER ACs — STARTING FROM ₹18990* — EMI OF ₹49* PER DAY
2T INVERTER ACs — STARTING FROM ₹38990* — EMI OF ₹109* PER DAY
BPL Godrej Hisense Kelvinator TCL
*Prices after cashback & under exchange
KELVINATOR INVERTER 1.5T AC — digital JUST ARRIVED — • 4-way swing — EMI of ₹79* Per Day — 3 STAR — BENEFITS AC Bracket worth ₹899/-* at ₹499/-*
VOLTAS INVERTER 1.5T AC — digital JUST ARRIVED — • 6 Step Adjustable Cooling Modes • 4-way swing — EMI of ₹89* Per Day — 3 STAR — BENEFITS • 5 years Comprehensive warranty* • AC Bracket worth ₹899/-* at ₹499/-*
LG INVERTER 1.5T AC — digital JUST ARRIVED — • 6-In-1 AI Convertible • Diet Mode+ • Viraat Mode — EMI of ₹89* Per Day — 3 STAR — BENEFITS • 4 years PCB Warranty • AC Bracket worth ₹899/-* at ₹499/-*
SAMSUNG INVERTER 1.5T AC — digital JUST ARRIVED — • WindFree Cooling • D5-step Convertible Mode — EMI of ₹109* Per Day — 4 STAR — BENEFITS • 5 years Comprehensive warranty* • AC Bracket worth ₹899/-* at ₹499/-*
BUY MORE SAVE MORE — KITCHEN | HOME | PERSONAL GROOMING — GET UP TO 15% OFF*
PERSONAL COOLER Starting from ₹5790*
DESERT COOLER Starting from ₹8490*
TOWER COOLER Starting from ₹9990*
BAJAJ HAVELLS KENSTAR orient electric Symphony VOLTAS USHA
REFRIGERATORS STARTING FROM ₹12490*
SIDE BY SIDE Starting from ₹39990* EMI of ₹2999*
DOUBLE DOOR Starting from ₹19990* EMI of ₹1490*
BENEFITS • Havells Air Fryer worth ₹7499 at ₹1499* • boAt Soundbar worth ₹3490 at ₹499*
JOIN OUR WHATSAPP CHANNEL FOR THE LATEST TECH UPDATES
CONSUMER DURABLE LOANS — BAJAJ FINANCE — IDFC FIRST Bank CONSUMER DURABLE LOAN — HDB FINANCIAL SERVICES — TVS CREDIT
BLUE STAR BOSCH BPL Carrier DAIKIN Electrolux Godrej Haier Hisense HITACHI IFB LLOYD LG LIEBHERR Kelvinator GENERAL Panasonic TCL VOLTAS SAMSUNG Whirlpool
SCAN TO VISIT WEBSITE OR STORE
ಇಲ್ಲಿ ಕೂಡ ಶಾಪಿಂಗ್ ಮಾಡಿ — SHOP ANY ELECTRONICS AT MY JIO STORE — Jio DIGITAL LIFE
Terms & Conditions: Unless specified, the retail prices shown are for 1 unit of the product. Up to ₹20,000* Instant Discount – Up to ₹20,000 Instant Discount with leading banks cards on purchase of select products & brands only. Offer valid till 31st May 2026. Offer is applicable across Reliance digital, My Jio Stores & Jiomart Signature stores. Upto ₹30,000 Cashback with IDFC First Bank: Cashback applicable on AC, Ref, Panel, WM, Dishwasher, Phone & Laptop. Offer validity from 01st Apr to 31st May'26. Offer applicable on Mobile, Laptop, Tablet, Desktop, Watch, PSP, Printer, Headphone, Camera, DSLR & Camera Lens. Upto ₹11,000 Cashback with TVS: Cashback applicable on AC & Ref . Cashback applicable from 01st Mar – 30th June'26. Cashback applicable on AC & Ref. All Paper finance offers are available on select brands / products/ Schemes & select customers. o ffer valid in select states/cities. For more details contact In-store finance executive. For Paper Finance, benefit shall be given to the customer in form of cashback which shall be posted by respective financier as per their terms. Please visit the website/store and read the detailed T&Cs. Reliance Retail reserves its right to amend, withdraw/modify the offers at any point of time without any notice. All disputes are subject to jurisdiction of Courts in Mumbai only.